ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನ

ಅರ್ಥಶಾಸ್ತ್ರದಲ್ಲಿ ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕ
ಸಿ. ಅಶೋಕ

ಮಾರ್ಗದರ್ಶಕರು
ಪ್ರೊ. ಬಿ. ಶೇಷಾದ್ರಿ

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ - ೫೮೩ ೨೨೧

ಸೆಪ್ಟೆಂಬರ್-೧೯೯೭

ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನ

ಅರ್ಥಶಾಸ್ತ್ರದಲ್ಲಿ ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕ
ಸಿ. ಅಶೋಕ

ಮಾರ್ಗದರ್ಶಕರು
ಪ್ರೊ. ಬಿ. ಶೇಷಾದ್ರಿ

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ - ೫೮೩ ೨೭೧

ಸೆಪ್ಟೆಂಬರ್-೧೯೯೭

ಪ್ರಮಾಣ ಪತ್ರ

"ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನ" ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಅರ್ಥಶಾಸ್ತ್ರದಲ್ಲಿ ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರೊ.ಬಿ.ಶೇಷಾದ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ದಿನಾಂಕ:೨೦ -೦೯ - ೧೯೯೭
ಸ್ಥಳ:ವಿದ್ಯಾರಣ್ಯ

ಸಿ.ಅಶೋಕ
ಎಂ.ಫಿಲ್. ವಿದ್ಯಾರ್ಥಿ
ಅಭಿವೃದ್ಧಿಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

ಶ್ರೀ ಸಿ.ಅಶೋಕ ಅವರು "ಹರಪನಹಳ್ಳಿ ತಾಲ್ಲೂಕಿನ ಅರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನ" ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಅರ್ಥಶಾಸ್ತ್ರದಲ್ಲಿ ಎಂ.ಫಿಲ್ .ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಅಥವಾ ಯಾವುದೇ ಭಾಗವನ್ನು ಶ್ರೀ ಅಶೋಕ ಅವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ಬಿ.ಶೇಷಾದ್ರಿ

ಪ್ರೊ. ಬಿ.ಶೇಷಾದ್ರಿ
ಮುಖ್ಯಸ್ಥರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ:೨೦ -೦೯ ೧೯೯೭
ಸ್ಥಳ:ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ, ಮಾನ್ಯ ಕುಲಸಚಿವರುಗಳಿಗೆ,

''ದಲಿತ ಸಂಸ್ಕೃತಿ ಅಧ್ಯಯನ ಪೀಠ''ದಲ್ಲಿ ವಿಶೇಷವಾಗಿ ದಲಿತ ವಿದ್ಯಾರ್ಥಿಗೆ ಎಂ.ಫಿಲ್. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಕನ್ನಡ ವಿಶ್ವವಿದ್ಯಾಲಯಕ್ಕೆ ಹಾಗೂ ದಲಿತ ಸಂಸ್ಕೃತಿ ಪೀಠದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ,

ಅಧ್ಯಯನ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಮಾರ್ಗದರ್ಶನ ನೀಡಿದ ಪ್ರೊ. ಬಿ.ಶೇಷಾದ್ರಿ, ಮುಖ್ಯಸ್ಥರು, ಅಭಿವೃದ್ಧಿ ಅಧ್ಯಯನ ವಿಭಾಗ ಅವರಿಗೆ,

ಅಧ್ಯಯನದ ಅವಧಿಯಲ್ಲಿ ಪೂರಕ ಅಂಶಗಳನ್ನು ನೀಡಿ ಸಹಕರಿಸಿದ ಹಾಗೂ ನನ್ನ ಬರವಣಿಗೆಯನ್ನು ತಿದ್ದಿ-ತೀಡಿ ಪ್ರೋತ್ಸಾಹಿಸಿದ ಅಧ್ಯಾಪಕರುಗಳಾದ ಟಿ. ಆರ್. ಚಂದ್ರಶೇಖರ್ ಹಾಗೂ ಡಾ.ಶೌಕತ್ ಅಝೀಮ್ ಅವರುಗಳಿಗೆ,

ಮಹಿಳಾ ಅಧ್ಯಯನದ ಅವಶ್ಯಕತೆಯನ್ನು ಬೋಧಿಸಿ ನನ್ನ ಅಧ್ಯಯನಕ್ಕೆ ಹೊಸ ಆಯಾಮ ಒದಗಿಸಿದ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರುಗಳಾದ ಡಾ. ಸತ್ಯನಾಥ್, ಡಾ. ಶಿವರಾಮ ಪಡಿಕ್ಕಲ್, ಡಾ.ಮೈತ್ರಿ ಕಾಮಣ್ಣ, ಡಾ. ಮಂಜುನಾಥ ಬೇವಿನಕಟ್ಟಿ ಅವರುಗಳಿಗೆ,

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಿಂದ ಸಹಕರಿಸಿದ ಅಧ್ಯಾಪಕರುಗಳಾದ ಪ್ರೊ. ಲಕ್ಷ್ಮಣ ತೆಲಗಾವಿ, ಪ್ರೊ. ಪುರುಷೋತ್ತಮ ಬಿಳಿಮಲೆ, ಡಾ. ರಹಮತ್ ತರೀಕೆರೆ, ಡಾ.ಗೋವಿಂದರಾಜು, ಬಿ.ಎಂ. ಪುಟ್ಟಯ್ಯ, ಚಲುವರಾಜು, ಡಾ.ಟಿ.ಪಿ. ವಿಜಯ್, ಮೋಹನ್ ಕೃಷ್ಣರೈ, ಎಚ್.ಡಿ. ಪ್ರಶಾಂತ್, ಮಾಧವ ಪೆರಾಜೆ, ಎ.ಎಸ್ .ಪ್ರಭಾಕರ್, ಶಿವಾನಂದ ವಿರಕ್ತಮಠ, ಡಾ. ಚಂದ್ರಪೂಜಾರ್, ಸಿ. ವೆಂಕಟೇಶ, ಶ್ರೀಮತಿ ಸಿದ್ಧಗಂಗಮ್ಮ, ಶ್ರೀಧರ, ಛಾಯಾ ಗ್ರಾಹಕರಾದ ಗಣೇಶ ಯಾಜಿ, ಮತ್ತು ಇತರರಿಗೆ, .

ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದ ಮುಖ್ಯಸ್ಥರು ಮತ್ತು ಸಿಬ್ಬಂದಿಯವರಿಗೆ,

ನನ್ನ ಅಭ್ಯಾಸಕ್ಕೆ ಸದಾ ಪ್ರೋತ್ಸಾಹ ನೀಡುತ್ತಿರುವ ಪ್ರೊ. ಜಿ. ಬಸವಂತಪ್ಪ, ವಿರೂಪಾಕ್ಷಪ್ಪ, ಸೀತಾರಾಮ ರಾರೋಡ, ಲಕ್ಷ್ಮಣ ಘಂಟಿ, ಎಂ. ದ್ಯಾಮಪ್ಪ, ಹಿರೇಮಠ, ಡಿ.ಬಿ. ಬಡಿಗೇರ, ಕೆ.ಕೊಟ್ರಪ್ಪ, ಬಿ.ಪರಶುರಾಂ, ಇಸ್ಮಾಯಿಲ್ ಎಲಿಗಾರ್ , ಶ್ರೀಮತಿ ಅಮಿರುನಿನ್ನೀಸಾ, ಶ್ರೀಮತಿ ಜಾನ್ಹವಿ, ಗಾಯತ್ರಿ ಟಿ.ಎಚ್. ಮತ್ತು ಇತರರಿಗೆ,

ನನ್ನ ಆತ್ಮೀಯ ಮಿತ್ರರಾದ ಹೆಚ್ . ರಹಮತ್ , ಮಹಮದ್ ಆಲಿ, ವಿ.ಬಿ. ಮಲ್ಲಪ್ಪ, ಎಚ್. ಎಂ. ಗೌಸ್ , ಹೊಸಳ್ಳಿ ಮಲ್ಲೇಶ್ , ರಾಜಶೇಖರ್ ಪೂಜಾರ್ , ಮಂಜು, ಎಸ್ . ಗಿರೀಶ್ ಇನ್ನು ಮೊದಲಾದವರುಗಳಿಗೆ,

ನನ್ನ ಅಧ್ಯಯನದ ಕೇಂದ್ರ ವಸ್ತುವಾಗಿರುವ ಮಹಿಳಾ ಕೃಷಿ ಕಾರ್ಮಿಕ ಮಾಹಿತಿದಾರರಾದ ಶ್ರೀಮತಿ ನಾಗಮ್ಮ, ಶ್ರೀಮತಿ ಚೌಡಮ್ಮ, ಶ್ರೀಮತಿ ಮಲ್ಲವ್ವ, ಶ್ರೀಮತಿ ಚಂದ್ರಮ್ಮ, ಶ್ರೀಮತಿ ರತ್ನಮ್ಮ ಮೊದಲಾದವರಿಗೆ,

ಅಧ್ಯಯನಕ್ಕೆ ಅಂಕಿ-ಅಂಶಗಳ ಸಹಕಾರ ನೀಡಿದ ಸಾಂಖ್ಯಿಕ ಅಧಿಕಾರಿಗಳಾದ ನಾಗರಾಜ ಹಾಗೂ ಚನ್ನಬಸಯ್ಯ ಶಾಸ್ತ್ರಿಗಳಿಗೆ, ವಿದ್ಯಾರಣ್ಯ ಅವರಣದೊಳಗಿನ ಸಂಶೋಧನ ಸ್ನೇಹಿತರಾದ ಜೆ. ಕೃಷ್ಣ, ವೆಂಕಟೇಶ ಪಾಟೀಲ, ಶ್ರೀನಿವಾಸ, ಐ.ಜಿ. ಮ್ಯಾಗೇರಿ, ಈಚನಾಳ, ಕೀರ್ತಿನಾಥ್, ಗುರುಬಸವರಾಜು, ಎರಿಸ್ವಾಮಿ, ಶಿವಕುಮಾರ್ ಮೊದಲಾದವರಿಗೆ,

ನನ್ನ ಅಭ್ಯಾಸಕ್ಕೆ ನಿರಂತರ ಒತ್ತಾಸೆಯಾಗಿರುವ ತಂದೆ-ತಾಯಿ, ಅಣ್ಣ-ಅತ್ತಿಗೆ ಮತ್ತು ತಮ್ಮ ಶಿವಾನಂದ ಅವರುಗಳಿಗೆ,

ಈ ಪ್ರೌಢಪ್ರಬಂಧದ ಅಕ್ಷರ ಜೋಡಣೆಯನ್ನು ಕ್ಲುಪ್ತ ಕಾಲದಲ್ಲಿ ಅಂದವಾಗಿ ಮಾಡಿಕೊಟ್ಟ ಎ.ಎಂ.ಕೃಪಾಶಂಕರ ಮತ್ತು 'ಸ್ಫೂರ್ತಿ'ಕಂಪ್ಯೂಟರ್ಸ್ ನ ಎಲ್ಲಾ ಸಿಬ್ಬಂದಿಯವರಿಗೂ ನಾನು ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

ಸಿ.ಅಶೋಕ

ಪರಿವಿಡಿ

ಅಧ್ಯಾಯ:೧

ಪ್ರಸ್ತಾವನೆ:

ಸಮಾಜ ವಿಜ್ಞಾನಗಳ ಅಧ್ಯಯನ ಮತ್ತು ಪ್ರತ್ಯೇಕವಾಗಿ ಅಂತರಶಿಸ್ತೀಯ ಆಶಯಗಳ ಅನ್ವಯ, ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ತೆಗೆದುಕೊಂಡಿರುವ ವಿಷಯದ ಸಂಕ್ಷಿಪ್ತ ಚಿತ್ರವನ್ನು ಮೂಡಿಸುವ ಪ್ರಯತ್ನ ಮಾಡಲಾಗಿದೆ. 'ಮಹಿಳೆ' ಅಧ್ಯಯನದ ಕೇಂದ್ರ ಬಿಂದು. ಅದೇ ರೀತಿ ನಮ್ಮ ಒಟ್ಟಾರೆ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವ್ಯವಸ್ಥೆಯ ಕೇಂದ್ರ ಬಿಂದುವೂ ಹೌದು. ಆದರೆ ತನ್ನ ಮತ್ತು ತನ್ನ ಸುತ್ತಮುತ್ತಲಿನ ಜೀವನದ ಮೇಲೆ ನಿರ್ಣಯಾತ್ಮಕ ಪ್ರಭಾವ ಬೀರುವ ಆರ್ಥಿಕ, ರಾಜಕೀಯ ಪ್ರಕ್ರಿಯೆಗಳಲ್ಲಾಗಲಿ ಹಾಗೂ ಅವಕ್ಕೆ ಸಂಬಂಧಪಟ್ಟ ನಿರ್ಣಯಗಳಲ್ಲಾಗಲಿ ಮಹಿಳೆ ತನಗೆ ಸಿಗಬೇಕಾದ ಸ್ಥಾನದಿಂದ ವಂಚಿತಳಾಗುತ್ತಿದ್ದಾಳೆ. ಅಷ್ಟೇ ಅಲ್ಲದೆ ಅಮರ್ತ್ಯಸೇನ್ ಹೇಳುವಂತೆ ತನ್ನ ವೈಯಕ್ತಿಕ ಸ್ವಾತಂತ್ರ್ಯ ಮತ್ತು ತನ್ನ ಜೀವನ ಗುಣಮಟ್ಟದ ಮೇಲೆ ಅಗಾಧವಾದ ಪ್ರಭಾವವನ್ನು ಬೀರುವ ಪ್ರಜನೋತ್ಪತ್ತಿಗೆ ಸಂಬಂಧಪಟ್ಟ ನಿರ್ಣಯಗಳ ಮೇಲೂ ತನ್ನ ವೈಯಕ್ತಿಕ ನಿಲುವನ್ನು ವ್ಯಕ್ತಪಡಿಸುವ ಅವಕಾಶವು ಸಹ ಇರುವುದಿಲ್ಲ.' ಮಹಿಳೆಯರು ಪುರುಷರಿಗಿಂತಲೂ ಹೆಚ್ಚಿನ ಶ್ರಮ ಭಾರವನ್ನು ಹೊರುತ್ತಿದ್ದಾಗ್ಯೂ, ಅವರು ಪ್ರಧಾನ ಧಾರೆಯಲ್ಲಿ ನಿಕೃಷ್ಟೀಕರಣಕ್ಕೆ ಒಳಗಾಗಿದ್ದಾರೆ.' ಇದು ಭಾರತದಂತ ಒಂದು ದೇಶದ ಕತೆಯಲ್ಲ. ಅಭಿವೃದ್ಧಿ ಹೊಂದುತ್ತಿರುವ ಪುರುಷ ಪ್ರಧಾನ ರಾಷ್ಟ್ರಗಳ ಕತೆಯೂ ಹೌದು. ಮಹಿಳೆಯ ಈ ಪರಿಸ್ಥಿತಿಗೆ ನಮ್ಮ ಅಧ್ಯಯನ ಕ್ಷೇತ್ರವಾದ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಹೊರತಾಗಿಲ್ಲ. ಇಂತಹ ಲಿಂಗ ಸಂಬಂಧೀ ಅನ್ಯಾಯ-ಅಸಮಾನತೆಗಳನ್ನು ಹೋಗಲಾಡಿಸುವ ಅವಶ್ಯಕತೆಯ ಹಿನ್ನೆಲೆಯಲ್ಲಿ, ಮಹಿಳೆಯರ ಪ್ರಸ್ತುತ ಪರಿಸ್ಥಿತಿಯನ್ನು ಅಧ್ಯಯನದ ಮೂಲಕ ಕಂಡುಕೊಳ್ಳುವ ಅವಶ್ಯಕತೆ ಇದೆ. ಈ ಅಧ್ಯಾಯವನ್ನು ಆರು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಮೊದಲನೆಯ ಭಾಗ ಅಧ್ಯಯನದ ಮೂಲ ಸಮಸ್ಯೆಯನ್ನು ಮಂಡಿಸುತ್ತದೆ.

ಮಹಿಳೆಯರು ಪ್ರಸ್ತುತ ಚಾಲ್ತಿಯಲ್ಲಿರುವ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹೊಂದಿರುವ ಸ್ಥಾನ ಹಾಗೂ ಪ್ರತ್ಯೇಕವಾಗಿ ಕೃಷಿ ಕಾರ್ಮಿಕ ಮಹಿಳೆಯರ ಸಮಸ್ಯೆ-ಶೋಷಣೆಗಳ ಬಗ್ಗೆ ಎರಡನೆಯ ಭಾಗದಲ್ಲಿ ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಮೂರನೇ ಭಾಗ ಅಧ್ಯಯನದ ಮುಖ್ಯ ಉದ್ದೇಶಗಳನ್ನು ವಿವರಿಸುತ್ತದೆ. ಅಧ್ಯಯನಕ್ಕೆ ನಿರ್ದಿಷ್ಟ ದಿಕ್ಕನ್ನು ಕೊಡುವುದಕ್ಕೆ ಕೆಲವು ಪೂರ್ವ ಕಲ್ಪನೆಗಳನ್ನು

ಮಾಡಿಕೊಳ್ಳಲಾಗಿದೆ. ಈ ಪೂರ್ವ ಕಲ್ಪನೆಗಳನ್ನು ನಾಲ್ಕನೇ ಭಾಗದಲ್ಲಿವಿವರಿಸಲಾಗಿದೆ. ಐದನೆ ಭಾಗದಲ್ಲಿ ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಮಹತ್ವವನ್ನು ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಉಪಯೋಗಿಸಿರುವ ಅಧ್ಯಯನದ ವಿಧಾನವನ್ನು ವಿವರವಾಗಿ ಆರನೇ ಭಾಗದಲ್ಲಿ ಮಂಡಿಸಲಾಗಿದೆ ಮತ್ತುಅಧ್ಯಾಯಗಳ ವಿನ್ಯಾಸವನ್ನು ಏಳನೇ ಭಾಗದಲ್ಲಿ ನೀಡಲಾಗಿದೆ.

೧.೧.ಅಧ್ಯಯನದ ಸಮಸ್ಯೆ:

ಅಮೂರ್ತವಾದ ಅಂಶಗಳನ್ನು ಗುರುತಿಸುವುದು ಕಷ್ಟಕರವಾದಾಗ್ಯೂ ಗುರುತಿಸುವ ಯತ್ನಗಳು ನಡೆಯುತ್ತಿವೆ. ಆದರೆ ಹಲವಾರು ಮುಖ್ಯ ವಿಷಯಗಳಲ್ಲಿ ಮೂರ್ತವಾದ, ಪ್ರತ್ಯಕ್ಷವಾಗಿ ದೈನಂದಿನ ಜೀವನದಲ್ಲಿ ಎದುರಾಗುವ ಅಂಶಗಳನ್ನು ಗುರುತಿಸುತ್ತಿಲ್ಲ. ಮಹಿಳೆ ಅಂತಹ ಒಂದು ಮೂರ್ತವಾಗಿಯೂ ಅಭಿವೃದ್ಧಿ ಸಂಕಥನಗಳಲ್ಲಾಗಲಿ, ಅಥವಾ ಅಭಿವೃದ್ಧಿ ಮೀಮಾಂಸೆಗಳಲ್ಲಾಗಲೀ ಇತ್ತೀಚಿನವರೆಗೆ ಕಾಣದ ಆಯಾಮವಾಗಿದ್ದಳು. ಅಂತಹ ಸಿದ್ಧಾಂತಗಳ ಮೇಲೆ ಆಧಾರಪಟ್ಟ ಅಭಿವೃದ್ಧಿ ಯೋಜನೆಗಳೂ ಸಹ ಲಿಂಗ ತಟಸ್ತವಾಗಿದ್ದವು. ಮಹಿಳೆ ಮಾನವ ಕುಲದ ಸೃಷ್ಟಿಯ, ಅದರ ಮುಂದುವರಿಕೆಯ ಪ್ರಕ್ರಿಯೆಗಳಲ್ಲಿ ಕೇಂದ್ರವಾಗಿದ್ದಾಗ್ಯೂ, ಜನಸಂಖ್ಯೆಯಲ್ಲಿ ಮತ್ತು ಒಟ್ಟು ಮತದಾರರಲ್ಲಿ ಅರ್ಧದಷ್ಟಿದ್ದಾಗ್ಯೂ, ಅಷ್ಟೇ ಅಲ್ಲದೆ ಒಟ್ಟು ಶ್ರಮ ಭಾರದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಹೊರೆ ಹೊತ್ತಾಗ್ಯೂ ಮಹಿಳೆಯರು ಬಹಳ ಹಿಂದಿನಿಂದಲೂ ಹರಿದು ಬರುತ್ತಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಿಕೃಷ್ಟೀಕರಣಕ್ಕೊಳಗಾಗಿದ್ದಾರೆ. ರಾಷ್ಟ್ರಮಟ್ಟದಿಂದ ಹಿಡಿದು ಗ್ರಾಮ ಪಂಚಾಯಿತಿಯ ಮಟ್ಟದವರೆಗೂ ರಾಜಕೀಯ ಹಾಗೂ ಆರ್ಥಿಕ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಲೀ, ನಿರ್ಣಯ ತೆಗೆದುಕೊಳ್ಳುವುದಾಗಲಿ ಮಹಿಳೆಯ ಪ್ರಭಾವ ಕಂಡುಬರುತ್ತಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ಕುಟುಂಬ ಮಟ್ಟದಲ್ಲಿ ತಮ್ಮ ಜೀವನಕ್ಕೆ ನೇರವಾಗಿ ಸಂಬಂಧವಿರುವಂತಹ ವಿಷಯಗಳಲ್ಲಿ ನಿರ್ಣಯ ತೆಗೆದುಕೊಳ್ಳುವ ಹಂತವನ್ನು ಮುಟ್ಟಿಲ್ಲ. ಅವರ ಬಹುಪಾಲು ಶ್ರಮ ಮಾರುಕಟ್ಟೆಯ ನಿಯಮದ ಪ್ರಕಾರ ಪ್ರತಿಫಲವನ್ನು ಪಡೆಯುವುದಿಲ್ಲ. ಹಲವಾರು ಕುಟುಂಬಗಳಲ್ಲಿ, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಅವರು ದುಡಿದಾಗ್ಯೂ ಅದನ್ನು ಖರ್ಚು ಮಾಡುವ ಅಧಿಕಾರವಾಗಲೀ, ಸ್ವಾತಂತ್ರ್ಯವಾಗಲೀ ಅವರಿಗಿರುವುದಿಲ್ಲ.

ಕೃಷಿ ಪ್ರಧಾನ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಅಮರ್ತ್ಯಸೇನ್ ರು ಹೇಳುವ' ಮತ್ತು ವ್ಯಕ್ತಿ ಹಾಗೂ ಸಮಾಜದ ವಿಕಾಸಕ್ಕೆ ಅತ್ಯವಶ್ಯಕವಾದ ಶಿಕ್ಷಣ ಮತ್ತು ಆರೋಗ್ಯದ ಸೌಕರ್ಯಗಳಿಂದ ಮಹಿಳೆ

ವಂಚಿತಳಾಗಿದ್ದಾಳೆ.ಸರಕಾರ ಮಹಿಳೆಯರ ಜೀವನ ಮಟ್ಟವನ್ನು ಸುಧಾರಿಸುವುದಕ್ಕೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾಗ್ಯೂ ಬಡತನ ರೇಖೆಯ ವಿವಿಧ ಹಂತಗಳಲ್ಲಿ ಕೆಳಗಿರುವ ಹಲವಾರು ಮಹಿಳಾ ಕೃಷಿ ಕಾರ್ಮಿಕರ ಜೀವನದ ಗುಣಮಟ್ಟದಲ್ಲಿ ಗಣನೀಯವಾದ ಪ್ರಗತಿ ಆದ ಹಾಗೇ ಕಂಡುಬರುವುದಿಲ್ಲ. ಹರಪನಹಳ್ಳಿ ಕಾರ್ಮಿಕರ ದೃಷ್ಟಿಯಿಂದ ಕೃಷಿ ಪ್ರಧಾನವಾದದ್ದು. ಕೃಷಿ ಕಾರ್ಮಿಕರಲ್ಲಿ ಮಹಿಳಾ ಕೃಷಿ ಕಾರ್ಮಿಕರು ಹೆಚ್ಚು ಪ್ರಮಾಣದಲ್ಲಿರುವ ತಾಲ್ಲೂಕು. ಈ ತಾಲ್ಲೂಕಿನಲ್ಲಿ ಗ್ರಾಮೀಣ ಜನಸಂಖ್ಯೆಯಲ್ಲಿ ಮಹಿಳೆಯರ ಗಾತ್ರ ಶೇ ೪೮.೯೯ ಮತ್ತು ಒಟ್ಟು ಕೃಷಿ ಕಾರ್ಮಿಕರಲ್ಲಿ ಶೇ.೫೪.೯೩ರಷ್ಟು ಮಹಿಳಾ ಕೃಷಿ ಕಾರ್ಮಿಕರಿದ್ದಾರೆ.

ಈ ಹಿನ್ನೆಲೆಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನವನ್ನು ಗುರುತಿಸುವ ಒಂದು ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಮಹಿಳೆಯ ಸ್ಥಾನವನ್ನು ಕೇವಲ ಆದಾಯ ಆಧಾರಿತ ನೆಲೆಗಳಿಗೆ ಸೀಮಿತಗೊಳಿಸದೆ, ಶಿಕ್ಷಣ, ಆರೋಗ್ಯ, ಮುಂತಾದವುಗಳನ್ನು ಒಳಗೊಂಡಂತೆ ೧೯೭೦ರಿಂದೀಚೆಗೆ, ವಿಶ್ವದಾದ್ಯಂತ ಪ್ರಚಲಿತದಲ್ಲಿರುವ ಮಾನವ ಅಭಿವೃದ್ಧಿ ಮತ್ತು ನಿಕೃಷ್ಟೀಕರಣ ನೆಲೆಗಳಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಒಂದು ದೇಶದ ಸಾಮಾಜಿಕ ಅಭಿವೃದ್ಧಿಯಲ್ಲಿ ಅಥವಾ ಆರ್ಥಿಕಾಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲ ಒಂದು ಪ್ರಮುಖ ಅಂಶ. ದೇಶದ ಪ್ರಾರಂಭಿಕ ಯೋಜನೆಗಳಲ್ಲಿ ಪುರುಷ ಕೇಂದ್ರಿತ ಯೋಜನೆಗಳು ಹೆಚ್ಚಿದ್ದು, ಅವುಗಳಲ್ಲಿ ಮಹಿಳೆಯರಿಗೆದೊರೆತ ಫಲಗಳು ಕಡಿಮೆ ಪ್ರಮಾಣದಲ್ಲಿದ್ದವು(ಎಸ್ . ಗಾಯಿತ್ರಿ, ೧೯೯೬). ನಂತರದ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಮಹಿಳೆಯರನ್ನು ಕುರಿತಂತೆ ಅನೇಕ ಶೃಂಗಸಭೆಗಳು, ಸಮ್ಮೇಳನಗಳು ನಡೆದಿವೆ.ಅದೇ ರೀತಿಯಲ್ಲಿ ಮಹಿಳೆಯರನ್ನು ಕುರಿತಂತೆ ಅನೇಕ ನೀತಿ ನಿರೂಪಣೆಗಳು ಸಹ ರಚಿಸಿಲ್ಪಟ್ಟವು. ಭಾರತ ಕೃಷಿ ಪ್ರಧಾನ ರಾಷ್ಟ್ರ. ಇಲ್ಲಿಯ ಶ್ರಮಶಕ್ತಿಯಲ್ಲಿ, ಜನಸಂಖ್ಯಾ ದೃಷ್ಟಿಯಲ್ಲಿ ಮಹಿಳೆಯರು ಸುಮಾರು ಅರ್ಧದಷ್ಟು ಭಾಗದಲ್ಲಿದ್ದಾರೆ. ಅದರಲ್ಲಿಯೂ ಕೃಷಿ ರಂಗದಲ್ಲಿಯ ಕೆಲಸದ ವಿಂಗಡನೆಯಲ್ಲಿ ಸಹ ಈಕೆಯ ಪಾಲು ಸುಮಾರು ಅರ್ಧದಷ್ಟಿದೆ. "ಸ್ತ್ರೀಯರು ಮಾಡುವ ಕೆಲಸಗಳನ್ನು ಅನುತ್ಪಾದಕವೆಂತಲೂ ಪುರುಷ ಮಾಡುವ ಕೆಲಸವನ್ನು ಉತ್ಪಾದಕವೆಂತಲೂ ಪರಿಗಣಿಸಲಾಗುತ್ತದೆ"(ಇಂದಿರಾ:೧೯೯೫) ಗಾತ್ರದಲ್ಲಿ, ಶ್ರಮದಲ್ಲಿ, ಸ್ತ್ರೀಯರ ಪಾಲು ಅರ್ಧದಷ್ಟಿವಾಗ್ಯೂ, ಕುಟುಂಬ ಮತ್ತು ಸಮಾಜಗಳ ಕಲ್ಯಾಣಕ್ಕಾಗಿ ಅವಳ ಕೊಡುಗೆಗಳು ನಿರ್ಲಕ್ಷಿಸಲ್ಪಟ್ಟಿವೆ. ಅವಳ ಕೊಡುಗೆಗೆ ತಕ್ಕ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸ್ಥಾನ ಸಿಕ್ಕಿರುವುದಿಲ್ಲ.

ಅದಕ್ಕಿಂತಲೂ ಹೆಚ್ಚಾಗಿ ಅವಳ ಕುಟುಂಬದಲ್ಲೇ ಅವಳ ಶ್ರಮವನ್ನು ಗುರುತಿಸಿರುವುದಿಲ್ಲ. ಹೆಚ್ಚಾಗಿ ಮಹಿಳೆಯು ಅಭಿವೃದ್ಧಿಯ ಫಲವನ್ನು ಪಡೆಯುವ ಅಂಶವೆಂದು ಮತ್ತು ಅಭಿವೃದ್ಧಿಗೆ ಪೂರಕವಾಗುವ ಸಾಧನ ಮೌಲ್ಯವೆಂದು ಪರಿಗಣಿಸಲ್ಪಟ್ಟಳೆ ಹೊರತು, ಅಭಿವೃದ್ಧಿಯ ಅಂತಿಮ ಗುರಿಯೂ ಸಹ ಇವಳೆಂದು ಗುರುತಿಸಿರುವುದಿಲ್ಲ.

ವಿಷಯ ಹೀಗಿರುವಾಗ ಅಧ್ಯಯನಕ್ಕೆ ತೆಗೆದುಕೊಂಡಿರುವ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಇದರಿಂದ ಹೊರತಾಗಿರುವುದಿಲ್ಲ. ೧೯೫೦ರಿಂದೀಚೆಗೆ ನಡೆಯುತ್ತಿರುವ ಗ್ರಾಮೀಣಭಿವೃದ್ಧಿ ಯೋಜನೆಗಳು' ಹಾಗೂ ೧೯೯೧ರಿಂದೇಚೆಗೆ ನಡೆಯುತ್ತಿರುವ ಉದಾರೀಕರಣ, ಮಾರುಕಟ್ಟೀಕರಣ, ಖಾಸಗೀಕರಣ, ಬಹುರಾಷ್ಟ್ರೀಯಕರಣ ಹಾಗೂ ಜಾಗತೀಕರಣ ಪ್ರಕ್ರಿಯೆಗಳಿಗೆ ಸಂಪೂರ್ಣ ಸ್ಪಂಧಿಸದೆ ಇರಲು ಸಾಧ್ಯವಿಲ್ಲ. ಸರ್ಕಾರ ಕೈಗೊಳ್ಳುತ್ತಿರುವ ಗ್ರಾಮೀಣಾಭಿವೃದ್ಧಿ ಪ್ರತ್ಯೇಕವಾಗಿ ಮಹಿಳಾಭಿವೃದ್ಧಿ ಕಾರ್ಯಕ್ರಮಗಳು ಈ ತಾಲ್ಲೂಕಿನಲ್ಲಿಯೂ ಜಾರಿಯಲ್ಲಿವೆ. ಇನ್ನೂ ಸಹ ಮಹಿಳೆಯನ್ನು ಅಭಿವೃದ್ಧಿಯ ಪ್ರಮುಖ ಅವಿಭಾಜ್ಯ ಅಂಗವೆಂದು ಗುರುತಿಸಿಲ್ಲ. ಭಾರತಕ್ಕೆ ಸುಮಾರು ೫ ದಶಕಗಳ ಅಭಿವೃದ್ಧಿ ಯೋಜನಾ ಅನುಭವವಿದ್ದಾಗ್ಯೂ, ಮಹಿಳೆಯರ ದೃಷ್ಟಿಯಿಂದ ನಾವು ಅಸಮಾನತೆಗಳ ಮಧ್ಯ ಬದುಕುತ್ತಿದ್ದೇವೆ. ಈ ಲಿಂಗ ಸಂಬಂಧೀ ಅಸಮಾನತೆಗಳು ಭಾರತಕ್ಕಾಗಲೀ, ಕರ್ನಾಟಕ್ಕಾಗಲಿ ಸೀಮಿತವಾಗಿರುವ ಸಮಸ್ಯೆಗಳಲ್ಲ. ಈ ಅಸಮಾನತೆಗಳು ಒಂದು ರೀತಿ ವಿಶ್ವದಾದ್ಯಂತ ಕಂಡುಬರುತ್ತವೆ.

೧.೨.ಮಹಿಳೆಯರ ಸ್ಥಾನ ಮಾನ ಕುರಿತು:

ಮಹಿಳೆಯರು ಪ್ರಸ್ತುತ ಚಾಲ್ತಿಯಲ್ಲಿರುವ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹೊಂದಿರುವ ಸ್ಥಾನ ಹಾಗೂ ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳು ಮತ್ತು ಶೋಷಣೆಯ ಬಗ್ಗೆ ಸ್ಪಷ್ಟವಾದ ಚಿತ್ರಣವನ್ನು ನೀಡುವುದಾದರೆ, ಪ್ರಪಂಚದ ಇತರ ಅನೇಕ ಸಾಮಾಜಿಕ ವ್ಯವಸ್ಥೆಗಳಂತೆ ಭಾರತದಲ್ಲಿಯೂ ಪುರುಷಕೇಂದ್ರಿತ ಸಮಾಜದಲ್ಲಿ ಪರಂಪರಾಗತ ಸ್ತ್ರೀಯರ ಸ್ಥಾನಮಾನದ ನಿಷ್ಕರ್ಷೆಯೊಂದಿಗೆ ನೇರ ಸಂಬಂಧ ಹೊಂದಿರುವ ಕೆಲವು ಸಾಮಾಜಿಕ ವಿಚಾರಗಳೆಂದರೆ ಧಾರ್ಮಿಕ ಪರಂಪರೆ, ಕುಟುಂಬ ಸ್ವರೂಪ, ಅವಳ ಮೇಲಿರುವ ಕೆಲಸದ ಒತ್ತಡ ಕೆಲಸ ಕಾರ್ಯಗಳ ಹಂಚಿಕೆ ಮುಂತಾದವುಗಳು ಲಿಂಗ ತಾರತಮ್ಯದಿಂದ ತುಂಬಿದೆ.

ಜಾಗತಿಕ ಅರ್ಥವ್ಯವಸ್ಥೆ ಹೆಚ್ಚು ಹೆಚ್ಚು ಇಕ್ಕಟ್ಟಿಗೆ ಸಿಲುಕಿದಂತೆ ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಗಳಿಗೆ ಇದರ ಬಿಸಿ ಹೆಚ್ಚು. ಅದರಲ್ಲಿಯೂ ಮೊದಲ ಬಿಸಿ ತಗಲುವುದು ಮಹಿಳೆಯರಿಗೆಯೇ.

ಇತ್ತೀಚಿನ ಅಧ್ಯಯನದಂತೆ ಉದ್ಯೋಗ ಹಾಗೂ ದುಡಿಮೆಯ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಯಾವುದೇ ಅಂತರಾಷ್ಟ್ರೀಯ ಆರ್ಥಿಕ ಸಮಸ್ಯೆಗಳಿದ್ದರೆ, ಮೊಟ್ಟಮೊದಲು ಪುರುಷರ ಉದ್ಯೋಗ ಭದ್ರತೆ ಹಾಗೂ ಕೂಲಿಗಿಂತಲು ಮಹಿಳೆಯರ ಉದ್ಯೋಗ ಭದ್ರತೆ ಮತ್ತು ಕೂಲಿಯ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವಂತಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಮಹಿಳೆಯರ ಬದುಕನ್ನು ಕುರಿತು ವಿವರಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

೧.೩ ಅಧ್ಯಯನದ ಉದ್ದೇಶಗಳು:

'ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನ', ಪ್ರಸ್ತುತ ಅಧ್ಯಯನದ ಪ್ರಮುಖ ವಿಷಯವಾಗಿದೆ. ಹರಪನಹಳ್ಳಿ ಮಹಿಳೆಯರಿಗೆ ಸಂಬಂಧಪಟ್ಟಂತೆ ಅಧ್ಯಯನಗಳು ನಡೆದಿರುವುದು ತೀರ ವಿರಳ. ಅದರಲ್ಲೂ ಮಹಿಳಾ ಕೃಷಿ ಕಾರ್ಮಿಕರನ್ನು ಕುರಿತಾದ ಅಧ್ಯಯನಗಳು ಇನ್ನೂ ಕಡಿಮೆ. ಆದರೆ ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಗೆ ಜೀವನಾಡಿ ಎಂದರೆ 'ವ್ಯವಸಾಯ'. ಈ ವಲಯದಲ್ಲಿ ಬಹುತೇಕ ಪುರುಷರು, ಮಹಿಳೆಯರು,ಬಾಲಕಾರ್ಮಿಕರು ಒಳಗೊಂಡಂತೆ ಬದುಕಿನ ಅನಿವಾರ್ಯತೆಗೆ ವ್ಯವಸಾಯವೇ ಮೂಲಭೂತ ಉದ್ಯೋಗವಾಗಿದೆ. ವ್ಯವಸಾಯಕುರಿತಂತೆ ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ ೪ನೇ ಸ್ಥಾನವನ್ನು ಹೊಂದಿದ್ದರೆ ರಾಜ್ಯದಲ್ಲಿ ೧೩ನೇ ಸ್ಥಾನವನ್ನು ಹೊಂದಿದೆ. ಹೀಗಿದ್ದರೂ ಸ್ಥಳೀಯ ಕಾರ್ಮಿಕರಿಗೆ ಜೀವನೋಪಾಯಕ್ಕೆಹೆಚ್ಚಿನ ಅವಕಾಶಗಳಿಲ್ಲ. ಮಹಿಳೆ ಈ ವಲಯದಲ್ಲಿ ತನ್ನ ಬದುಕನ್ನು ಕ್ರಮಬದ್ಧವಾಗಿ ರೂಪಿಸಿಕೊಳ್ಳಲು ಇಂದಿಗೂ ಸಾಧ್ಯವಾಗಿಲ್ಲ. ಕಾರಣ ಕೆಲಸದ ಸ್ವರೂಪ, ಕೆಲಸದ ಅವಧಿ, ಹಾಗೂ ಕೆಲಸಕ್ಕೆ ತಕ್ಕ ಕೂಲಿ ಇವೆಲ್ಲವೂ ಆಕೆಯ ಉತ್ತಮ ಭವಿಷ್ಯವನ್ನು ರೂಪಿಸುವಲ್ಲಿ ವಿಫಲವಾಗಿವೆ. ಈ ಹಿನ್ನೆಲೆಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರ ಹಿತವನ್ನೇ ಕೇಂದ್ರವನ್ನಾಗಿಟ್ಟುಕೊಂಡು ಈ ಕೆಳಗೆ ಹೇಳಿರುವ ಅಧ್ಯಯನದ ಉದ್ದೇಶಗಳನ್ನು ಗುರುತಿಸಲಾಗಿದೆ.

೧.ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಗುರುತಿಸುವುದು.

೨.ಮಹಿಳೆಯರ ಆರೋಗ್ಯ ಹಾಗೂ ಶಿಕ್ಷಣ ಸೌಲಭ್ಯಗಳ ಕೊರತೆಯನ್ನು ಗುರುತಿಸುವುದು.

೩.ಮಹಿಳಾ ಕೃಷಿ ಕಾರ್ಮಿಕರ ಪ್ರಗತಿಯನ್ನು ಕುಂಟಿತಗೊಳಿಸುವ ಹಲವು ಸಮಸ್ಯೆಗಳನ್ನು ಪರಿಶೀಲಿಸುವುದು.

೪.ಮಹಿಳಾ ಕೃಷಿ ಕಾರ್ಮಿಕರಲ್ಲಿ ವಲಸೆ ಹಾಗು ಅದರ ಕಾರಣ ಮತ್ತು ಪರಿಣಾಮಗಳನ್ನು ತಿಳಿಯುವುದು.

೫.ಮಹಿಳೆಯರ ಸಂಘಟನೆಗೆ ಸಂಬಂಧಿಸಿದಂತೆ ತಿಳಿಯುವುದು.

೧.೨.೧ ಅಧ್ಯಯನದ ಪೂರ್ವ ಕಲ್ಪನೆಗಳು:

ಅಧ್ಯಯನವನ್ನು ವಿಶಾಲವಾಗಿ ಹರಿಯ ಬಿಡದೆ ಅಧ್ಯಯನದ ಉದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಖ್ಯವಾದ ಕೆಲವು ಅಂಶಗಳ ಸುತ್ತ ಕೇಂದ್ರೀಕರಿಸುವ ದೃಷ್ಟಿಯಿಂದ ಕೆಲವೊಂದು ಪೂರ್ವ ಕಲ್ಪನೆಗಳನ್ನು ಮಾಡಿಕೊಳ್ಳಲಾಗಿದೆ. ಈ ಪೂರ್ವ ಕಲ್ಪನೆಗಳು ಇಲ್ಲಿಯವರೆಗೂ ಮಹಿಳಾ ಕೃಷಿಕಾರ್ಮಿಕರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ದೇಶದ ಇತರ ರಾಜ್ಯಗಳಲ್ಲಿ ನಡೆದ ಅಧ್ಯಯನದ ಫಲಿತಾಂಶಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಲಾಗಿದೆ. ಅಧ್ಯಯನದಲ್ಲಿ ಈ ಪೂರ್ವ ಕಲ್ಪನೆಗಳನ್ನು ಪರೀಕ್ಷೆಗೆ ಒಳಪಡಿಸಲಾಗುವುದು.

೧. ಕೃಷಿ ಕಾರ್ಮಿಕರ ಕೂಲಿಯಲ್ಲಿ ಮಹಿಳಾ ವಿರೋಧಿ ತಾರತಮ್ಯಗಳು ಇರುತ್ತವೆ. ಲಿಂಗಬೇಧವಿಲ್ಲದೆ ಮಹಿಳಾ ಕಾರ್ಮಿಕರು ಹಾಗು ಪುರುಷ ಕಾರ್ಮಿಕರು ಮಾಡುವ ಕೆಲಸ ಮತ್ತು ಕೆಲಸದ ಸಮಯ ಏಕ ರೂಪವಾದಾಗಲೂ, ಮಹಿಳೆಯರಿಗೆ ಸಿಗುವ ಕೂಲಿ ಪುರುಷರಿಗೆ ಸಿಗುವ ಕೂಲಿಗಿಂತ ಕಡಿಮೆ ಇರುತ್ತದೆ.

೨.ಮಹಿಳೆಯು ಹೊರಗೆ ದುಡಿಯುವುದಲ್ಲದೆ, ಮನೆಯಲ್ಲಿಯೂ ದುಡಿಯುತ್ತಾಳೆ. ಈ ದುಡಿಮೆಯ ಜೊತೆಗೆ ಪ್ರಜನೋತ್ಪತ್ತಿ ಕಾರ್ಯವನ್ನು ನಡೆಸಿಕೊಂಡು ಹೋಗುತ್ತಾಳೆ. ಇಂತಹ ದುಡಿಮೆಗಳಿಗೆ ಯಾವ ರೀತಿ ಪ್ರತಿಫಲವಾಗಲಿ, ಗುರುತಿಸುವಿಕೆಯಾಗಲಿ ಇರುವುದಿಲ್ಲ. ಅವರ ಕೊಡುಗೆ ಅಗೋಚರವಾಗಿ ಉಳಿಯುತ್ತವೆ. ತನ್ನ ದುಡಿಮೆಗೆ ತಕ್ಕಂತೆ ಕುಟುಂಬದಲ್ಲಿ ಸಿಗಬೇಕಾದ ಸ್ಥಾನ ಸಿಗುವುದಿಲ್ಲ.

೩.ಮಳೆಯಾಧಾರಿತ ಪ್ರದೇಶಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರಿಗೆ ಹಲವು ಬಾರಿ ವಲಸೆ ಹೋಗುವುದು ಆರ್ಥಿಕ ಅವಶ್ಯಕತೆಯಾಗಬಹುದು.

೪.ಕೆಲವೊಂದು ಕೃಷಿ ಕಾರ್ಯಾಚರಣೆಗಳಿಗೆ ಸ್ಥಳೀಯ ವಯಸ್ಕ ಕಾರ್ಮಿಕರು ಕಡಿಮೆಯಾಗುವ ಸಂಭವವಿರುತ್ತದೆ. ಅಂತಹ ಸಂದರ್ಭಗಳಲ್ಲಿ ಶಾಲೆಗೆ ಹೋಗುವ ಬಾಲಕರು ಕಾರ್ಮಿಕರಾಗುವ ಸಂಭವವಿದೆ. ಇದರಿಂದ ಬಾಲಕರ ವಿದ್ಯಾಬ್ಯಾಸ ಕುಂಠಿತಗೊಳ್ಳುವ ಸಂಭವವಿದೆ.

೧.೪ ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಮಹತ್ವ:

ಪ್ರಸ್ತುತ ಅಧ್ಯಯನದ ಶೀರ್ಷಿಕೆ ತೋರಿಸುವ ಹಾಗೆ ಈ ಅಧ್ಯಯನ ಒಂದು ಕ್ಷೇತ್ರ ನಿರ್ಧಿಷ್ಟ ಲಿಂಗ ಸಂಬಂಧಿ-ಆರ್ಥಿಕ ಅಧ್ಯಯನವಾಗಿರುತ್ತದೆ. ಅಧ್ಯಯನದ ಕೇಂದ್ರ ಬಿಂದು ಮಹಿಳಾ ಕೃಷಿ ಕಾರ್ಮಿಕರು. ಅದಾಗ್ಯೂ ಬಾಲ ಕೃಷಿ ಕಾರ್ಮಿಕರು ಪ್ರಾಸಂಗಿಕವಾಗಿ ಅಧ್ಯಯನದಲ್ಲಿ ಕಾಣಸಿಕೊಳ್ಳುತ್ತಾರೆ.ಭೌಗೋಳಿಕವಾಗಿ ಈ ಅಧ್ಯಯನ ಹರಪನಹಳ್ಳಿ ತಾಲ್ಲೂಕಿಗೆ ಸೀಮಿತಗೊಳ್ಳುತ್ತದೆ. ಸಮಯದ ವ್ಯಾಪ್ತಿಯ ದೃಷ್ಟಿಯಿಂದ ಅಧ್ಯಯನ ೧೯೮೧ ಮತ್ತು ೧೯೯೧ರ ಮಧ್ಯದ ಬದಲಾವಣೆಗಳನ್ನು ಸೆರೆಹಿಡಿಯುವ ಪ್ರಯತ್ನ ಮಾಡಿದೆ. ಈ ಅಧ್ಯಯನದ ವಿಷಯ ಹಾಗೂ ಅಧ್ಯಯನದ ಕ್ಷೇತ್ರ ಇವುಗಳನ್ನು ಆರಿಸಿಕೊಳ್ಳಲು ಎರಡು ಮುಖ್ಯ ಕಾರಣಗಳಿವೆ. ಒಂದು, ಈ ಆರಿಸಿಕೊಂಡ ವಿಷಯದ ಬಗ್ಗೆ ಇಲ್ಲಿಯವರಿಗೂ ಯಾವುದೇ ಸಂಶೋಧನಾತ್ಮಕ ಅಧ್ಯಯನ ನಡೆದಿರುವುದಿಲ್ಲ, ಎರಡು, ಆಯ್ದುಕೊಂಡ ಕ್ಷೇತ್ರ ಸಂಶೋಧಕನಿಗೆ ಬಹಳ ಪರಿಚಯವಿರುವ ಕ್ಷೇತ್ರವಾಗಿದೆ.

ಲಿಂಗಸಂಬಂಧಿಯಾದ ಈ ಆರ್ಥಿಕ ನಿಶ್ಚಿತ-ಕ್ಷೇತ್ರ ಸಂಬಂಧಿ ಅಧ್ಯಯನ ಮಹಿಳಾ ಕೃಷಿ ಕಾರ್ಮಿಕರ ಬಗ್ಗೆ ನಮಗೆ ಈಗಿರುವ ಜ್ಞಾನ ಭಂಡಾರಕ್ಕೆ ಅರ್ಥಪೂರ್ಣವಾದ ಕೊಡುಗೆಯಾಗಬಹುದು. ಅಧ್ಯಯನದ ಫಲಿತಾಂಶಗಳು ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿ ಹಾಗೂ ಸಾಮಾಜಿಕ ಸ್ಥಾನಗಳನ್ನು ಉತ್ತಮಗೊಳಿಸಲು ರೂಪಿಸುವ ನೀತಿಗಳಿಗಾಗಲಿ, ಕಾರ್ಯಕ್ರಮಗಳಿಗಾಗಲಿ ಸಹಾಯಕವಾಗುತ್ತವೆ. ಅಷ್ಟೇ ಅಲ್ಲದೆ ಗ್ರಾಮಮಟ್ಟದ ವಿಕೇಂದ್ರೀಕೃತ ಯೋಜನೆಗಳನ್ನು ರೂಪಿಸುವಲ್ಲಿ ಸಹಕಾರಿಯಾಗಬಲ್ಲದು.

೧.೫.ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನ ನಿಗದಿತ ಕ್ಷೇತ್ರದಲ್ಲಿನ ಮಹಿಳಾ ಕೃಷಿಕಾರ್ಮಿಕರ ಸ್ಥಿತಿಗತಿಗಳನ್ನು ಅರಿಯುವ

ಒಂದು ನಿದರ್ಶನಾತ್ಮಕ ಅಧ್ಯಯನ. ಆದಾಗ್ಯೂ ನಿದರ್ಶನಾತ್ಮಕ ವಿಶ್ಲೇಷಣೆಯಲ್ಲಿ ಅಗತ್ಯವಾಗುವ ಸೈದ್ಧಾಂತಿಕ ಹಿನ್ನೆಲೆಯನ್ನು ಬಳಸಿಕೊಳ್ಳಲಾಗಿದೆ. ಅಧ್ಯಯನದ ವಿವಿಧ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನಕ್ಕೆ ಬೇಕಾದ ಅಂಕಿ-ಅಂಶಗಳನ್ನು ಹಾಗೂ ಇತರೆ ಮಾಹಿತಿಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಪಡೆದುಕೊಳ್ಳಲಾಗಿದೆ. ನಿದರ್ಶನಾತ್ಮಕ ವಿಶ್ಲೇಷಣೆಗೆ ಪರಿಮಾಣಾತ್ಮಕತೆಯನ್ನು ನೀಡುವ ದೃಷ್ಟಿಯಿಂದ ಕೆಲವು ಸರಳವಾದ ಸಾಂಖ್ಯಿಕ ಸಲಕರಣೆಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಯನದ ಸಮಯ ಹಾಗೂ ಸಮಯೇತರ ಇತಿಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ವಸ್ತುವಿಗೆ ಒಂದು ಕೇಂದ್ರವನ್ನು ನೀಡುವುದಕೋಸ್ಕರ ಆಯ್ದ ಕ್ಷೇತ್ರದಲ್ಲಿಯ ಒಂದುನೂರು ಬಡತನ ರೇಖೆಯ ಕೆಳಗಿರುವ ಕೃಷಿಕಾರ್ಮಿಕರ ಕುಟುಂಬಗಳಿಂದ ಒಂದುನೂರ ಜನ ಮಹಿಳಾ ಕೃಷಿ ಕಾರ್ಮಿಕರಿಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಅವರ ಬಗ್ಗೆ ಪ್ರಾಥಮಿಕ ಮಾಹಿತಿಯನ್ನು ಪಡೆಯುವುದಕೋಸ್ಕರ ೫೦ ಅಂಶಗಳ ಒಂದು ಸಂದರ್ಶನ ಸೂಚಿಯನ್ನು ಬಳಸಿಕೊಳ್ಳಲಾಗಿದೆ. ಪ್ರಾಥಮಿಕ ಅಂಕಿ-ಅಂಶಗಳನ್ನು ಮೊದಲು 'ಕೋಡ್ ಶೀಟ್ 'ಗೆ ಪರಿವರ್ತಿಸಲಾಗಿದೆ. ತರುವಾಯ ಅದರಿಂದ ವಿವಿಧ ಅಧ್ಯಯನಗಳ ವಿಶ್ಲೇಷಣೆಗೆ ಬೇಕಾಗುವ ರೀತಿಯಲ್ಲಿ ಅಂಕಿ-ಅಂಶಗಳ ಪಟ್ಟಿಗಳನ್ನುತಯಾರಿಸಿ ಬಳಸಿಕೊಳ್ಳಲಾಗಿದೆ. ಆನುಷಂಗಿಕ ಮಾಹಿತಿಯನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಯಿಂದ ಪ್ರಕಟವಾಗುವ "ಬಳ್ಳಾರಿ ಜಿಲ್ಲೆಯ ಅಂಕಿ ಸಂಖ್ಯೆಗಳ ನೋಟ', ಕರ್ನಾಟಕ ರಾಜ್ಯ ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರು ಇವರಿಂದ ಪ್ರಕಟವಾಗುವ ತಾಲ್ಲೂಕು ಸಾಮಾಜಿಕ ಆರ್ಥಿಕ ಸೂಚ್ಯಂಕಗಳು, ಕರ್ನಾಟಕ ಅಂಕಿ ಅಂಶಗಳ ನೋಟ ಹಾಗೂ ಜಿಲ್ಲಾ ಗಣತಿಯ ಕೈಪಿಡಿಗಳಿಂದ ಸಂಗ್ರಹಿಸಲಾಗಿದೆ.

೧.೯ ಅಧ್ಯಾಯಗಳ ವಿನ್ಯಾಸ

ಮೊದಲನೆಯ ಅಧ್ಯಾಯವಾದ 'ಪ್ರಸ್ತಾವನೆ'ಯು ಕೂಡಿದಂತೆ ಅಧ್ಯಯನದಲ್ಲಿ ಐದು ಅಧ್ಯಾಯಗಳಿವೆ. ಅಧ್ಯಯನಕ್ಕೆ ಹಿನ್ನೆಲೆಯೋಪಾದಿಯಲ್ಲಿ ಎರಡನೆ ಅಧ್ಯಾಯ, ಅಧ್ಯಯನ ಕ್ಷೇತ್ರವಾದ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಆರ್ಥಿಕ, ಸಾಮಾಜಿಕ, ಭೌಗೋಳಿಕ ಮತ್ತು ಮಾನವ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಸ್ಥೂಲ ಪರಿಚಯವನ್ನು ಮಾಡಿಕೊಡುತ್ತದೆ.ಇದರ ಜೋತೆಗೆ ಈ ಅಧ್ಯಾಯದಲ್ಲಿ ನಮ್ಮ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮಾಹಿತಿದಾರರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮುಂತಾದ ವಿವರಗಳನ್ನು ನೀಡಲಾಗಿದೆ. ಈ ಹಿನ್ನೆಲೆಯು ಸಮಸ್ಯೆಯನ್ನು ಸರಿಯಾಗಿ

ಅರ್ಥೈಸಿ ವಿಶ್ಲೇಷಿಸುವಲ್ಲಿ ಸಹಾಯಕವಾಗಿದೆ. ಮೂರನೆ ಅಧ್ಯಾಯದಲ್ಲಿ ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರು ಎದುರಿಸುವ ಸಾಮಾಜಿಕ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇದು ಒಂದು ದೃಷ್ಟಿಯ ಪರಿಚಯವಾದರೆ ಇವರ ಇನ್ನೊಂದು ಮುಖವನ್ನು ವಿವರಿಸುವಲ್ಲಿ ಪ್ರಮುಖ ಅಂಶವೆಂದರೆ ಆರ್ಥಿಕ ಸಮಸ್ಯೆಗಳು. ಈವಿಷಯ ೪ನೇ ಅಧ್ಯಾಯದಲ್ಲಿ ಕಾಣಸಿಕೊಳ್ಳುತ್ತದೆ. ಒಟ್ಟಾರೆ ಅಧ್ಯಯನದ ಫಲಿತಗಳನ್ನು,ಮಹಿಳಾ ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಉಪಯುಕ್ತವಾದ ಸಲಹೆಗಳನ್ನುಮತ್ತು ಅಧ್ಯಯನದ ಸಾರಾಂಶವನ್ನು ಕೊನೆಯ ಐದನೆ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ೨

ಅಧ್ಯಯನ ಕ್ಷೇತ್ರದ ಪರಿಚಯ ಮತ್ತು ಮಾಹಿತಿದಾರರ ಸಾಮಾಜಿಕ ಆರ್ಥಿಕ ಹಿನ್ನೆಲೆ.

೨.೧.ಸಮಾಜ ವಿಜ್ಞಾನಗಳಲ್ಲಿ ಸಂಶೋಧನೆಗಳು ಸಾಮಾನ್ಯವಾಗಿ ಕ್ಷೇತ್ರ ನಿರ್ಧಿಷ್ಟವಾಗಿರುತ್ತವೆ. ಅಧ್ಯಯನದ ವಸ್ತು ಯಾವುದೇ ಆಗಲಿ, ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಂಶೋಧಕರಿಗೆ ಆಯ್ದುಕೊಂಡ ಕ್ಷೇತ್ರದ ಒಟ್ಟಾರೆ ಆರ್ಥಿಕ, ಸಾಮಾಜಿಕ, ಭೌಗೋಳಿಕ, ಜನಸಂಖ್ಯೆ, ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳ ಕುರಿತು ಮಾಹಿತಿ ಇರುವುದು ಅತ್ಯವಶ್ಯಕ. ಕ್ಷೇತ್ರದ ಪ್ರತ್ಯೇಕತೆಗಳಿಗೆ ತಕ್ಕಂತೆ ಅಧ್ಯಯನದ ವಿಧಾನಗಳನ್ನು ಆರಿಸಿಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲದೆ ಸಮಸ್ಯೆಯನ್ನು ವಿಂಗಡಿಸಿ ವಿಶ್ಲೇಷಿಸುವಲ್ಲೂ ಮತ್ತು ನಿವಾರಣೋಪಾಯಗಳನ್ನು ಸೂಚಿಸುವಲ್ಲೂ ಆಯ್ದ ಕ್ಷೇತ್ರದ ಜ್ಞಾನ ಪ್ರಧಾನ ಪಾತ್ರವನ್ನು ವಹಿಸುತ್ತದೆ.ಪ್ರಸ್ತುತ ಅಧ್ಯಾಯವನ್ನು ಮುಖ್ಯವಾಗಿ ಎರಡು ವಿಭಾಗಗಳಾಗಿ ವಿಂಗಡಿಸಿದ್ದು ಮೊದಲ ಭಾಗವು ಅಧ್ಯಯನ ಕ್ಷೇತ್ರದ ಸಂಪೂರ್ಣ ಮಾಹಿತಿಯನ್ನು, ಎರಡನೇ ಭಾಗವು ಮಹಿಳಾ ಕೃಷಿ ಕಾರ್ಮಿಕ ಮಾಹಿತಿದಾರರ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಕುರಿತು ಮಾಹಿತಿ ನೀಡುತ್ತದೆ. ಈ ಅಧ್ಯಾಯದ ಮೊದಲ ಭಾಗವಾದ ಅಧ್ಯಯನ ಕ್ಷೇತ್ರವನ್ನು ಮೂರು ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಭಾಗವು ಹರಪನಹಳ್ಳಿ ತಾಲ್ಲೂಕಿನ ಭೌಗೋಳಿಕ ಮತ್ತು ಆಡಳಿತಾತ್ಮಕ ವಿವರಗಳನ್ನು, ಎರಡನೆ ಉಪವಿಭಾಗವು ಪ್ರಾಕೃತಿಕ ಸಂಪನ್ಮೂಲಗಳನ್ನು, ಮೂರನೇ ಭಾಗ ಮಾನವ ಸಂಪನ್ಮೂಲದ ಬಗ್ಗೆ ವಿವರಣೆ ನೀಡುತ್ತದೆ. ಈ ಅಧ್ಯಾಯದ ಎರಡನೆ ಭಾಗವು ಅನುಕ್ರಮವಾಗಿ ಮಹಿಳಾ ಮಾಹಿತಿದಾರರ ವಯಸ್ಸು, ಜಾತಿ, ವೃತ್ತಿ ಮತ್ತು ಶಿಕ್ಷಣ, ಆದಾಯ ಮತ್ತು ಗಂಡಂದಿರ ಶಿಕ್ಷಣ, ವೃತ್ತಿ ಮತ್ತು ಆದಾಯ ಮತ್ತು ಮಕ್ಕಳ ಶಿಕ್ಷಣ ಮಟ್ಟ ಹಾಗು ಕೊನೆಯದಾಗಿ ಮಾಹಿತಿದಾರರ ಚಿರಾಸ್ತಿ-ಸ್ಥಿರಾಸ್ತಿ ವಿವರಗಳ ಮಾಹಿತಿಯನ್ನು ನೀಡಿದೆ. ಈ ಅಧ್ಯಾಯದ ಕೊನೆಯ ಭಾಗವು ಉಪ ಸಂಹಾರವನ್ನು ಒಳಗೊಂಡಿದೆ.

೨.೧.೧(ಎ)ಭೌಗೋಳಿಕ ಚಿತ್ರಣ

ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯು ನೈರುತ್ಯ ಮತ್ತು ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಿದ್ದು ಹರಪನಹಳ್ಳಿಯು ಬಳ್ಳಾರಿ ಜಿಲ್ಲೆಯ ಪಶ್ಚಿಮ ದಿಕ್ಕಿನಲ್ಲಿ ಬರುತ್ತದೆ. ಇದು ಬೆಂಗಳೂರಿನಿಂದ ೩೧೪ ಕಿ.ಮೀ ಹಾಗೂ ಜಿಲ್ಲಾ ಕೇಂದ್ರದಿಂದ ೧೪೦ ಕಿ.ಮೀ ಅಂತರದಲ್ಲಿದೆ. ಬಳ್ಳಾರಿ

ಜಿಲ್ಲೆಯು ದಕ್ಷಿಣಕ್ಕೆ ಚಿತ್ರದುರ್ಗ ಉತ್ತರಕ್ಕೆ ರಾಯಚೂರು, ಪಶ್ಚಿಮಕ್ಕೆ ಧಾರವಾಡ ಜಿಲ್ಲೆಯನ್ನು ಹೊಂದಿದೆ. ಹರಪನಹಳ್ಳಿಯು ಜಿಲ್ಲೆಯಲ್ಲಿ ಬರುವ ೮ ತಾಲ್ಲೂಕುಗಳ ಪೈಕಿ ಒಂದು ಪ್ರಮುಖ ತಾಲ್ಲೂಕು ಕೇಂದ್ರವಾಗಿದೆ. ಪೂರ್ವಕ್ಕೆ ೪ ತಾಲ್ಲೂಕುಗಳು ಬಂದರೆ ಪಶ್ಚಿಮಕ್ಕೆ೪ ತಾಲ್ಲೂಕುಗಳು ಬರುತ್ತವೆ. ಬಳ್ಳಾರಿ, ಸಂಡೂರು, ಶಿರುಗುಪ್ಪಾ ಮತ್ತು ಹೊಸಪೇಟೆ ಪೂರ್ವಕ್ಕೆ ಬರುವ ತಾಲ್ಲೂಕುಗಳಾದರೆ ಪಶ್ಚಿಮಕ್ಕೆ ಬರುವ ತಾಲ್ಲೂಕುಗಳೆಂದರೆ ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಹಡಗಲಿ ಮತ್ತು ಕೂಡ್ಲಿಗಿ.

ಹರಪನಹಳ್ಳಿಯು ಭೌಗೋಳಿಕವಾಗಿ ೧೪೩೮ ಚದರ ಕಿ.ಮಿ ಅಥವಾ ೧೪೩೦೨೪ ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. (ಬಳ್ಳಾರಿ ಜಿಲ್ಲಾ ಅಂಕಿ- ಅಂಶಗಳ ನೋಟ,೧೯೯೫).

(ಬಿ)ಆಡಳಿತಾತ್ಮಕ ಮತ್ತು ಜನಸಂಖ್ಯೆಗೆ ಸಂಬಂಧಪಟ್ಟ ವಿಷಯ.

ಆಡಳಿತಾತ್ಮಕ ಅನುಕೂಲಕ್ಕೆ ಪಶ್ಚಿಮಕ್ಕೆ ಬರುವ ನಾಲ್ಕು ತಾಲ್ಲೂಕುಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಹರಪನಹಳ್ಳಿಯನ್ನು ಉಪವಿಭಾಗದ ಕೇಂದ್ರವನ್ನಾಗಿ ರಚಿಸಲಾಗಿದೆ. ಈ ತಾಲ್ಲೂಕು ೪ ಪ್ರಮುಖ ಹೋಬಳಿಗಳನ್ನು ಹೊಂದಿದೆ. ಅವುಗಳೆಂದರೆ ಚಿಗಟೇರಿ, ಹಲುವಾಗಲು, ಅರಸೀಕೆರಿ, ಮತ್ತು ಹರಪನಹಳ್ಳಿ. ಇತ್ತೀಚೆಗೆ ೧೯೯೩ರಲ್ಲಿ ಸಂವಿಧಾನದ ೭೩ನೇ ತಿದ್ದುಪಡಿಯ ಮೂಲಕ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಅಧಿಕಾರದ ವಿಕೇಂದ್ರಿಕರಣದ ಅನುಕೂಲಕ್ಕೆ ಸದರಿ ತಾಲ್ಲೂಕಿನಲ್ಲಿ ೩೩ ಗ್ರಾಮ ಪಂಚಾಯತಿಗಳು ಅಸ್ತಿತ್ವದಲ್ಲಿದ್ದು ಜನತೆಯ ಆಶೋತ್ತರಗಳಿಗೆ ಶ್ರಮವಹಿಸುತ್ತಿವೆ. ಈ ತಾಲ್ಲೂಕಿನ ಜನಸಂಖ್ಯೆಗೆ ಸಂಬಂಧಪಟ್ಟಂತೆ ೧೯೯೧ರ ಜನಗಣತಿಯ ಪ್ರಕಾರ ಹರಪನಹಳ್ಳಿಯು ೨,೩೪,೦೯೨ ರಷ್ಟು ಜನಸಂಖ್ಯೆ ಹೊಂದಿದೆ. ಇದರಲ್ಲಿ ಮಹಿಳೆಯರು ೧,೧೪,೪೩೬, ಗಂಡಸರು ೧,೧೯,೬೫೬. ಗ್ರಾಮೀಣ ಪ್ರದೇಶದಲ್ಲಿ ೧,೯೯,೯೪೬ ನಗರ ಪ್ರದೇಶದಲ್ಲಿ ೩೪,೧೪೬(ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳ ನೋಟ ೧೯೯೫-೯೬) ಒಟ್ಟಾರೆ ಅಧಿಕ ಜನಸಂಖ್ಯೆಯ ಒತ್ತಡವು ಈ ತಾಲ್ಲೂಕಿನಲ್ಲಿ ಗ್ರಾಮಿಣ ಪ್ರದೇಶದಲ್ಲಿರುವುದು ಕಂಡು ಬರುತ್ತದೆ.

೨.೧.೨: ಹರಪನಹಳ್ಳಿ ತಾಲ್ಲೂಕಿನ ಪ್ರಾಕೃತಿಕ ಸಂಪನ್ಮೂಲಗಳ ಸಂಕ್ಷಿಪ್ತ ನೋಟ.

ಹರಪನಹಳ್ಳಿ ತಾಲ್ಲೂಕಿನ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಗಮನಾರ್ಹವಾದ ಅಂಶಗಳನ್ನು ಹೊಂದಿರುವವೆಂದರೆ (೧) ನೈಸರ್ಗಿಕ ಸಂಪನ್ಮೂಲಗಳು ಮತ್ತು (೨) ಮಾನವ ಸಂಪನ್ಮೂಲಗಳು.

(ಎ)ನೈಸರ್ಗಿಕ ಸಂಪನ್ಮೂಲಗಳು:

ಒಂದು ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ಅಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇದರಲ್ಲಿ ಬರಿದಾಗುವ ನೈಸರ್ಗಿಕ ಸಂಪನ್ಮೂಲಗಳು ಮತ್ತು ಪುನ: ಉತ್ಪಾದಿಸುವ ನೈಸರ್ಗಿಕ ಸಂಪನ್ಮೂಲಗಳೆಂದು, ಹಾಗೆಯೇ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಂಡು ಬರುವ ನೈಸರ್ಗಿಕ ಸಂಪನ್ಮೂಲಗಳೆಂದರೆ ಭೂ ಸಂಪತ್ತು, ಅರಣ್ಯ ಸಂಪತ್ತು, ಜಲ ಸಂಪತ್ತು, ಖನಿಜ ಸಂಪತ್ತು.

(ಬಿ)ಭೂ ಸಂಪತ್ತು:

ಭೂ ಮಾಪನ ಮತ್ತು ಸರ್ವೇಕ್ಷಣಾ ಇಲಾಖೆಯ ಪ್ರಕಾರ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶ ೯.೫೬೨೨೦ ಹೆಕ್ಟೇರ್.ಇದರಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಬಂಜರು ಭೂಮಿ ೩೧೧೬ ಹೆಕ್ಟೇರ್. ಖಾಯಂ ಗೋಮಾಳ ೧೬೦೩ ಹೆಕ್ಟೇರ್ . ವೃಕ್ಷ ಮತ್ತು ತೋಪು ೮೦೫ ಹೆಕ್ಟೇರ್ . ಒಟ್ಟು ಸಾಗುವಳಿ ಮಾಡಿದ ಇತರೆ ಭೂಮಿ ೫೫೨೪ ಹೆಕ್ಟೇರ್ ಸಾಗುವಳಿಗೆ ಯೋಗ್ಯವಲ್ಲದ ಭೂಮಿ ೧೭,೪೯೦ ಹೆಕ್ಟೇರ್, ಒಟ್ಟು ಬೀಳುಬಿದ್ದ ಭೂಮಿ ೪೮೯ ಹೆಕ್ಟೇರ್ (ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳ ನೋಟ ೧೯೯೫-೯೬).

(ಸಿ)ಜಲ ಸಂಪತ್ತು:

ಬಳ್ಳಾರಿ ಜಿಲ್ಲೆಯಲ್ಲಿ ಮಳೆಯ ಅನಿಶ್ಚಿತತೆಯಿಂದ ಇಲ್ಲಿ ನೀರಾವರಿ ಯೋಜನೆಗಳು ಅನಿವಾರ್ಯವಾದವು. ಇಲ್ಲಿ ನೀರು ವಿಪರೀತ ಪೋಲಾಗುವುದನ್ನು ಗಮನಿಸಬಹುದು. ಇಲ್ಲಿ ಮಳೆಯ ನೀರಿನ ಜೊತೆ ,ಅಂತರ್ ಜಲ ಸಂಪತ್ತು ಯಥೇಚ್ಚವಾಗಿ ಲಭ್ಯವಿದೆ. ಹೀಗೆ ಲಭ್ಯವಿದ್ದ ನೀರನ್ನು ಕೃಷಿಗೆ, ಮೀನುಗಾರಿಕೆ, ಕುಡಿಯಲು ಮತ್ತು ಕೈಗಾರಿಕೆಗಳಿಗೆ ಮುಖ್ಯವಾಗಿ ಬೇಕಾಗುವ ವಿದ್ಯುತ್ತನ್ನು ತಯಾರಿಸಲು, ಇನ್ನೂ ಹಲವು ಬಹು ಉಪಯೋಗಿ ಕೆಲಸಗಳಿಗೆ ಬಳಸಲ್ಪಡುತ್ತದೆ. ಆದರೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಲಭ್ಯವಿದ್ದ ನೀರನ್ನು ಬಹು ಉಪಯೋಗಕ್ಕೆ ಬಳಸದೆ ಕೆಲವೇ ಕೆಲವು ಅಂಶಗಳಿಗೆ ಮಾತ್ರ ಬಳಸಲಾಗುತ್ತದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಪ್ರಮುಖವಾಗಿ ಕಂಡು ಬರುವ ಜಲ ಸಂಪತ್ತೆಂದರೆ 'ತುಂಗಭದ್ರಾ ನದಿ'. ಈ ನದಿಯು ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಉಗಮಗೊಂಡು ಹರಿಹರದಿಂದ ಹರಪನಹಳ್ಳಿ ತಾಲ್ಲೂಕನ್ನು ಕಡತಿ ಗ್ರಾಮದ ಮೂಲಕ ಪ್ರವೇಶ ಮಾಡುತ್ತದೆ. ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮೂಲಕ ಸುಮಾರು ೩೨೦ ಕಿ.ಮೀ ಉದ್ದ ಈ ನದಿ ಹರಿಯುತ್ತದೆ. ಇದಲ್ಲದೆ ಚಿಕ್ಕಹಗರಿ ಎಂಬ ಸಣ್ಣ ನದಿಯು ಚಿತ್ರದುರ್ಗ ಜಿಲ್ಲೆಯಲ್ಲಿ ಉಗಮಗೊಂಡು ಹರಪನಹಳ್ಳಿ ತಾಲ್ಲೂಕಿನ ಅಣಜಿಗೆರೆ ಎಂಬಲ್ಲಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮುಂದೆ ಕೂಡ್ಲಿಗಿ ಹಗರಿಬೊಮ್ಮನಹಳ್ಳಿಯ ಮೂಲಕ ಹರಿದು ತುಂಗಭದ್ರೆಯಲ್ಲಿ ವಿಲೀನಗೊಳ್ಳುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸಿದ ವಿವಿಧ ಮೂಲಗಳ ನೀರಾವರಿ ಪ್ರದೇಶದ ವಿವರಗಳನ್ನು ಕೋಷ್ಟಕ ೨.೧ ರಲ್ಲಿ ವಿವರಿಸಲಾಗಿದೆ.

ತಾಲ್ಲೂಕು	ಅಂತರಜಲ	ಬಾಹ್ಯರೂಪದ ನೀರು	ಇತರೆ	ಒಟ್ಟು
ಬಳ್ಳಾರಿ	೧೬.೫೪೫	೫೫,೬೨೦	೪೬	೭೨,೨೧೧
ಹಡಗಲಿ	೮.೬೫೮	೨,೭೪೨	೭.೦೭೪	೧೮,೪೭೪
ಹೆಚ್.ಬಿ.ಹಳ್ಳಿ	೫.೧೭೨	೬,೦೨೨	೧,೦೯೧	೧೨,೨೮೫
ಹರಪನಹಳ್ಳಿ	೯.೯೬೮	೪,೭೬೭	೪,೧೧೦	೧೮,೮೪೫
ಹೊಸಪೇಟೆ	೮.೫೦೫	೧೮,೭೩೦	೫೬೬	೨೭,೮೦೧
ಕೂಡ್ಲಿಗಿ	೮.೬೩೮	೬,೩೭೨	೪೨	೧೫,೪೩೩
ಸಂಡೂರು	೭.೨೨೨	೨,೯೦೪	-	೧೦,೧೨೭
ಶಿರುಗುಪ್ಪ	೯.೦೬೭	೨೪,೯೯೯	೩,೫೪೮	೩೭,೬೧೪
ಒಟ್ಟು	೨೩.೭೭೬	೧,೨೨,೧೫೯	೧೬,೬೭೮	೨,೧೨,೭೯೦

ಕೆರೆಗಳು:

ಬಳ್ಳಾರಿ ಜಿಲ್ಲೆಯಲ್ಲಿರುವ ಪ್ರಮುಖ ಕೆರೆಗಳಿಂದ ನೀರಾವರಿಯನ್ನು ಅಳವಡಿಸಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ೧೭೦ ಸಣ್ಣಕೆರೆಗಳು ಮತ್ತು ೨೨ ದೊಡ್ಡ ಕೆರೆಗಳು ಕಂಡುಬಂದಿವೆ. ಜಿಲ್ಲೆಯಲ್ಲಿ ೧೮,೬೧೩ ಎಕರೆಗೆ ಈ ಕೆರೆಗಳಿಂದ ನೀರಾವರಿ ಸೌಲಭ್ಯವನ್ನು ಬಳಸಲಾಗಿದೆ. ಜಿಲ್ಲೆಯ ಪ್ರಸಿದ್ಧ ಕೆರೆಗಳೆಂದರೆ ದರೋಜಿಕೆರೆ, ಕಮಲಾಪುರಕೆರೆ, ಡಣನಾಯಕನ ಕೆರೆ ಮತ್ತು ಹರಪನಹಳ್ಳಿ ದೊಡ್ಡಕೆರೆ. ಈ ಕೆರೆಗಳಿಂದ ಕೇವಲ ನೀರಾವರಿಯೊಂದೇ ಅಲ್ಲದೆ ಮೀನುಗಾರಿಕೆಯನ್ನು ಅಳವಡಿಸಲಾಗಿದೆ. ಜಲಸಂಪತ್ತನ್ನು ಆಧರಸಿಕೊಂಡು ಜಿಲ್ಲೆಯಲ್ಲಿ ಬೆಳೆದಿರುವ ಮತ್ತೊಂದು ಉದ್ಯಮವೆಂದರೆ ಮೀನುಗಾರಿಕೆ. ಈ ಮೀನುಗಾರಿಕೆಯು ಬಹುತೇಕ ಮಳೆಯನ್ನೆ ಆಶ್ರಯಿಸಿದೆ. ಸರಿಯಾಗಿ ಮಳೆಯಾದರೆ ಎಲ್ಲಾ ಕೆರೆಗಳು ತುಂಬಿಕೊಂಡು ಮತ್ಸ್ಯೋದ್ಯಮಕ್ಕೆ ಸಹಾಯಕವಾಗುತ್ತವೆ. ಈ ಉದ್ಯಮ ಅಲ್ಪ ಪ್ರಮಾಣದಲ್ಲಿ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸಿಕೊಡುತ್ತದೆ. ಜಿಲ್ಲೆಯ ಒಟ್ಟು ಜಲಾವೃತ್ತ ಪ್ರದೇಶವು ೮೪೬೭.೩೨ ಹೆಕ್ಟೇರುಗಳು, ಮೀನುಗಾರರ ಸಂಖ್ಯೆ ೧೬,೭೦೦. ೧೯೮೮-೮೯ರಲ್ಲಿ ೫೮೯೯ಟನ್ ಗಳಷ್ಟು ಮೀನಿನ ಉತ್ಪಾದನೆಯನ್ನು ಕೈಗೊಳ್ಳಲಾಯ್ತು. ಇದರಲ್ಲಿ ಹರಪನಹಳ್ಳಿಯು ೫೭೨.೨೦ ಜಲಾವೃತ್ತ ಪ್ರದೇಶವನ್ನು ಹೊಂದಿದ್ದು ಅಲ್ಪ ಪ್ರಮಾಣದ ಉದ್ಯೋಗವನ್ನು ಒದಗಿಸುತ್ತಿದ್ದು ಇದರಲ್ಲಿ ಮಹಿಳೆಯರ ಪಾಲು ಅಲ್ಪ ಪ್ರಮಾಣದಲ್ಲಿರುವುದು ಕಂಡು ಬರುತ್ತದೆ.(ಶಾಂತ, ೧೯೮೫).

(ಡಿ)ಖನಿಜ ಸಂಪತ್ತು

ಆರ್ಷೆಯ ಕಲ್ಪದ ಶಿಲಾವರ್ಗಗಳು ಬಳ್ಳಾರಿ ಜಿಲ್ಲೆಯಲ್ಲಿ ಹರಡಿದ್ದು ಇವು ಧಾರವಾಡದ, ಪದರ ಶಿಲೆಗಳು ಮತ್ತು ಗ್ರಾನೈಟ್ ಹಾಗೂ ನೈಸ್ ಶಿಲಾಸ್ತೋಮಗಳಿಂದ ಕೂಡಿದೆ. ಧಾರವಾಡದ ಪದರು ಶಿಲೆಗಳು ಜಿಲ್ಲೆಯ ವಾಯುವ್ಯದಿಂದ ಆಗ್ನೆಯ ದಿಕ್ಕಿಗೆ ನಾಲ್ಕು ಪಟ್ಟಣಗಳಲ್ಲಿ ವಿಸ್ತರಿಸಿದೆ. ಜಿಲ್ಲೆಯ ಪಶ್ಚಿಮ ಭಾಗ ಅಂದರೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಬರುವ ಕುಂಚೂರು, ಕಲ್ಲಹಳ್ಳಿ ಗುಡ್ಡದ ಶ್ರೇಣಿ, ಮಲ್ಲಪ್ಪನಗುಡ್ಡ, ಚಿಗಟೇರಿ ಬಳಿ ಇರುವ ಜಾಜಿಕಲ್ಲು ಗುಡ್ಡ ಹೀಗೆ ಹಾದು ಸಂಡೂರು ಮತ್ತು ಬಳ್ಳಾರಿನಗರ ಈಶಾನ್ಯ ದಿಕ್ಕಿನಲ್ಲಿ ಸಾಗಿದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ದೊರೆಯುವ ಪ್ರಮುಖ ಖನಿಜಗಳೇದರೆ, ಹರಪನಹಳ್ಳಿ ನಗರದ ಬಳಿ ತಾಮ್ರದ ಅದಿರು ಇದೆ ಎಂದು ಭೂಗರ್ಭಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಇದಲ್ಲದೆ ಚಿಗಟೇರಿ.

ಕೊಂಗನೊಸೂರು, ಕುಂಚೂರು ಬಳಿ ಚಿನ್ನದ ಅದಿರನ್ನು ಅಲ್ಪ ಪ್ರಮಾಣದಲ್ಲಿ ದೊರೆಯುವ ಮೂಲಗಳನ್ನು ಗುರುತಿಸಲಾಗಿದೆ. ಹರಪನಹಳ್ಳಿ ನಗರದ ಪೂರ್ವಕ್ಕೆ ಮಲ್ಲಪ್ಪನಗುಡ್ಡ-ಜಾಜಿಕಲ್ಲುಗುಡ್ಡ ಶ್ರೇಣಿ ಪ್ರದೇಶಗಳಲ್ಲಿ ಮುಖ್ಯ ಹೇಮಟೈಟ್ -ಅದಿರು ದೊರೆಯುತ್ತವೆ. ಈ ತಾಲ್ಲೂಕಿನ ಎರ್ರಬಾಳು ಗ್ರಾಮದ ಬಳಿ ಕ್ಲೋರೈಟ್ ಪದರ ಶಿಲೆ ಕಂಡುಬಂದಿದೆ. ಆರ್ಥಿಕವಾಗಿ ಮುಖ್ಯವಾದ ಬೆಣಚುಕಲ್ಲು ಅಥವಾ ಕ್ವಾರ್ಟ್ಜ್ ನಿಕ್ಷೇಪಗಳು ಜಿಲ್ಲೆಯಲ್ಲಿ ವಿವಿಧ ಕಡೆಗಳಲ್ಲಿ ಕಂಡುಬಂದಂತೆ, ಹರಪನಹಳ್ಳಿ ತಾಲ್ಲೂಕಿನಲ್ಲಿ ಉದ್ದಗಟ್ಟಿ, ಕಂಚಿಕೇರಿ ಮುಂತಾದ ಕಡೆಗಳಲ್ಲಿ ಕಂಡುಬಂದಿದೆ. ಈ ಬೆಣಚುಕಲ್ಲಿನಿಂದ ಗಾಜು, ಕುಂಬ, ಪಿಂಗಾಣಿ ವಸ್ತುಗಳನ್ನು ತಯಾರಿಸುತ್ತಾರೆ.ಈ ತಾಲ್ಲೂಕಿನ ಹಲವಾರು ವಿಧದ ಖನಿಜಗಳಲ್ಲಿ ಬಹಳ ಸುಲಭವಾಗಿ ದೊರೆಯುವ ಮತ್ತೊಂದು ಸುಣ್ಣದ ಕಲ್ಲು. ಇದು ಈ ತಾಲ್ಲೂಕಿನಲ್ಲಿ ಯಥೇಚ್ಛವಾಗಿ ಕಂಡುಬಂದಿದೆ. ಈ ಸುಣ್ಣದ ಕಲ್ಲಿನಿಂದ ಅನೇಕ ಬಡಕುಟುಂಬಗಳು ಬದುಕಿವೆ. ಇದಲ್ಲದೆ ನಾಜೂಕಾದ ಸೂಕ್ಷ್ಮ ಕೆತ್ತನೆಯ ಕೆಲಸಗಳಿಗೆ ಅನುಕೂಲವಾದ ಮರಗಿಕಲ್ಲು ಅಥವಾ ಸಾಬೂನು ಕಲ್ಲು ಜಿಲ್ಲೆಯಲ್ಲಿ ಪಟ್ಟಣಗಳಂತೆ ವಿವಿಧ ಪ್ರಮಾಣದಲ್ಲಿ ಮಸೂರಾಕೃತಿಯಲ್ಲಿ ದೊರೆಯುತ್ತವೆ. ಅದರಂತೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಮರಗಿಕಲ್ಲು ನರಸಿಂಹದೇವರಬೆಟ್ಟ, ಉಚ್ಚಂಗಿದುರ್ಗ, ನೀಲಗುಂದ, ಬೆಟ್ಟಗಳ ಬಳಿ ದೊರೆಯುತ್ತದೆ.("ಬಳ್ಳಾರಿ ಜಿಲ್ಲಾ ನಿಸರ್ಗಸಂಪತ್ತು ೧೯೯೫").ಹರಪನಹಳ್ಳಿ ತಾಲ್ಲೂಕಿನಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ದೊರೆಯುವ ಮತ್ತೊಂದು ಖನಿಜವೆಂದರೆ 'ಮಣ್ಣು',ಇದು ವ್ಯವಸಾಯಕಷ್ಟೇ ಅಲ್ಲದೆ ಬಹುಪಯೋಗಿ ಕೆಲಸಗಳಿಗೆ ಉಪಯುಕ್ತವಾಗಿದೆ. ಇಟ್ಟಿಗೆ ತಯಾರಿಸಲು ಉತ್ತಮವಾದ ಮಣ್ಣು ಈ ಕ್ಷೇತ್ರದಲ್ಲಿ ಯಥೇಚ್ಛವಾಗಿ ದೊರೆಯುತ್ತದೆ. ಈ ಮಣ್ಣಿನ ಉಪಯೋಗಗಳಿಂದ ಇಲ್ಲಿಯ ಜನತೆ ವಂಚಿತರಾಗಿದ್ದಾರೆ.

ಮೇಲೆ ವಿವರಿಸಿದ ಬಹುತೇಕ ಖನಿಜಗಳು ತಾಲ್ಲೂಕಿನಲ್ಲಿ ಲಭ್ಯವಿದ್ದರು, ಅವು ಬೃಹತ್ ಪ್ರಮಾಣದ ಉದ್ಯಮಗಳನ್ನು ನಿರ್ಮಿಸಲಿಕ್ಕೆ ಸಾಧ್ಯವಾಗಿಲ್ಲ. ಇವು ಕಡಿಮೆ ಪ್ರಮಾಣದಲ್ಲಿ ದೊರೆಯುತ್ತವೆ. ಆದ್ದರಿಂದ ಈ ಸಂಪನ್ಮೂಲಗಳಿಂದ ಸಿದ್ಧ ವಸ್ತುಗಳನ್ನು ತಯಾರಿಸಲು ಖರ್ಚು ಅಧಿಕವಾಗುವುದರಿಂದ ಉದ್ಯಮಗಳ ಸ್ಥಾಪನೆ ಕೈಬಿಡಲಾಗಿದೆ. ಆದರೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದ ಸಂಪನ್ಮೂಲಗಳು ಸರಿಯಾದ ರೀತಿಯಲ್ಲಿ ಬಳಕೆಯಾಗದಿರುವುದು ವಿಶಾದನೀಯ. ಇಲ್ಲಿ ದೊರೆಯುವ ಜೇಡಿಮಣ್ಣಿನಿಂದ ಉತ್ಕೃಷ್ಟವಾದ ಇಟ್ಟಿಗೆಗಳನ್ನು ತಯಾರಿಸಬಹುದೆಂದು ತಿಳಿಸಿವೆ. ಹೀಗೆ ಒಂದು ಪ್ರದೇಶದ ಅಭಿವೃದ್ಧಿಯಲ್ಲಿ ಕೇವಲ ಒಂದೇ ಮೂಲವನ್ನು ಉಪಯೋಗಿಸಿದರೆ ಅಭಿವೃದ್ಧಿ ಸಾಧ್ಯವಿಲ್ಲ. ಇದಕ್ಕೆ ಪೂರಕವಾದ ನೈಸರ್ಗಿಕ ಸಂಪನ್ಮೂಲಗಳು ಅಷ್ಟೇ ಅವಶ್ಯಕ.

(ಈ)ಅರಣ್ಯಸಂಪತ್ತು:

ಮಳೆ ಮತ್ತು ವಾಯುಗುಣದ ಪ್ರಭಾವವು ಯಾವುದೇ ಭೂಭಾಗದ ಸಸ್ಯ ಸಂಪತ್ತಿನ ಮೇಲೆಯೇ ಆಗುವುದು ಸಹಜ. ಯಾವುದೇ ಪ್ರದೇಶದ ಅಭಿವೃದ್ಧಿಗೆ ಅಲ್ಲಿನ ಸಂಪತ್ತು ವಿಶೇಷವಾಗಿ ಅರಣ್ಯಸಂಪತ್ತು ನೆರವಾಗುತ್ತದೆ. ಈಗಾಗಲೇ ತಿಳಿದಿರುವಂತೆ ಕರ್ನಾಟಕದಲ್ಲಿ ಅರಣ್ಯ ಸಂಪತ್ತು ಹೆಚ್ಚಿಸಲು ಅನುಕೂಲಕರವಾದ ವಾತಾವರಣವಿದೆ. ನಾಡಿನ ನಿಸರ್ಗ ಸೌಂದರ್ಯವನ್ನು ಹೆಚ್ಚಿಸುವುದಷ್ಟೇ ಅಲ್ಲದೇ ಆರ್ಥಿಕ ಬಲವನ್ನು ಅರಣ್ಯಗಳು ಒದಗಿಸುತ್ತವೆ.

ಬಳ್ಳಾರಿ ಜಿಲ್ಲೆಯ ಒಟ್ಟು ಭೌಗೋಳಿಕ (೯.೫೬.೨೨೦ಹೆಕ್ಟೇರ್) ವಿಸ್ತೀರ್ಣದಲ್ಲಿ ಅರಣ್ಯ ಪ್ರದೇಶ ೧.೯೯,೨೪೭ ಹೆಕ್ಟೇರನಷ್ಟು ಹೊಂದಿದೆ. ಈ ಪೈಕಿ ಹರಪನಹಳ್ಳಿಯ ಒಟ್ಟು ಭೌಗೋಳಿಕ ವಿಸ್ತೀರ್ಣ(೧೪೩.೦೨೪ ಹೆಕ್ಟೇರ್)ದಲ್ಲಿ ೨೨.೨೩೦ಹೆಕ್ಟೇರ್ ಅರಣ್ಯ ಪ್ರದೇಶದಿಂದ ಆವೃತವಾಗಿದೆ. ಜಿಲ್ಲೆಯ ಶೇ.೯೦ ರಷ್ಟು ಅರಣ್ಯ ಪ್ರದೇಶವು ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ಮತ್ತು ಸಂಡೂರುಗಳಲ್ಲಿ ಕೇಂದ್ರಿಕೃತವಾಗಿದೆ. ಅರಣ್ಯ ಪ್ರದೇಶದಿಂದ ಸಾಮಾನ್ಯ ಜನರ ಉರುವಲು ಕಟ್ಟಿಗೆಯನ್ನು ಬಳಸುತ್ತಿದ್ದಾರೆ. ಮತ್ತು ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ಅರಣ್ಯದ ಒತ್ತುವರಿಯುನಿರಂತರವಾಗಿ ನಡೆಯುತ್ತಿದೆ.

೨.೧.೩ ಮಾನವ ಸಂಪನ್ಮೂಲ:

ಯಾವುದೇ ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳಷ್ಟೇ ಪ್ರಾಮುಖ್ಯತೆಯನ್ನು ಮಾನವ ಸಂಪನ್ಮೂಲ ಹೊಂದಿದೆ. ಆದ್ದರಿಂದ ಮಾನವ ಸಂಪನ್ಮೂಲವು ಸಹ ಪ್ರಮುಖ ಆಸ್ತಿ ಎಂದು ಕರೆಸಿಕೊಳ್ಳುತ್ತದೆ. ದೇಶದ ಆರ್ಥಿಕ ಚಟುವಟಿಕೆಯಲ್ಲಿ ಭಾಗಿಯಾಗುವ ಪ್ರಮುಖ ಅಂಶಗಳಾದ ನೈಸರ್ಗಿಕ ಸಂಪನ್ಮೂಲಗಳ ಬಳಕೆಗಾಗಿ, ಬಂಡವಾಳ ಸಂಚಯನಕ್ಕಾಗಿ, ಉತ್ಪಾದನೆ-ಅನುಭೋಗಕ್ಕಾಗಿ, ದೇಶದ ರಕ್ಷಣೆಗಾಗಿ, ಒಟ್ಟಾರೆ ಮಾನವ ಸಂಪನ್ಮೂಲ ಅತೀ ಅವಶ್ಯಕ. ಮಾನವ ಶಕ್ತಿ ಎಂತಹ ಅದ್ಭುತವನ್ನು ಸಾಧಿಸಬಲ್ಲದು. ದೃಢಕಾಯರಾದ, ಬುದ್ಧಿವಂತರಾದ, ಆರೋಗ್ಯಪೂರ್ಣರಾದ, ಸಂಪ್ರದಾಯಗಳಿಗೆ ಜೋತುಬೀಳದ ವಿಚಾರ ಶೀಲರಾದ ಮನುಷ್ಯರು ನಿಜಕ್ಕೂ ರಾಷ್ಟ್ರದ ಸಂಪತ್ತು ಎನಿಸಿಕೊಳ್ಳುತ್ತಾರೆ.

೧೯೯೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೨,೩೪,೦೯೨–ಮಹಿಳೆಯರು ೧,೧೪,೪೩೬, ಪುರುಷರು ೧,೧೯,೬೫೬, ಗ್ರಾಮೀಣ ಜನಸಂಖ್ಯೆ ೧,೯೯,೯೪೬, ನಗರ ೩೪,೧೪೬. ತಾಲ್ಲೂಕು ಸಾಕ್ಷರತೆ ಪ್ರಮಾಣ ೧೫ ರಿಂದ ೩೫ರ ವಯಸ್ಸಿನವರ ಗಂಡಸರು ೭೯೬೯, ಹೆಂಗಸರು ೧೪.೪೨೧– ಒಟ್ಟು ೧೯,೩೯೦. ಜಾತಿವಾರು ವಿಂಗಡನೆ ಮಾಡುವುದಾದರೆ ಪರಿಶಿಷ್ಟಜಾತಿ ೫೩೯೦೦, ಪರಿಶಿಷ್ಟಪಂಗಡ ೧೪,೪೦೦. ಒಟ್ಟು ಕೆಲಸಗಾರರು ೧,೦೫,೬೦೦, ಕೆಲಸಗಾರರಲ್ಲದವರು ೭೮,೦೦೦(೧೯೯೧ರ ಜನಗಣತಿಯ ಜಿಲ್ಲಾ ಅಂಕಿ-ಅಂಶಗಳ ನೋಟ; ಗೆಜೆಟ್, ೧೯೯೧).

ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ವ್ಯವಸಾಯವೇ ಪ್ರಧಾನ ಪಾತ್ರವಹಿಸುವುದರಿಂದ ಈ ವಲಯದಲ್ಲಿ ದುಡಿಮೆಯಲ್ಲಿ ನಿರತವಾಗಿರುವವರು ಬಹುತೇಕ ಭೂರಹಿತ ಕೃಷಿ ಕಾರ್ಮಿಕರು ಹಾಗೂ ದಲಿತರು. ತಾಲ್ಲೂಕಿನ ಒಟ್ಟುವ್ಯವಸಾಯವು ಮಳೆಯನ್ನೇ ಆಶ್ರಯಿಸಿದೆ. ಜಿಲ್ಲೆಯಲ್ಲಿ ವ್ಯವಸಾಯವು ೪ನೇ ಸ್ಥಾನವನ್ನು ಹೊಂದಿದೆ.

ಶಿಕ್ಷಣದ ಬೆಳವಣಿಗೆ ಕುರಿತ ಅಂಕಿ-ಅಂಶಗಳನ್ನು ನೋಡಿದರೆ ಇಲ್ಲಿ ಮಹಿಳೆಯರಿಗೆ ಅವರ ಬದುಕಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಸ್ಥೆಗಳಾಗಲಿ ಇಲ್ಲವೆ ತರಬೇತಿ ಸಂಸ್ಥೆಗಳಾಗಲಿ ಇದುವರೆಗು ಸ್ಥಾಪನೆಗೊಂಡಿಲ್ಲ. ಈ ತಾಲ್ಲೂಕಿನಲ್ಲಿ ೨೦೧ ಅಂಗನವಾಡಿ ಕೇಂದ್ರಗಳು, ೧೪ ವಿದ್ಯಾರ್ಥಿನಿಲಯಗಳು, ೧೯೦ ಕಿರಿಯ ಪ್ರಾಥಮಿಕ ಶಾಲೆಗಳು, ೨೫ ಪ್ರೌಢಶಾಲೆಗಳು, ೧೦ ಪದವಿಪೂರ್ವ ಕಾಲೇಜುಗಳು, ೨ ಪ್ರಥಮದರ್ಜೆ ಕಾಲೇಜುಗಳು, ಪಾಲಿಟೆಕ್ನಿಕ್, ಬಿ.ಈಡ್, ಫಾರ್ಮಸಿ, ಟಿ.ಸಿ.ಎಚ್., ತಲಾ ಒಂದೊಂದು, ೨ ಖಾಸಗಿ ಕಾಲೇಜುಗಳಿವೆ. (ಜಿಲ್ಲಾ ಅಂಕಿ-ಅಂಶಗಳ ನೋಟ, ೧೯೯೫ -೧೯೯೬).

೨.೨.ಮಹಿಳಾ ಕೃಷಿ ಕಾರ್ಮಿಕ ಮಾಹಿತಿದಾರರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ :

ಯಾವುದೇ ಒಂದು ಕ್ಷೇತ್ರಾಧಾರಿತ ಅಧ್ಯಯನವನ್ನು ಕೈಗೊಂಡಾಗ ಆ ಕ್ಷೇತ್ರದ ಜನರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯನ್ನು ತಿಳಿಯುವುದು ಅವಶ್ಯಕ . ಏಕೆಂದರೆ ಪ್ರತಿಯೊಂದು ಸಮಾಜದಲ್ಲಿ ವಿಭಿನ್ನವಾಗಿ ಗುಂಪು, ಜಾತಿ ಸಮುದಾಯಕ್ಕೆ ಸೇರಿದ ಜನರಿರುತ್ತಾರೆ. ವಿಭಿನ್ನ ಗುಂಪಿಗೆ ಸೇರಿದ ಜನರು ವಿಭಿನ್ನವಾದ ಜೀವನ ಮಟ್ಟವನ್ನು ಹೊಂದಿರುತ್ತಾರೆ. ಇದೇ ರೀತಿಯಾಗಿ ಅವರು ಸಮಾಜದ ಆಗು ಹೋಗುಗಳಿಗೆ ಬೇರೆ ಬೇರೆ ರೀತಿಯಾಗಿ ಸ್ಪಂದಿಸುತ್ತಾರೆ. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಮಹಿಳಾ ಮಾಹಿತಿದಾರರ ಸಾಮಾಜಿಕ ಆರ್ಥಿಕ

ಹಿನ್ನೆಲೆಯನ್ನು ತಿಳಿಯಲು ಪ್ರಯತ್ನಿಸಲಾಗಿದೆ. ನಿರ್ದಿಷ್ಟವಾಗಿ ಈ ಅಧ್ಯಾಯದಲ್ಲಿ ಮಹಿಳಾ ಮಾಹಿತಿದಾರರ ವಯಸ್ಸು, ಶಿಕ್ಷಣ ಮಟ್ಟ, ಉದ್ಯೋಗ, ಆದಾಯ ಮತ್ತು ಅವರ ಗಂಡಂದಿರ ಶಿಕ್ಷಣದ ಮಟ್ಟ, ವೃತ್ತಿ, ಆದಾಯ ಮಕ್ಕಳ ಶಿಕ್ಷಣ ಮತ್ತು ವೃತ್ತಿ ಯ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಲಾಗಿದೆ.

೨.೨.೧ ಮಹಿಳಾ ಮಾಹಿತಿದಾರರ ವಯಸ್ಸು:

ಈ ಮೊದಲು ತಿಳಿಸಿದಂತೆ ಪ್ರಸ್ತುತ ಅಧ್ಯಯನಕ್ಕೆ ೧೦೦ ಮಂದಿ ಮಹಿಳಾ ಕೃಷಿ ಕಾರ್ಮಿಕರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ಮಹಿಳಾ ಮಾಹಿತಿದಾರರು ವಿಭಿನ್ನ ವಯೋಗುಂಪಿಗೆ ಸೇರಿದವರಾಗಿದ್ದು, ಅವರ ವಯೋ ರಚನೆಯನ್ನು ಕೋಷ್ಟಕ ೨.೨ರಲ್ಲಿ ನೀಡಲಾಗಿದೆ. ಈ ಕೋಷ್ಟಕದ ಪ್ರಕಾರ ನಮ್ಮ ಅಧ್ಯಯನದ ಶೇಕಡ ೫೦ ಕ್ಕಿಂತಲೂ ಅಧಿಕ ಮಹಿಳೆಯರು ೩೬-೪೫ ವರ್ಷದ ಗುಂಪಿಗೆ ಸೇರಿದವರಾಗಿದ್ದು, ಶೇ. ೧೮ರಷ್ಟು ಮಹಿಳೆಯರು ೪೬-೫೫ ವಯೋಗುಂಪಿನವರಾಗಿದ್ದಾರೆ. ವಿವರಗಳಿಗೆ (೨.೨ ಕೋಷ್ಟಕ ನೋಡಿ).

ಕೋಷ್ಟಕ ೨.೨ ಮಾಹಿತಿದಾರರ ವಯಸ್ಸು

ಕ್ರ.ಸ.	ವಯಸ್ಸು	ಸಂಖ್ಯೆ	ಶೇಕಡ
೧	೧೮-೨೫	೮	೮.೦೦
೨	೨೬- ೩೫	೧೯	೧೯.೦೦
೩	೩೬- ೪೫	೫೨	೫೨.೦೦
೪	೪೬- ೫೫	೧೮	೧೮.೦೦
೫	೫೬- ೬೦	೬	೬.೦೦
೬	೬೦ಕ್ಕಿಂತ ಅಧಿಕ	೨	೨.೦೦
	ಒಟ್ಟು	೧೦೦	೧೦೦.೦೦

೨.೨.೨ ಧರ್ಮ-ಜಾತಿ:

ಭಾರತೀಯ ಸಮಾಜವು ಅನೇಕ ಜಾತಿ ಹಾಗೂ ಧರ್ಮಗಳನ್ನು ಹೊಂದಿರುವ ಸಮಾಜವಾಗಿದೆ. ಜಾತಿ ಪದ್ಧತಿಯು ಸಾಮಾಜಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು, ಹಲವು ರೀತಿಗಳಲ್ಲಿ ತನ್ನ ಪ್ರಭಾವ ಸೂಚಿಸುತ್ತಿರುತ್ತದೆ. ಶ್ರೇಣೀಕೃತ ಸಮಾಜಕ್ಕೆ ಇದೊಂದು ಮೂಲಭೂತ ಕಾರಣವಾಗಿದೆ. ನಮ್ಮ ಅಧ್ಯಯನದಲ್ಲಿ ವಿವಿಧ ಜಾತಿ ಧರ್ಮಗಳಿಗೆ ಸೇರಿದ ಮಾಹಿತಿದಾರರಿದ್ದು ಅವರ ವಿವರಗಳನ್ನು ಈ ಮುಂದಿನ ೨.೩ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೨.೩ ಮಹಿಳೆಯರ ಧರ್ಮ ಮತ್ತು ಜಾತಿವಾರು ವಿಂಗಡನೆ

ಕ್ರ.ಸ.	ಧರ್ಮ/ಜಾತಿ	ಸಂಖ್ಯೆ	ಶೇಕಡ
೧	ಹಿಂದೂ	೩೦	೩೦.೦೦
೨	ಮುಸ್ಲಿಂ	೨೧	೨೧.೦೦
೩	ಪ.ಜಾ.	೩೯	೩೯.೦೦
೪	ಪ.ಪಂ.	೧೦	೧೦.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೨.೩ರಲ್ಲಿ ತೋರಿಸಿದಂತೆ ಒಟ್ಟು ಶೇ.೭೯ ಮಹಿಳೆಯರು ಹಿಂದೂಗಳು , ಉಳಿದ ೨೧ ಮಹಿಳೆಯರು ಮುಸ್ಲಿಮರು ಇದ್ದಾರೆ. ಹಿಂದೂಗಳಲ್ಲಿ ಶೇ. ೩೯.೦೦ ಪರಿಶಿಷ್ಟ ಜಾತಿಯವರು ಮತ್ತು ಶೇ.೧೦.೦೦ ಮಹಿಳಾ ಮಾಹಿತಿದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ.

೨.೨.೩ ಶಿಕ್ಷಣ ಮತ್ತು ವೃತ್ತಿ:

ಶಿಕ್ಷಣ ಮತ್ತು ಉದ್ಯೋಗ ಪ್ರತಿಯೊಬ್ಬ ವ್ಯಕ್ತಿಯ ಮೂಲ ಅವಶ್ಯಕತೆಗಳು. ಶಿಕ್ಷಣ ಮತ್ತು ಉದ್ಯೋಗಳೆರಡು ಸಾಮಾಜಿಕ ಅಂತಸ್ಥನ್ನು ಅಳೆಯುವ ಮಾಪನವಾಗಿವೆ. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಶಿಕ್ಷಣದ ಪ್ರಾಮುಖ್ಯತೆಯು ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರಿಗೆ ಹೆಚ್ಚು ಅವಶ್ಯಕ ಎಂದು ಇತ್ತೀಚಿನ ಕೆಲವು ಅಧ್ಯಯನಗಳಿಂದ ತಿಳಿದು ಬಂದಿದೆ.(ಸೇನ್ ,೧೯೯೫) (ಟಿ.ಆರ್ .ಚಂದ್ರಶೇಖರ್ ೧೯೯೭) ಈ ಹಿನ್ನೆಲೆಯಲ್ಲಿ ನಮ್ಮ

ಅಧ್ಯಯನದ ಮಾಹಿತಿದಾರರ ಶೈಕ್ಷಣಿಕ ಮಟ್ಟವನ್ನು ತಿಳಿಯುವುದು ಅವಶ್ಯಕ. ಶಿಕ್ಷಣ ಕುರಿತಾದ ಮಹಿತಿ ಯನ್ನು ಕೋಷ್ಟಕ ೨.೪ರಲ್ಲಿ ನೀಡಲಾಗಿದೆ.

ಕೋಷ್ಟಕ.೨.೪: ಮಹಿಳೆಯರ ಶಿಕ್ಷಣ ಮತ್ತು ವೃತ್ತಿವಾರು ವಿಂಗಡನೆ:

ಕ್ರ. ಸಂ.	ಮಹಿಳೆಯರ ವೃತ್ತಿ	ಮಹಿಳೆಯರ ಶಿಕ್ಷಣ				
		ಅವಿದ್ಯಾವಂತರು	ಪ್ರಾಥಮಿಕಶಾಲೆ	ಪ್ರೌಢಶಾಲೆ	ಕಾಲೇಜು.	ಒಟ್ಟು.
೧.	ಮನೆಗೆಲಸ	೨೩ (೬೯.೬೯)	೭ (೨೧.೨೧)	೩ (೯.೦೯)	೦ (೦.೦೦)	೩೩ (೧೦೦)
೨.	ಕೃಷಿಕಾರ್ಮಿಕರು	೯೦ (೯೫.೨೨)	೨ (೪.೭೬)	-	-	೪೨ (೪೨.೦೦)
೩.	ಕಟ್ಟಡ ನಿರ್ಮಾಣ	೨ (೧೦೦)	-	-	-	೨ (೧೦೦)
೪.	ರಸ್ತೆ ನಿರ್ಮಾಣ	೧ (೧೦೦)	-	-	-	೧ (.೧೦೦)
೫.	ಹುಲ್ಲು-ಕಟ್ಟಿಗೆ ತರುವ	೯ (೯೦.೦೦)	೧ (೧೦.೦೦)	-	-	೧೦ (.೧೦೦)
೬.	೧.೨.೩	೨ (೪೦.೦೦)	೩ (೬೦.೦೦)	-	-	೦೫ (.೧೦೦)
೭.	೪.೫.೬	೫ (೭೧.೪೨)	೨ (೨೮.೫೭)	-	-	೦೭ (.೧೦೦)
	ಒಟ್ಟು	೮೨ (೮೨.೦೦)	೧೫ (೧೫.೦೦)	೩ (೧೦.೦೦)	- -	೧೦೦ (೧೦೦.೦೦)

ಕೋಷ್ಟಕ ೨.೪ ರ ಪ್ರಕಾರ ನಮ್ಮ ಅಧ್ಯಯನದ ಶೇ ೮೦ಕ್ಕೂ ಅಧಿಕ ಮಹಿಳೆಯರು ಅನಕ್ಷರಸ್ಥರಾಗಿದ್ದು, ಓದಲು ಬರೆಯಲು ಇವರಿಗೆ ಬರುವುದಿಲ್ಲ. ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯ ಮಹಿಳೆಯರು ಕೃಷಿ ಕಾರ್ಮಿಕರಾಗಿರು.

ವೃತ್ತಿ ವಾರು ದೃಷ್ಟಿಯಿಂದ ಕೋಷ್ಟಕ ೨.೪ ರನ್ನು ಗಮನಿಸಿದರೆ ಶೇ ೪೨ರಷ್ಟು ಕೃಷಿ ಕಾರ್ಮಿಕರಾಗಿ ಮಹಿಳೆಯರು ದುಡಿಯುತ್ತಿದ್ದಾರೆ. ಶೇ ೩೩ ಮಹಿಳೆಯರು ಉನ್ನತ ವರ್ಗದವರ ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಟ್ಟಡ, ರಸ್ತೆ ನಿರ್ಮಾಣದಲ್ಲಿ ತೊಡಗಿರುವ ಮಹಿಳೆಯರನ್ನು ನಮ್ಮ ಅಧ್ಯಯನದಲ್ಲಿ ಕಾಣಬಹುದಾಗಿದೆ.

೨.೨.೪.ಆದಾಯ:

ಆದಾಯವು ಒಬ್ಬ ವ್ಯಕ್ತಿಯ ಸಾಮಾಜಿಕಆರ್ಥಿಕ ಅಂಶವನ್ನು ಅಳೆಯುವ ಪ್ರಮುಖ ಸಾಧನವಾಗಿದೆ. ಆದಾಯಕ್ಕೋಸ್ಕರಪ್ರತಿಯೊಬ್ಬರೂ ಶ್ರಮಪಡಬೇಕಾಗುತ್ತದೆ. ಬಡವರು ಅದರಲ್ಲೂ ಪ್ರತ್ಯೇಕವಾಗಿ ಮಹಿಳೆಯರು ಆದಾಯವನ್ನು ಗಳಿಸುವಲ್ಲಿ ಅತ್ಯಂತ ಶ್ರಮ ವಹಿಸಬೇಕಾಗುತ್ತದೆ. ಕುಟುಂಬದ ಜವಾಬ್ದಾರಿವನ್ನು ಹೊತ್ತು ಹಗಲಿಡೀ, ದುಡಿದು ಮಕ್ಕಳಲಾಲನೆ-ಪಾಲನೆ ಮಾಡಬೇಕಾಗುತ್ತದೆ. ಇಂತಹ ಮಹಿಳೆಯರಲ್ಲಿ ಕೃಷಿಕಾರ್ಮಿಕರ ಪಾಡಂತೂ ಅತ್ಯಂತ ಶೋಚನೀಯವಾಗಿದೆ. ಹಗಲಿಡೀ ದುಡಿದರೂ ದೊರಕುವ ಕೂಲಿ ಪ್ರಮಾಣ ಅತ್ಯಂತ ನಿಕೃಷ್ಟವಾಗಿರುತ್ತದೆ. ಈಹಿನ್ನೆಲೆಯಲ್ಲಿ ನಮ್ಮ ಅಧ್ಯಯನದ ಮಹಿಳೆಯರ ಆದಾಯದ ಪ್ರಮಾಣವನ್ನು ತಿಳಿಯುವುದು ಸೂಕ್ತ. ಮಹಿಳೆಯರಆದಾಯದ ಕುರಿತಾದ ಮಾಹಿತಿಯನ್ನು ಕೋಷ್ಟಕ ೨.೫ರಲ್ಲಿ ನೀಡಲಾಗಿದೆ.

ಕೋಷ್ಟಕ೨.೫: ಮಹಿಳಾ ಕೃಷಿ ಕಾರ್ಮಿಕರ ಮಾಸಿಕ ಆದಾಯ:

ಕ್ರ.ಸಂ.	ಆದಾಯ	ಸಂಖ್ಯೆ	ಶೇಕಡ
೧	ರೂ.೫೦೦ ಕ್ಕಿಂತ ಕಡಿಮೆ	೬೯	೬೯.೦೦
೨	ರೂ.೫೦೧-೭೫೦	೧೬	೧೬.೦೦
೩	ರೂ ೭೫೧-೧,೦೦೦	೯	೯.೦೦
೪	ರೂ ೧,೦೦೦ಕ್ಕಿಂತ ಅಧಿಕ	೬	೬.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೨.೫ ಮಹಿಳಾ ಕೃಷಿ ಕಾರ್ಮಿಕರು ಆದಾಯ ಕುರಿತಂತೆ ಅತ್ಯಂತ ವಿಷಾದನೀಯ ದೃಶ್ಯವನ್ನು ನಮ್ಮೆದಿರು ಇಡುತ್ತದೆ. ಸುಮಾರು ಶೇಕಡ ೭೦ರಷ್ಟು ಮಹಿಳೆಯರ ಆದಾಯವು ಮಾಸಿಕ ರೂ.೫೦೦ಕ್ಕಿಂತಲೂ ಕಡಿಮೆ ಇರುವುದರಿಂದ ಇವರ ಆರ್ಥಿಕ ಪರಿಸ್ಥಿತಿ ಅತ್ಯಂತ ಕೆಳಮಟ್ಟಲ್ಲಿರುವುದು ಕಂಡು ಬರುತ್ತದೆ. ಶೇಕಡ ೧೬ರಷ್ಟು ಮಹಿಳೆಯರ ಮಾಸಿಕ ಆದಾಯವು ರೂ ೫೦೧ರಿಂದ ೭೫೦ರೂಗಳು. ರೂ ೧,೦೦೦ಕ್ಕೆ ಅಧಿಕಆದಾಯವುಳ್ಳ ಮಹಿಳಾ ಕೃಷಿಕಾರ್ಮಿಕರು ಕೇವಲ ಶೇಕಡ ೬.ಈ ಅಧ್ಯಯನದ ಮೂಲಕ ಮಹಿಳೆಯರ ಮೇಲುಂಟಾಗುವ ಆರ್ಥಿಕ ದೌರ್ಜನ್ಯವನ್ನು ತಿಳಿಯಬಹುದಾಗಿದೆ.

೨.೨.೫ ಗಂಡಂದಿರ ಶಿಕ್ಷಣ:

ಮಹಿಳೆಯರ ಸಾಮಾಜಿಕ ಸ್ಥಾನ-ಮಾನ ಮತ್ತು ಅವರ ಗಂಡಿಂದಿರ ಶಿಕ್ಷಣಗಳ ನಡುವೆ ಪ್ರರಸ್ಪರ ನೇರ ಸಂಬಂಧವಿದೆ.ಶಿಕ್ಷಿತ ಗಂಡ ತನ್ನ ಹೆಂಡತಿಯನ್ನು ಗೌರವದಿಂದ ಕಂಡು, ಅವಳ ಜೀವನದಲ್ಲಿ ಸರಿ ಸಮಾನಾಗಿ ಭಾಗಿಯಾಗಬಹುದು.ಗಂಡನ ಅನಕ್ಷರತೆಯು ಮಹಿಳೆಯರಿಗೆ ಅನೇಕ ಅನಾನುಕೂಲಗಳನ್ನು ತಂದೊಡ್ಡಬಹುದು. ಈ ಹಿನ್ನೆಲ್ಲಿ ನಮ್ಮ ಅಧ್ಯಯಯನದ ಮಹಿಳೆಯರ ಗಂಡಂದಿರ ಶಿಕ್ಷಣದ ಮಟ್ಟವನ್ನು ನೋಡಲು ಪ್ರಯತ್ನಿಸಲಾಗಿದೆ. ಈ ಕೋಷ್ಟಕದ ಪ್ರಕಾರ ಸುಮಾರು ಶೇ ೪೫ರಷ್ಟು ಗಂಡಂದಿರು ಅನಕ್ಷರಸ್ಥರಾಗಿದ್ದು, ಇದುಮಹಿಳಾ ಮಾಹಿತಿದಾರ (ಶೇ೮೦) ಅರ್ಧದಷ್ಟಿದೆ. ಶೇಕಡ ೨೬ರಷ್ಟು ಗಂಡಂದಿರು ಪ್ರಾಥಮಿಕ ಶಿಕ್ಷಣವನ್ನು,ಶೇ ೧೨ರಷ್ಟು ಪ್ರೌಢ ಶಿಕ್ಷಣವನ್ನು ಪಡೆದಿರುತ್ತಾರೆ. ನಮ್ಮ ಅಧ್ಯಯನ ಕ್ಷೇತ್ರದ ಮಹಿಳೆಯರಿಗೆ ಹೋಲಿಸಿದರೆ ಗಂಡಂದಿರ ಶಿಕ್ಷಣ ಮಟ್ಟ ಉತ್ತಮವಾಗಿದೆ.

ಕೋಷ್ಟಕ ೨.೬:ಗಂಡಂದಿರ ಶಿಕ್ಷಣದ ಮಟ್ಟ:

ಕ್ರ.ಸಂ.	ಶಿಕ್ಷಣದಮಟ್ಟ	ಸಂಖ್ಯೆ	ಶೇಕಡ
೧	ಅವಿದ್ಯಾವಂತರು	೫೬	೫೬.೦೦
೨	ಪ್ರಾಥಮಿಕ ಶಾಲೆ	೨೧	೨೧.೦೦
೩	ಪ್ರೌಢ ಶಾಲೆ	೧೦	೧೦.೦೦
೪	ಕಾಲೇಜು	೭	೭.೦೦
೫	ಪದವಿ ಶಿಕ್ಷಣ	೩	೩.೦೦
೬	ಸ್ನಾತ್ತಕೋತ್ತರ	೩	೩.೦೦
೭	ತಾಂತ್ರಿಕ ಶಿಕ್ಷಣ	೦	೦.೦೦
	ಒಟ್ಟು	೧೦೦	೧೦೦.೦೦

೨.೨.೬ ವೃತ್ತಿ ಮತ್ತು ಆದಾಯ

ಪ್ರಸ್ತುತ ಅಧ್ಯಯನದ ಮಹಿಳೆಯರ ಗಂಡಂದಿರ ವೃತ್ತಿಯನ್ನು ಗಮನಿಸಿದಾಗ ಗಂಡಂದಿರು ಬೇರೆ ಬೇರೆ ಉದ್ಯೋಗದಲ್ಲಿತೊಡಗಿರುವುದನ್ನು ಕಾಣಬಹುದು. ಕೋಷ್ಟಕ ೨.೭ರಲ್ಲಿ ನೀಡಿರುವ ಮಾಹಿತಿಯ ಪ್ರಕಾರ ಹೆಚ್ಚಿನ ಗಂಡಂದಿರುಕಟ್ಟಡ ಕೆಲಸ (ಶೇ ೨೫.೩೧) ಹಾಗೂ ಕೂಲಿ ಕೆಲಸ (ಶೇ ೨೭.೮೩)

ದಲ್ಲಿ ತೊಡಗಿದ್ದಾರೆ. ಸುಮಾರು ಇದೇ ಪ್ರಮಾಣದ (ಶೇ೨೧.೦೦) ಮಹಿಳೆಯರು ವಿಧವೆಯರಾಗಿದ್ದು ಪ್ರಸ್ತುತ ಪ್ರಶ್ನೆಗೆ ಅವರು ಸಂಬಂಧ ವಿಲ್ಲದವರಾಗಿರುತ್ತಾರೆ. ಶೇ ೧೨.೬೫ರಷ್ಟು ಪುರುಷರು ಸರ್ಕಾರಿ ಕೆಲಸದಲ್ಲಿದ್ದಾರೆ.

ಕೋಷ್ಟಕ ೨.೭: ಮಹಿಳೆಯರ ವೃತ್ತಿ ಮತ್ತು ಗಂಡನ ವೃತ್ತಿ:

ಕ್ರ. ಸಂ.	ಮಹಿಳೆಯರ ವೃತ್ತಿ	ಗಂಡಂದಿರ ವೃತ್ತಿ									
		ವ್ಯವಸಾಯ	ಕಟ್ಟಡ ಕೆಲಸ	ರಸ್ತೆ ಕೆಲಸ	ಮನೆ ಕೆಲಸ	೧,೨	ಕೂಲಿ	ಸರ್ಕಾರ	ವ್ಯಾಪಾರ	ವಿಧವೆಯವರು	ಒಟ್ಟು
೧	ಮನೆಗೆಲಸ	೩	೨	೨	೦	೦	೪	೬	೮	೬	೩೩
											(೩೩.೦೦)
೨	ಕೃಷಿಕಾರ್ಮಿಕ	೬	೧೨	೦	೧	೨	೧೪	೧	೦	೬	೪೨
											(೪೨.೦೦)
೩.	ಕಟ್ಟಡ ಕೆಲಸ	-	-	-	-	-	-	-	೧	೧	೨
											(೨.೦೦)
೪	ರಸ್ತೆನಿರ್ಮಾಣ	-	-	-	-	-	-	-	೧	೧	೧
											(೧.೦೦)
೫	ಹುಲ್ಲುಕಟ್ಟಿಗೆ ತರುವ	-	೩	-	-	-	೪	೨	೧		೧೦
											೧೦.೦೦)
೬	೧. ೨.ಮತ್ತು ೩	-	೧	-	-	-	-	-		೨	೫
											(೫.೦೦)
೭	೪.೫ ಮತ್ತು.೬	೨	೧	೧	-	-	-	-		೩	೬
											(೬.೦೦)
	ಒಟ್ಟು	೯	೨೦	೩	೨	೨೨	೧೦	೧೧		೨೧	೧೦೦
		(೯.೦೦)	(೨೦.೦೦)	(೩.೦೦)	(೨.೦೦)	(೨.೦೦)	(೨೨.೦೦)	(೧೦.೦೦)	(೧೧.೦೦)	(೨೧.೦೦)	

ಇದೇ ಪ್ರಮಾಣದ ಗಂಡಂದಿರು ವ್ಯಾಪಾರದಲ್ಲಿ ತೊಡಗಿದ್ದಾರೆ. ಗಂಡಂದಿರ ಆದಾಯದ ವಿವರವನ್ನು

ಕೋಷ್ಟಕ ೨.೮ರಲ್ಲಿ ತೋರಿಸಲಾಗಿದೆ. ಈ ಕೋಷ್ಟಕವನ್ನು ನೋಡಿದಾಗ ಗಂಡಂದಿರ ಆದಾಯಯವು ಸಹ ಬಹಳ ಕಡಿಮೆ ಇರುವುದು ತಿಳಿದುಬರುತ್ತದೆ. ಇದು ಮಹಿಳಾ ಕೃಷಿ ಕಾರ್ಮಿಕರಿಗೆ ಮತ್ತಷ್ಟು ಸಮಸ್ಯೆಗಳನ್ನು ಉಂಟುಮಾಡುತ್ತದೆ. ಕಡಿಮೆ ಆದಾಯವಿರುವ ಕಾರಣ ಹೆಚ್ಚಿನ ಮಹಿಳೆಯರು ತಮ್ಮ ಕುಟುಂಬಕ್ಕೆ ಗಂಡಂದಿರು ಆರ್ಥಿಕವಾಗಿ ಏನೂ ಸಹಾಯ ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಕೋಷ್ಟಕ ೨.೮:ಗಂಡಂದಿರ ಮಾಸಿಕ ಆದಾಯ

ಕ್ರ.ಸಂ.	ಆದಾಯ	ಸಂಖ್ಯೆ	ಶೇಕಡ
೧	೧೦೦೦ಕ್ಕಿಂತ ಕಡಿಮೆ	೦೦	೦೦.೦೦
೨	೧೦೦೦-೧೫೦೦	೧೩	೧೩.೦೦
೩	೧೫೦೦ -೨೦೦೦	೧೪	೧೪.೦೦
೪	೨೫೦೦- ೩೦೦೦	೨೪	೨೪.೦೦
೫	೩೦೦೦ -೩೫೦೦	೧೦	೧೦.೦೦
೬	ಸಂಬಂಧವಿಲ್ಲ	೨೧	೨೧.೦೦
	ಒಟ್ಟು	೧೦೦	೧೦೦.೦೦
ಸಂಬಂಧವಿಲ್ಲ= ವಿಧವೆಯರು			

೨.೨.೬. ಮಾಹಿತಿದಾರರ ಮಕ್ಕಳ ಶಿಕ್ಷಣದ ಮಟ್ಟ:

ಈ ಮೊದಲು ಹೇಳಿರುವಂತೆ ಮಹಿಳಾ ಕೃಷಿ ಕಾರ್ಮಿಕರಲ್ಲಿ ಅನಕ್ಷರತೆಯ ಪ್ರಮಾಣ ಅಗಾಧವಾಗಿದೆ. ಮಹಿಳೆಯರು ಕೃಷಿ ಕೆಲಸ, ಕಟ್ಟಡ ಕೆಲಸದಲ್ಲಿ ತೊಡಗಿರುವುದರಿಂದ ಶಿಕ್ಷಣದ ಅಗತ್ಯತೆಯನ್ನು ತಳ್ಳಿಹಾಕುತ್ತಾರೆ. ಆದರೆ ಹಲವು ಸಂದರ್ಭದಲ್ಲಿ ಹೆತ್ತವರು ಅನಕ್ಷರಸ್ಥರಾಗಿದ್ದರೂ, ತಮ್ಮ ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ. ತಮಗೆ ಎದುರಾದ ಸಮಸ್ಯೆಗಳು ನಮ್ಮ ಮಕ್ಕಳಿಗೆ ಇಲ್ಲವಾಗಲಿ ಎಂದು ಬಯಸುತ್ತಾರೆ. ಈ ಹಿನ್ನೆಲೆಯನ್ನಿಟ್ಟುಕೊಂಡು ಮಾಹಿತಿದಾರರ ಮಕ್ಕಳ ಶಿಕ್ಷಣದ ಪ್ರಗತಿಯನ್ನು ಪರೀಕ್ಷಿಸುವುದು ಸೂಕ್ತ. ಕೋಷ್ಟಕ ೨.೯ ಮಕ್ಕಳ ಶಿಕ್ಷಣ ಕುರಿತಾದ ಮಾಹಿತಿಯನ್ನು ನೀಡುತ್ತದೆ. ಇದರ ಪ್ರಕಾರ ಮಾಹಿತಿದಾರರ ಒಟ್ಟು ಮಕ್ಕಳ ಸಂಖ್ಯೆ ೪೬೬. ಇದರಲ್ಲಿಶೇಕಡ ೫೬.೦೧ ಗಂಡು ಮಕ್ಕಳು ಹಾಗೂ೪೩.೯೯ಹೆಣ್ಣುಮಕ್ಕಳು. ಗಂಡು ಮಕ್ಕಳ ಸಂಖ್ಯೆ ಅಧಿಕವಿರುವುದರಿಂದ ಹೆಣ್ಣು ಮಕ್ಕಳ ಶಿಕ್ಷಣ ಕುರಿತಂತೆ ನಕಾರಾತ್ಮಕ ಭಾವನೆಯನ್ನು ಕಾಣಬಹುದು. ಮಕ್ಕಳಲ್ಲಿ ಒಟ್ಟು ಶೇ ೧೦.೩೦ರಷ್ಟು ಅನಕ್ಷರಸ್ಥರು. (ಶೇ ೧೦.೩೫ ಗಂಡು, ಶೇ ೧೦.೨೫ ಹೆಣ್ಣು ಮಕ್ಕಳು).ಸಮಾಧಾನಕರವಾದ ಸಂಗತಿ ಏನೆಂದರೆ ಸುಮಾರು ಶೇ ೪೫ರಷ್ಟು ಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವವರು. (ಶೇಕಡ

೪೬.೩೬ರಷ್ಟುಗಂಡು ಮತ್ತು ಶೇ ೪೪.೩೯ರಷ್ಟು ಹೆಣ್ಣು ಮಕ್ಕಳು). ನಮ್ಮ ನಮೂನೆಯಲ್ಲಿನ ಕುಟುಂಬಗಳಲ್ಲಿನ ಮಕ್ಕಳಲ್ಲಿ ಯಾರು ಕೂಡಾ ಪದವಿ ಶಿಕ್ಷಣ ಪಡೆಯದಿರುವುದು ಅತ್ಯಂತ ಅಚ್ಚರಿಯ ಸಂಗತಿಯಾಗಿದೆ. ಶೇಕಡ ೧೯.೪೫ ರಷ್ಟು ಮಕ್ಕಳು ಪ್ರಾಥಮಿಕ ಅಥವಾ ಪ್ರೌಢಶಾಲೆ ಮುಗಿಯುವ ಮೊದಲೇ ಶಾಲೆ ಬಿಟ್ಟಿರುವವರು. ಶಾಲೆ ಅರ್ಧ ಬಿಟ್ಟಿರುವವರಲ್ಲಿ ಅಧಿಕವಾಗಿ ಹೆಣ್ಣು ಮಕ್ಕಳು ಸಿಗುತ್ತಾರೆ. ತಂದೆ-ತಾಯಿಗಳಿಗಿಂತ ಈ ಅಧ್ಯಯನದಲ್ಲಿ ಮಕ್ಕಳ ಶೈಕ್ಷಣಿಕ ಮಟ್ಟವು ಉತ್ತಮವಾಗಿದೆ.ಮಕ್ಕಳ ಉದ್ಯೋಗ, ಆದಾಯ ಹಾಗೂ ಮತ್ತಿತರ ವಿಷಯಗಳಲ್ಲಿ ಅಂತಹ ಗಮನಾರ್ಹ ಮಾಹಿತಿ ಇಲ್ಲದಿರುವುದರಿಂದ ಈ ಅಧ್ಯಯನದಲ್ಲಿ ಮಕ್ಕಳ ಶಿಕ್ಷಣದ ಹಿನ್ನೆಲೆಯನ್ನು ಹೊರತು ಪಡಿಸಿ ಮಕ್ಕಳ ಕುರಿತ ಬೇರೆ ಯಾವುದೇ ಮಾಹಿತಿಯನ್ನು ಈ ಅಧ್ಯಾಯದಲ್ಲಿ ನೀಡಿಲ್ಲ.

ಕೋಷ್ಟಕ:೨.೯ಒಟ್ಟು ಮಕ್ಕಳ ಶಿಕ್ಷಣ ಮಟ್ಟ:

ಕ್ರ.ಸಂ.	ಶಿಕ್ಷಣದ ಮಟ್ಟ	ಗಂಡು	ಹೆಣ್ಣು	ಒಟ್ಟು
೧	ಅನಕ್ಷರಸ್ಥರು	೨೭ (೧೦.೩೫)	೨೧ (೧೦.೨೫)	೪೮ (೧೦.೩೦)
೨	ಪ್ರಾಥಮಿಕ	೧೨೧ (೪೬.೩೬)	೯೧ (೪೪.೩೯)	೨೧೨ (೪೫.೪೯)
೩	ಪ್ರೌಢ	೬೯ (೪.೩೪)	೨೯ (೧೪.೧೪)	೯೮ (೨೧.೦೪)
೪	ಪದವಿಪೂರ್ವ	೧೩ (೪.೯೮)	೨ (೦.೯೭)	೧೫ (೩.೨೨)
೫	ಪದವಿ	-	-	-
೬	ಶಾಲ ಬಿಟ್ಟವರು+	೩೧ (೧೧.೮೭)	೬೨ (೩೦.೨೫)	೯೩ (೧೯.೯೫)
	ಒಟ್ಟು	೨೬೧ (೫೬.೦೧)	೨೦೫ (೪೩.೯೯)	೪೬೬ (೧೦೦.೦೦)

+ ಶಾಲೆ ಬಿಟ್ಟವರು: ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಮಾತ್ರ

೨.೨.೮. ಮಹಿಳಾ ಕೃಷಿ ಕಾರ್ಮಿಕ ಮಾಹಿತಿದಾರರ ಸ್ಥಿರಾಸ್ತಿ ಮತ್ತು ಚರಾಸ್ಥಿಯ ವಿವರ:

ಜನರು ಹೊಂದಿರುವ ಚರಾಸ್ಥಿ-ಸ್ಥಿರಾಸ್ಥಿಯ ಆಧಾರದ ಮೇಲೆ ನಾವು ಅವರ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಬಹುದು. ಮನೆ-ಜಮೀನು ಮುಖ್ಯವಾಗಿ ಸ್ಥಿರಾಸ್ತಿಯಾಗಿದ್ದು, ಟಿ.ವಿ. ರೇಡಿಯೋ ಚರಾಸ್ಥಿಗಳೆಂದು ನಾವು ಈ ಅಧ್ಯಯನದಲ್ಲಿ ವಿಂಗಡಿಸಿದ್ದೇವೆ. ಇವುಗಳ ವಿವರವನ್ನು ಕೋಷ್ಟಕಗಳಲ್ಲಿ ನೀಡಲಾಗಿದೆ.

ಕೋಷ್ಟಕ.೨.೧೦: ಮಹಿಳಾ ಕೃಷಿ ಕಾರ್ಮಿಕ ಸ್ಥಿರಾಸ್ತಿಯ ವಿವರ:

ಕ್ರ.ಸಂ.	ಸ್ಥಿರಾಸ್ಥಿ ವಿವರ	ಇದೆ	ಇಲ್ಲ	ಗೇಣಿ	ಸರ್ಕಾರದ್ದು	ಒಟ್ಟು
೧	ಜಮೀನು	೫೦ (೫೦.೦೦)	೩೮ (೩೮.೦೦)	೬ (೬.೦೦)	೬ (೬.೦೦)	೧೦೦ (೧೦೦.೦೦)
೨	ಮನೆ	೭೭ (೭೭.೦೦)	೧೩ (೧೩.೦೦)	-	೧೦ (೧೦)	೧೦೦ (೧೦೦.೦೦.)

ಕೋಷ್ಟಕ ೨.೧೧:ಜಮೀನು ಮತ್ತು ಮನೆ ಪ್ರಮಾಣ

ಕ್ರ.ಸಂ.	ಸ್ಥೀರಾಸ್ಥಿ ವಿವರ	೧ಎಕರೆ ೧ಮನೆ	೨ಎಕರೆ ೨ಮನೆಗಳು	೩ಎಕರೆ ಜಮೀನು	೪ಎಕರೆ ಜಮೀನು	ಯಾವುದೂ ಇಲ್ಲ	ಒಟ್ಟು
೧	ಜಮೀನು	೧೮ (೧೮.೦೦)	೧೦ (೧೦.೦೦)	೧೩ (೧೩.೦೦)	೨೧ (೨೧.೦೦)	೩೮ (೩೮.೦೦)	೧೦೦ (೧೦೦.೦೦)
೨	ಮನೆ	೮೨ (೮೨.೦೦)	೩ (೩.೦೦)	-	-	೧೩ (೧೩.೦೦)	೧೦೦ (೧೦೦.೦೦)

ಕೋಷ್ಟಕ ೨.೧೦ರ ಪ್ರಕಾರ ಅರ್ಧದಷ್ಟು ಮಹಿಳೆಯರು ಸ್ವಂತ ಜಮೀನು ಹೊಂದಿರುತ್ತಾರೆ. ಶೇ ೧೨ ರಷ್ಟುಮಹಿಳೆಯರಲ್ಲಿ ಸ್ವಂತ ಜಮೀನು ಇಲ್ಲದಿದ್ದರೂ ಗೇಣಿಗೆ ಹಾಗೂ ಸರ್ಕಾರದಿಂದ ಪಡೆದ ಜಮೀನು ಇದೆ. ಶೇಕಡ ೩೮ ರಷ್ಟು ಮಹಿಳೆಯರು ಸ್ವಂತ ಅಥವಾ ಯಾವುದೇ ರೀತಿಯಾದ ಜಮೀನು ಇಲ್ಲದಿರುವುದು ಶೋಚನೀಯವಾಗಿದೆ.ಸಂದರ್ಶನದ ಸಮಯದಲ್ಲಿ ಈ ಮಹಿಳೆಯರು ಈ ಸಮಸ್ಯೆ

ಕುರಿತು ತಮ್ಮ ಪರಿಸ್ಥಿತಿಯನ್ನು ಅತ್ಯಂತ ದಯನೀಯವಾಗಿ ಹೇಳಿಕೊಂಡರು. ನಮ್ಮ ಅಧ್ಯಯನದ ಶೇಕಡ ೧೩ ರಷ್ಟು ಮಹಿಳೆಯರಿಗೆ ಸ್ವಂತ ಮನೆಯೇ ಇಲ್ಲ. ಇದು ನಮ್ಮ ದೇಶದ ವಸತಿ ಸಮಸ್ಯೆಯನ್ನು ಪ್ರತಿಬಿಂಬಿಸುತ್ತದೆ. ಇವರು ತಮ್ಮ ಮನೆ ಮಠವನ್ನು ಕಟ್ಟಡ ನಿರ್ಮಾಣ ಮಾಡುವ ಕಟ್ಟಡದಲ್ಲಿಯೇ ಅಥವಾ ಗುಡಿಸಲುಗಳಲ್ಲಿ ಆಶ್ರಯ ಪಡೆದುಕೊಳ್ಳುತ್ತಾರೆ. ಇದೊಂದು ಅತ್ಯಂತ ಹೀನಾಯವಾದ ಸ್ಥಿತಿಯಾಗಿದೆ. ಸ್ವಾತಂತ್ರ್ಯ ಪಡೆದು ೫೦ ವರ್ಷ ಸಂದರೂ ಜನರಿಗೆ ಮೂಲ ಸೌಕರ್ಯವನ್ನು ಒದಗಿಸಲುಸರ್ಕಾರವು ವಿಫಲವಾಗಿರುವುದನ್ನು ಇದು ಸೂಚಿಸುತ್ತದೆ. ಕೋಷ್ಟಕ ೨.೧೧ರಲ್ಲಿ ತೋರಿಸಿದಂತೆ ಶೇ ೧೮.ರಷ್ಟು ಮಹಿಳೆಯರಿಗೆ ಒಂದು ಎಕರೆಯಷ್ಟು ಜಮೀನು ಇದೆ. ೪ ಎಕರೆಯುಷ್ಟು ಜಮೀನು ಇರುವ ಮಹಿಳೆಯರು ಶೇ೨೧. ಶೇ ೩ರಷ್ಟು ನಮ್ಮ ಅಧ್ಯಯನದ ಮಹಿಳೆಯರಿಗೆ ತಲಾ ಎರಡು ಮನೆಗಳಿವೆ.

ಚರಾಸ್ಥಿಯ ವಿವರವನ್ನು ಕೋಷ್ಟಕ ೨.೧೨ನಲ್ಲಿ ಕೊ ಡಲಾಗಿದೆ. ಅದರ ಪ್ರಕಾರ ೨೫ ಮಹಿಳೆಯರು ರೇಡಿಯೋ,ಟಿ.ವಿ. ಮತ್ತು ಫ್ಯಾನ್ ಗಳ ಸೌಲಭ್ಯವನ್ನು ಹೊಂದಿದ್ದಾರೆ. ರೇಡಿಯೋ ಸೌಕರ್ಯವನ್ನು ಹೆಚ್ಚಿನ ಮಹಿಳೆಯರು ಹೊಂದಿರುತ್ತಾರೆ. ಈ ವಿವರವನ್ನು ಕೋಷ್ಟಕ ೨.೧೨ ರಲ್ಲಿ ನೀಡಲಾಗಿದೆ.

ಕೋಷ್ಟಕ ೨.೧೨: ಮಾಹಿತಿದಾರರ ಚರಾಸ್ಥಿ ವಿವರ:

ಕ್ರ.ಸಂ	ಚರಾಸ್ಥಿಗಳು	ಸಂಖ್ಯೆ	ಶೇಕಡ
೧	ರೇಡಿಯೋಮಾತ್ರ	೩೨	೩೨.೦೦
೨	ಟಿ.ವಿ. ಮಾತ್ರ	೨	೨.೦೦
೩	ಫ್ಯಾನ್ ಮಾತ್ರ	೦	೦.೦೦
೪	ರೆಫ್ರಿಜರೇಟರ್	೦	೦.೦೦
೫	ವಾಹನ	೦	೦.೦೦
೬	ಒಂದು ಮತ್ತು ಎರಡು	೨೫	೨೫.೦೦
೭	ಯಾವುದು ಇಲ್ಲ	೪೧	೪೧.೦೦
	ಒಟ್ಟು	೧೦೦	೧೦೦.೦೦

ಉಪಸಂಹಾರ

ಪ್ರಸ್ತುತ ಅಧ್ಯಯನವನ್ನು ಹರಪನಹಳ್ಳಿ ತಾಲ್ಲೂಕಿನಲ್ಲಿ ಕೈಗೊಂಡಿದ್ದು, ೧೦೦ ಜನ ಮಹಿಳಾ ಕೃಷಿ ಕಾರ್ಮಿಕರಿಂದ ಸಂದರ್ಶನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾಹಿತಿದಾರರಲ್ಲಿ ಶೇ ೭೫ಕ್ಕಿಂತಲೂ ಅಧಿಕ ಮಹಿಳಾ ಕೃಷಿ ಕಾರ್ಮಿಕರು ೩೬ ರಿಂದ ೪೫ವಯೋಗುಂಪಿನವರಾಗಿದ್ದಾರೆ. ಉಳಿದ ಶೇಕಡ ೨೫ರಷ್ಟು ಮಹಿಳೆಯರು ೧೮ ರಿಂದ ೩೫ ವರ್ಷದೊಳಗಿನವರು. ಜಾತಿಯಾಧಾರಿತವಾಗಿ ಶೇ ೮೦ರಷ್ಟು ಮಾಹಿತಿದಾರರು ಹಿಂದುಗಳು, ಮತ್ತು ಶೇ ೨೦ರಷ್ಟು ಮುಸ್ಲಿಂ ಮಹಿಳೆಯರಾಗಿದ್ದಾರೆ. ಹಿಂದುಗಳಲ್ಲಿ ಶೇ ೩೯ರಷ್ಟು ಪರಿಶಿಷ್ಟ ಜಾತಿಗೂ ಮತ್ತು ೧೦ರಷ್ಟು ಪರಿಶಿಷ್ಟ ಪಂಗಡದವರೂ ಸೇರಿದವರಾಗಿದ್ದಾರೆ. ಮಾಹಿತಿದಾರರ ಶೈಕ್ಷಣಿಕ ಮಟ್ಟವು ಅತ್ಯಂತ ಶೋಚನೀಯವಾಗಿದ್ದು. ಶೇ ೮೦ಕ್ಕೂ ಅಧಿಕ ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ. ಹೆಚ್ಚಿನ ಮಹಿಳಾ ಮಾಹಿತಿದಾರರು ಅಸಂಘಟಿತ ವಲಯದಲ್ಲಿ ದುಡಿಮೆ ಮಾಡುವುದರಿಂದ ಅವರ ಆದಾಯದ ಮಟ್ಟವು ಕಡಿಮೆ ಇದೆ ಎಂಬುದು ಆದಾಯದ ಕುರಿತಾದ ಸ್ಪಷ್ಟ ಚಿತ್ರವನ್ನು ಕೊಡುತ್ತದೆ. ಮಹಿಳಾ ಮಾಹಿತಿದಾರರ ಗಂಡಂದಿರ ಶೈಕ್ಷಣಿಕ ಮಟ್ಟವು ಅತ್ಯಂತ ಕೆಳಮಟ್ಟದಲ್ಲಿದ್ದು, ಶೇ ೫೬ರಷ್ಟು ಗಂಡಂದಿರು ಅನಕ್ಷರಸ್ಥರಾಗಿದ್ದಾರೆ, ಹಾಗು ಇವರಲ್ಲಿ ಶೇ ೨೨ ರಷ್ಟು ಕೂಲಿ ಕೆಲಸದಲ್ಲಿ ತೊಡಗಿದ್ದಾರೆ ಮತ್ತು ಶೇ ೨೦ ರಷ್ಟು ಕಟ್ಟಡ ನಿರ್ಮಾಣದ ಕೆಲಸದಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ.ಮಹಿಳೆಯರ ಹಾಗೆ ಅವರ ಗಂಡಂದಿರ ಆದಾಯದ ಪ್ರಮಾಣವೂ ಕಡಿಮೆ ಇದೆ. ಮಹಿಳೆಯರ ಶಿಕ್ಷಣದ ಮಟ್ಟವನ್ನು ಮಕ್ಕಳಿಗೆ ಹೋಲಿಸಿದರೆ, ಮಕ್ಕಳ ಶಿಕ್ಷಣ ಮಟ್ಟದಲ್ಲಿ ಸ್ವಲ್ಪ ಪ್ರಗತಿ ಕಂಡು ಬರುತ್ತದೆ.ಮಾಹಿತಿದಾರರ ಸ್ಥಿತಿಯನ್ನು ಗಮನಿಸಿದರೆ ಶೇಕಡ ೫೦ರಷ್ಟು ಮಹಿಳೆಯರಿಗೆ ಸ್ವಂತ ಜಮೀನು ಇದ್ದು, ಶೇ ೩೮ರಷ್ಟು ಮಹಿಳೆಯರು ಸ್ವಂತ ಜಮೀನು ಹೊಂದಿರುವುದಿಲ್ಲ. ಸುಮಾರು ಶೇ ೩೦ರಷ್ಟು ಮಹಿಳೆಯರಿಗೆ ೧ ರಿಂದ ೨ ಎಕರೆ ಜಮೀನು ಇರುವುದು ಕಂಡುಬಂದಿದೆ. ಇಷ್ಟೇ ಅಲ್ಲದೇ ಚರಾಸ್ಥಿಯ ಪ್ರಮಾಣದಲ್ಲಿಯೂ ಶೇ ೪೦ರಷ್ಟು ಮಹಿಳೆಯರು ರೇಡಿಯೋ, ಟಿವಿ, ಮುಂತಾದವುಗಳನ್ನು ಹೊಂದಿದ್ದಾರೆ.

ಅಧ್ಯಾಯ ೩

ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ ಸಮಸ್ಯೆಗಳು

೩.೧. ಶಿಕ್ಷಣ

೩.೧.೧. ಹರವನಹಳ್ಳಿ ತಾಲ್ಲೂಕು ಇತರೆ ಪುರುಷ–ಕೇಂದ್ರಿತ ಶ್ರೇಣಿಕೃತ ವ್ಯವಸ್ಥೆಗಿಂತ ಹೊರತಾಗಿರುವುದಿಲ್ಲ . ಮಹಿಳೆ ಉತ್ಪಾದನಾ ಮತ್ತು ಪ್ರಜನೋತ್ಪತ್ತಿ ಪ್ರಕ್ರಿಯೆಗಳಲ್ಲಿ ಸತತವಾಗಿ ತೊಡಗಿಸಿಕೊಂಡಿದಾಗ್ಯೂ ನಿಕೃಷ್ಟೀಕರಣಕ್ಕೆ ಒಳಗಾಗಿದ್ದಾಳೆ. ಇದು ತಿಳಿಯದ ವಿಷಯವೇನಲ್ಲ. ಈ ಬಗ್ಗೆ ಸರ್ಕಾರ

ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರ ಆರ್ಥಿಕ-ಸಾಮಾಜಿಕ ಸ್ಥಾನವನ್ನು ಉತ್ತಮ ಪಡಿಸುವಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾಗ್ಯೂ , ಅವರ ಪರಿಸ್ಥಿತಿಯಲ್ಲಿ ಗಣನೀಯವಾದ ಬದಲಾವಣೆಯನ್ನು ಕಾಣಲಿಕ್ಕೆ ಸಾಧ್ಯವಾಗಿಲ್ಲ.೧೯೯೩ರ ಕರ್ನಾಟಕ ರಾಜ್ಯ ಪಂಚಾಯತ್ ಅಧಿನಿಯಮದ ಪ್ರಕಾರ ಗ್ರಾಮೀಣ ಮಹಿಳೆಯರನ್ನು ಸರ್ಕಾರ ಸಶಕ್ತೀಕರಿಸಲು ಪ್ರಯತ್ನಿಸುತ್ತಿದ್ದಾಗ್ಯೂ ಅವರಿನ್ನೂ ರಾಜಕೀಯ, ಆರ್ಥಿಕ, ಪ್ರತಿಕ್ರಿಯೆಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವುದಾಗಲೀ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳುವುದಾಗಲಿ ಸಂಪೂರ್ಣವಾಗಿ ಸಶಕ್ತರಾಗಿಲ್ಲ. ಸಶಕ್ತೀಕರಣಕ್ಕೆ ಅವಶ್ಯಕವಾಗಿ ಬೇಕಾಗುವ ಸವಲತ್ತುಗಳಾದ ಅಕ್ಷರ ಜ್ಞಾನ, ಪ್ರಾಥಮಿಕ ಆರೋಗ್ಯ, ಪೌಷ್ಟಿಕ ಆಹಾರ, ಸುರಕ್ಷಿತ ಕುಡಿಯುವ ನೀರು , ನಿರ್ಮಲವಾತಾವರಣ ಮುಂತಾದವುಗಳಿಂದ ಮಹಿಳೆ ವಂಚಿತಳಾಗಿದ್ದಾಳೆ. ಈ ದಿಸೆಯಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ. ಮತ್ತು ನಮ್ಮ ನೆರೆಯ ರಾಜ್ಯವಾದ ಕೇರಳದಲ್ಲಿ ಸಾಕ್ಷರತೆ ಶೇ ೮೬.೧೭ ರಷ್ಟು ಪ್ರಗತಿಯಾದ್ದರಿಂದ ಈ ರಾಜ್ಯದಲ್ಲಿ ಮಹಿಳೆಯ ಸ್ಥಾನಮಾನ ಗಣನೀಯವಾಗಿದೆ. ಕರ್ನಾಟಕ ರಾಜ್ಯ ಈ ದಿಸೆಯಲ್ಲಿ ಕೇರಳ ರಾಜ್ಯದ ಅನುಭವದಿಂದ ಕಲಿಯಬೇಕಾಗಿರುವುದು ಸಾಕಷ್ಟಿದೆ.(HDR,೧೯೯೫)(HDR,೧೯೯೭)(ಸೇನ್ ಮತ್ತು ಡ್ರಿಜ್ ,೧೯೯೪)(ಶೇಷಾದ್ರಿ, ೧೯೯೭)(ಶೇಷಾದ್ರಿ ಮತ್ತಿತರು,೧೯೯೭).

ಈ ಹಿನ್ನೆಲೆಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವ ಪ್ರಯತ್ನ ಈ ಅಧ್ಯಯನದಲ್ಲಿ ನಡೆದಿದೆ. ಈ ಅಧ್ಯಾಯದಲ್ಲಿ ಪ್ರಮುಖವಾಗಿ ಎಂಟುಭಾಗಗಳಿವೆ. ಎರಡನೆಯ ಭಾಗದಲ್ಲಿ ಮಹಿಳೆಯರ ಸಾಕ್ಷರತೆ-ಅನಕ್ಷರತೆಗಳನ್ನು ಭಾರತದ ಮಟ್ಟದಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ. ಈ ರಾಷ್ಟ್ರಮಟ್ಟದ ಹಿನ್ನೆಲೆಯಲ್ಲಿ ಹರಪನಹಳ್ಳಿ ತಾಲ್ಲೂಕು ಇರುವ ಬಳ್ಳಾರಿ ಜಿಲ್ಲೆಯ,

ಹೈದ್ರಾಬಾದ್ -ಕರ್ನಾಟಕ ಪ್ರದೇಶ ಮತ್ತು ಕರ್ನಾಟಕ ರಾಜ್ಯದಲ್ಲಿನ ಗ್ರಾಮೀಣ ಮಹಿಳೆಯರ ಸಾಕ್ಷರತೆಯ ಸ್ಥಿತಿಯನ್ನು ಮೂರನೇ ಭಾಗದಲ್ಲಿ ವಿವರಿಸಲಾಗಿದೆ.

ಈ ಮೂರು ಭಾಗಗಳು ಆನುಷಂಗಿಕ ಮಾಹಿತಿಯ ಮೇಲೆ ಆಧರಿಸಿವೆ. ನಾಲ್ಕು, ಐದನೇ ಮತ್ತು ಆರನೇ ಭಾಗಗಳು ಕ್ಷೇತ್ರ ಕಾರ್ಯದಿಂದ ಮಾಹಿತಿದಾರರನ್ನು ಸಂದರ್ಶಿಸಿ ಪಡೆದುಕೊಂಡ ಅಭಿಪ್ರಾಯಗಳ ಮೇಲೆ ಚರ್ಚಿಸಲಾಗಿದೆ. ಶಿಕ್ಷಣದ ಬಗ್ಗೆ ಆಯ್ದ ಮಹಿಳಾ ಕೃಷಿ ಕಾರ್ಮಿಕರ ಅಭಿಪ್ರಾಯ ಧೋರಣೆಗಳನ್ನು ನಾಲ್ಕನೇ ಭಾಗದಲ್ಲಿ ಮಂಡಿಸಲಾಗಿದೆ. ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ ರಾತ್ರಿ ಶಾಲೆಯ ಉಪಯುಕ್ತತೆ ಕುರಿತು ಮಹಿಳೆಯರಿಗಿರುವ ಪ್ರತಿಕ್ರಿಯೆಯನ್ನು ಐದನೇ ಭಾಗದಲ್ಲಿ ಚರ್ಚಿಸಲಾಗಿದೆ. ಶಾಲೆಗಳಿದ್ದಾಗ್ಯೂ, ಮಕ್ಕಳು ಶಾಲೆಗೆ ನಿಯಮಿತವಾಗಿ ಹೋಗದಿರಲು, ಹಾಗೂ ಶಾಲೆಗಳನ್ನು ಮಕ್ಕಳು ಬಿಟ್ಟು ಬಿಡಲು ಕಾರಣವಾದ ಅಂಶಗಳನ್ನು ಆರನೇ ಭಾಗದಲ್ಲಿ ಚರ್ಚಿಸಲಾಗಿದೆ. ಮಹಿಳಾ ಕೃಷಿ ಕಾರ್ಮಿಕರ ಆರೋಗ್ಯದ ಸ್ಥಿತಿ ಏಳನೇ ಭಾಗದಲ್ಲಿ ನೀಡಲಾಗಿದೆ. ಅಧ್ಯಯನದ ಮುಖ್ಯ ಫಲಿತಗಳನ್ನು ಎಂಟನೇ ಭಾಗದಲ್ಲಿ ಮಂಡಿಸಲಾಗಿದೆ.

೨.೧.೨. ರಾಷ್ಟ್ರ ಮಟ್ಟದಲ್ಲಿನ ಸಾಕ್ಷರತೆಯ ಪ್ರಗತಿಯನ್ನು ನೋಡುವುದಾದರೆ, ೧೯೫೧ರಲ್ಲಿ ಒಟ್ಟು ಶೇ ೧೮.೩೩. (ಪುರುಷರು ಶೇ ೨೭.೧೬ ಮಹಿಳೆಯರು ೮.೮೬) ೧೯೬೧ ರಲ್ಲಿ ಒಟ್ಟು ಶೇ ೨೮.೩೧. (ಮಹಿಳೆಯರು ಶೇ ೧೫.೩೪ ಪುರುಷರು ಶೇ ೪೦.೪೦). ೧೯೮೧ ರಲ್ಲಿ ಒಟ್ಟು ಶೇ ೪೩.೫೬. (ಶೇ ೫೬.೩೭ ಪುರುಷರು ಶೇ ೨೯.೭೫ರಷ್ಟು ಮಹಿಳೆಯರು) ಪ್ರಮಾಣವನ್ನು ಕಾಣಬಹುದಾಗಿದೆ. ೧೯೯೧ರಲ್ಲಿ ದೇಶದ ಒಟ್ಟು ಶೇ ೫೨.೧೧ರಷ್ಟು ಸಾಕ್ಷರತೆಯ ಪ್ರಗತಿಯನ್ನು ಸಾಧಿಸಿದೆ. ಶೇ ೬೪.೮೬ರ ಪ್ರಮಾಣದಲ್ಲಿ ಪುರುಷರು ಹೊಂದಿದ್ದರೆ ಮಹಿಳೆಯರು ೩೯.೪೨ರಷ್ಟು ಸಾಕ್ಷರತೆಯ ಪ್ರಗತಿಯನ್ನು ಕಾಣಬಹುದಾಗಿದೆ. (ಬೀಜಿಂಗ್‌ಲ್ಲಿ ನಡೆದ ನಾಲ್ಕನೇ ವಿಶ್ವ ಮಹಿಳಾ ಸಮಾವೇಶದ ವರದಿ, ೧೯೯೫).

೩.೩ ಮಹಿಳಾ ಸಾಕ್ಷರತೆಯ ದೃಷ್ಟಿಯಿಂದ ಕರ್ನಾಟಕ ರಾಜ್ಯ ತನ್ನ ನೆರೆ ಹೊರೆಯ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡುಗಳಿಗಿಂತ ಬಹಳ ಹಿಂದುಳಿದಿದೆ. ಕರ್ನಾಟಕದಲ್ಲಿ ೧೯೯೧ರಲ್ಲಿ ಪುರುಷರ ಸಾಕ್ಷರತೆ ಶೇ ೬೭.೨೬ ಆದರೆ ಮಹಿಳೆಯರ ಸಾಕ್ಷರತೆ ಕೇವಲ ೪೪.೩೪ ಮತ್ತು ಒಟ್ಟು ಸಾಕ್ಷರತೆ ಶೇ ೫೬.೦೪. ಕೇರಳ, ತಮಿಳುನಾಡುಗಳಲ್ಲಿ ಈ ಸಾಕ್ಷರತೆ ಪ್ರಮಾಣ ಕ್ರಮವಾಗಿ ೮೬.೯೩ ಮತ್ತು ೫೨.೨೯. ನಮ್ಮ ಅಧ್ಯಯನ ಕ್ಷೇತ್ರವಿರುವ ಬಳ್ಳಾರಿ ಜಿಲ್ಲೆಯ ಹೈದ್ರಾಬಾದ್-ಕರ್ನಾಟಕದ (ಗುಲ್ಬರ್ಗಾ ವಿಭಾಗದಲ್ಲಿ ಬರುವ ನಾಲ್ಕು ಜಿಲ್ಲೆಗಳು ಬಳ್ಳಾರಿ, ಬೀದರ್, ಗುಲ್ಬರ್ಗಾ, ರಾಯಚೂರು) ಮತ್ತು

ಕರ್ನಾಟಕ ರಾಜ್ಯದ ಲಿಂಗವಾರು ಮತ್ತು ಪ್ರದೇಶವಾರು ಸಾಕ್ಷರತೆಯ ಪರಿಸ್ಥಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ ೩.೧ ಲಿಂಗವಾರು ಮತ್ತು ಪ್ರದೇಶವಾರು ಸಾಕ್ಷರತೆ ಪ್ರಮಾಣ ೧೯೯೧

ತಾಲ್ಲೂಕು/ಜಿಲ್ಲೆ				ಗ್ರಾಮೀಣ			ನಗರ		
	ಪುರುಷರು	ಮಹಿಳೆಯರು	ಒಟ್ಟು	ಪುರುಷರು	ಮಹಿಳೆಯರು	ಒಟ್ಟು	ಪುರುಷರು	ಮಹಿಳೆಯರು	ಒಟ್ಟು
ಹರಪನಹಳ್ಳಿ	೪೪.೮೩	೨೪.೦೩	೩೪.೬೫	೪೪.೮೩	೨೪.೦೩	೩೪.೬೫	-	-	-
ಬಳ್ಳಾರಿ	೫೮.೭೧	೩೧.೯೭	೪೫.೫೭	೪೧.೭೯	೧೯.೩೬	೪೧.೭೯	೫೯.೯೧	೪೧.೦೫	೬೦.೯೩
ಹೈದ್ರಾಬಾದ್-ಕರ್ನಾಟಕ	೫೪.೦೧	೨೬.೫೨	೪೦.೪೯	೪೭.೭೧	೧೯.೩೬	೪೦.೪೯	೭೩.೨೩	೪೯.೪೯	೪೦.೪೯
ಕರ್ನಾಟಕ	೬೭.೨೬	೪೪.೩೪	೫೬.೦೪	೬೦.೩೦	೩೪.೭೬	೪೭.೬೯	೮೨.೦೪	೬೫.೭೪	೭೪.೨೦

ಸೂಚನೆ: ೧೯೯೧ರ ಬಳ್ಳಾರಿ ಜಿಲ್ಲಾ ಜನಗಣತಿ ಕೈಪಿಡಿ ಪ್ರಕಾರ (ಪು. ೧೦೯) ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾಕ್ಷರತೆ ದೃಷ್ಟಿಯಿಂದ ನಗರ ಪ್ರದೇಶವೆಂಬುದು ಇಲ್ಲ. ಮೂಲ: (೧) District Socio-Economic Indicators ೧೯೯೩, ಪುಟಗಳು ೧೫-೨೩, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು. (೨) ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ ೧೯೯೨-೯೩. (೩) Selected Indicaters of Population and Health Karnataka, ೧೯೯೫

ಕೋಷ್ಟಕದಲ್ಲಿ ಮಂಡಿಸಿದ ಶೇಕಡಾವಾರು ಅಂಕಿ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ನಮಗೆ ಈ ಕೆಳಗಿನ ಅಂಕಿ ಅಂಶಗಳು ಪ್ರಮುಖವಾಗಿ ಕಂಡು ಬರುತ್ತವೆ:-

(೧) ಹರಪನಹಳ್ಳಿ ತಾಲ್ಲೂಕಿನಲ್ಲಿ ಮಹಿಳೆಯರ ಮತ್ತು ಪುರುಷರ ಸರಾಸರಿ ಸಾಕ್ಷರತಾ ಪ್ರಮಾಣವು ರಾಜ್ಯಮಟ್ಟದ ಸರಾಸರಿ ಸಾಕ್ಷರತಾ ಮಟ್ಟಕ್ಕಿಂತ, ಹೈದ್ರಾಬಾದ್ -ಕರ್ನಾಟಕ ಪ್ರದೇಶದ ಸರಾಸರಿ ಸಾಕ್ಷರತೆ ಮಟ್ಟಕ್ಕಿಂತ ಮತ್ತು ಬಳ್ಳಾರಿ ಜಿಲ್ಲಾ ಸರಾಸರಿ ಸಾಕ್ಷರತಾ ಮಟ್ಟಕ್ಕಿಂತ ಕಡಿಮೆ ಇದೆ.

ಹರಪನಹಳ್ಳಿತಾಲ್ಲೂಕಿನ ಸಾಕ್ಷರತಾ ಪ್ರಮಾಣವು ರಾಜ್ಯದ ಸರಾಸರಿ ಪ್ರಮಾಣಕ್ಕಿಂತ ಶೇ ೨೧.೩೯ ಗುಣಗಳಷ್ಟು (Percentage Points), ಹೈದ್ರಾಬಾದ್ -ಕರ್ನಾಟಕ ಪ್ರದೇಶಕ್ಕಿಂತ ಶೇ ೫.೮೪ ಗುಣಗಳಷ್ಟು ಮತ್ತು ಬಳ್ಳಾರಿ ಜಿಲ್ಲಾ ಸರಾಸರಿ ಸಾಕ್ಷರತಾ ಪ್ರಮಾಣಕ್ಕಿಂತ ಶೇ ೧೦.೯೨ ಗುಣಗಳಿಗಿಂತ ಕೆಳಮಟ್ಟದಲ್ಲಿದೆ.

(೨) ಮಹಿಳಾ ಸಾಕ್ಷರತೆಯಲ್ಲೂ ಸಹ ಮೇಲೆ ವಿವರಿಸಿದ ಸನ್ನಿವೇಶವನ್ನೇ ಕಾಣಬಹುದಾಗಿದೆ. ರಾಜ್ಯದ ಮಹಿಳಾ ಸಾಕ್ಷರತೆ ಸರಾಸರಿಗಿಂತ ಹರಪನಹಳ್ಳಿತಾಲ್ಲೂಕು, ಬಳ್ಳಾರಿ ಜಿಲ್ಲೆ ಮತ್ತು ಹೈದ್ರಾಬಾದ್ -ಕರ್ನಾಟಕ ಸಾಕಷ್ಟು ಹಿಂದುಳಿದಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಹರಪನಹಳ್ಳಿ ತಾಲ್ಲೂಕು ತೀರಾ ಹಿಂದುಳಿದಿರುವುದನ್ನು ಕಾಣಬಹುದು. ಬಳ್ಳಾರಿ ಮತ್ತು ಹೈದ್ರಾಬಾದ್ - ಕರ್ನಾಟಕಗಳು ಕ್ರಮವಾಗಿ ೧೨-೩೭ ಮತ್ತು ೧೭.೮೨ ಶೇಕಡಾ ಅಂಶಗಳಷ್ಟು ಕಡಿಮೆ ಇದ್ದರೆ ಹರಪನಹಳ್ಳಿ ೨೦.೩೧ ಶೇಕಡಾ ಅಂಶಗಳಷ್ಟು ಕಡಿಮೆ ಇದೆ.

(೩) ಗ್ರಾಮೀಣ ಮಹಿಳೆಯರ ಸಾಕ್ಷರತೆಯ ವಿಷಯದಲ್ಲಿ ಪ್ರಮುಖವಾಗಿ ಒಂದು ಅಂಶವನ್ನು ಗಮನಿಸಬಹುದಾಗಿದೆ. ಹರಪನಹಳ್ಳಿ ತಾಲ್ಲೂಕು ಗ್ರಾಮೀಣ ತಾಲ್ಲೂಕೆಂದು ಪರಿಗಣಿಸಲ್ಪಟ್ಟಿದೆ. ಆದಕಾರಣ ಅಧ್ಯಯನದ ಕ್ಷೇತ್ರದಲ್ಲಿ ಮಹಿಳಾ ಸಾಕ್ಷರತೆ ಎಂದರೆ ಗ್ರಾಮೀಣ ಮಹಿಳಾ ಸಾಕ್ಷರತೆ ಎಂದೇ ಅರ್ಥ. ಕಾರಣ ಈ ವಿಷಯದಲ್ಲಿ ತಾಲ್ಲೂಕಿನ ಗ್ರಾಮೀಣ ಮಹಿಳಾ ಸಾಕ್ಷರತೆಯನ್ನು ರಾಜ್ಯದ ಸರಾಸರಿ ಮಹಿಳಾ ಸಾಕ್ಷರತೆಯೊಂದಿಗೆ ಹೋಲಿಸುವುದು ಮಾತ್ರ ಸಮಂಜಸವಾಗುತ್ತದೆ. ಈ ವಿಷಯದಲ್ಲಿ ಹರಪನಹಳ್ಳಿ ರಾಜ್ಯದ ಸರಾಸರಿಗಿಂತ ೧೦.೭೩ ಶೇ ಅಂಶಗಳಷ್ಟು ಕಡಿಮೆ ಇದೆ. ಒಟ್ಟು ಗ್ರಾಮೀಣ ಸಾಕ್ಷರತೆಯನ್ನು ವೀಕ್ಷಿಸಿದರೂ ಹರಪನಹಳ್ಳಿ, ಬಳ್ಳಾರಿ ಜಿಲ್ಲೆ ಮತ್ತು ಹೈದ್ರಾಬಾದ್ -ಕರ್ನಾಟಕ ಪ್ರದೇಶ, ರಾಜ್ಯದ ಸರಾಸರಿಗಿಂತ ದೂರವಿರುವುದು. ಅದರಲ್ಲಿ ಹರಪನಹಳ್ಳಿತಾಲ್ಲೂಕು ತೀರಾ ಹಿಂದುಳಿದಿರುವುದನ್ನು ಕಾಣಬಹುದಾಗಿದೆ.

ಒಟ್ಟಾರೆ ಹೇಳುವುದಾದರೆ ಹರಪನಹಳ್ಳಿ ತಾಲ್ಲೂಕು ಮಹಿಳಾ ಸಾಕ್ಷರತೆಯಲ್ಲಿ ತೀರ ಹಿಂದುಳಿದಿರುವುದು ಮಾನವ ಅಭಿವೃದ್ಧಿಯ ದೃಷ್ಟಿಯಿಂದ, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಭಾಗವಹಿಸುವ ದೃಷ್ಟಿಯಿಂದ, ಪ್ರಜನೋತ್ಪತ್ತಿ ನಿಯಂತ್ರಣದ ದೃಷ್ಟಿಯಿಂದ ಮಹಿಳೆಯರ ಸಾಮಾಜಿಕ, ಮತ್ತು ಆರ್ಥಿಕ ಸ್ಥಾನಮಾನಗಳ ದೃಷ್ಟಿಯಿಂದ ಬಹಳ ಗಮನಾರ್ಹವಾದ ವಿಷಯವಾಗಿದೆ. (ಅಮರ್ತ್ಯಸೇನ್, ೧೯೯೫) ಈ ಮೇಲಿನ ಆನುಷಂಗಿಕ ಮಾಹಿತಿಯ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ವಿಷಯವಸ್ತುವಿಗೆ ಸಂಬಂಧಿಸಿದಂತೆ ನೂರು ಮಂದಿ ಮಹಿಳಾ ಕೃಷಿ ಕಾರ್ಮಿಕರನ್ನು ಸಂದರ್ಶಿಸಿದಾಗ ಹರಪನಹಳ್ಳಿ ತಾಲ್ಲೂಕಿನಲ್ಲಿ ಮಹಿಳೆಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

೨.೧.೪. ಸಾಮಾನ್ಯವಾಗಿ ಅನಕ್ಷರಸ್ಥ ಮಹಿಳಾ ಕೃಷಿ ಕಾರ್ಮಿಕರಲ್ಲಿ ಶಿಕ್ಷಣದ ಪ್ರಜ್ಞೆ ಇರುವುದು ಕಡಿಮೆ ಮತ್ತು ಅದರ ಬಗ್ಗೆ ತಾತ್ಸಾರ ಮನೋಭಾವನೆ ಇರುತ್ತದೆ ಎನ್ನುವ ನಂಬಿಕೆ ಇದೆ. ಆದರೆ ನಮ್ಮ ಕ್ಷೇತ್ರದ ಅಧ್ಯಯನ ಈ ವಿಷಯದ ಬಗ್ಗೆ ಭಿನ್ನವಾದ ಅಭಿಪ್ರಾಯವನ್ನು ಮೂಡಿಸುತ್ತದೆ. ಸಂಪರ್ಕಿಸಿದ ನೂರು ಮಹಿಳಾ ಕಾರ್ಮಿಕರಲ್ಲಿ ಶೇ ೭೧ ರಷ್ಟು ಜನರು ಶಿಕ್ಷಣದ ಅವಶ್ಯಕ ಇದೆ ಎಂದು, ಕೇವಲ ಶೇ ೨೯ರಷ್ಟು ಮಾಹಿತಿದಾರರು ಶಿಕ್ಷಣದ ಅವಶ್ಯಕತೆ ಇಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಶಿಕ್ಷಣದ ಅವಶ್ಯಕತೆ ಇದೆ ಎನ್ನುವವರು ಬೇರೆ ಬೇರೆ ಕಾರಣಗಳನ್ನು ನೀಡಿರುತ್ತಾರೆ. ಶಿಕ್ಷಣ ಬೇಕೆಂದ ೭೧ ಮಾಹಿತಿದಾರರಲ್ಲಿ ೨೬ ಜನರು ಸಮಾನತೆಯನ್ನು ಸಾಧಿಸುವ ದೃಷ್ಟಿಯಿಂದ ಅವಶ್ಯಕವೆಂದು, ೩೩ ಜನರು ಉದ್ಯೋಗ ದೃಷ್ಟಿಯಿಂದ, ೬ ಜನರು ಶೋಷಣೆಯಿಂದ ವಿಮುಕ್ತರಾಗಲು ೬ ಜನರು ತಿಳುವಳಿಕೆದೃಷ್ಟಿಯಿಂದ ಶಿಕ್ಷಣದ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದ್ದಾರೆ. ಈ ಅಂಕಿ ಅಂಶಗಳಿಂದ ಉದ್ಯೋಗ ಮತ್ತು ಸಮಾನತೆಗೆ ಶಿಕ್ಷಣ ಪೂರಕವಾಗುತ್ತೆಂಬ ವಿಚಾರ ಮಹಿಳೆಯರಲ್ಲಿರುವುದು ಕಂಡು ಬರುತ್ತದೆ. ಶಿಕ್ಷಣದ ಅವಶ್ಯಕತೆ ಇಲ್ಲವೆನ್ನುವ ೨೯ ಮಾಹಿತಿದಾರರಲ್ಲಿ ಮಕ್ಕಳ ಮೇಲೆ ಶಿಕ್ಷಣದ ಪ್ರಭಾವ ಕುರಿತು ವಿಭಿನ್ನವಾದ ತಪ್ಪು ಪರಿಕಲ್ಪನೆಗಳಿರುವುದು ಕಂಡು ಬರುತ್ತದೆ. ಅವರಲ್ಲಿ ೧೦ ಜನ, ಶಿಕ್ಷಣದಿಂದ ಮಕ್ಕಳು ತಮ್ಮ ಹಿಡಿತದಿಂದ ತಪ್ಪಬಹುದೆಂಬ ಭಯ ವ್ಯಕ್ತಪಡಿಸಿದರೆ, ಇನ್ನೂ ೧೧ ಜನ ಮಕ್ಕಳು ಅವಿಧೇಯರಾಗುವ ಭಯವನ್ನುವ್ಯಕ್ತಪಡಿಸಿದ್ದಾರೆ. ೫ ಜನ ಶಿಕ್ಷಣಕ್ಕೆ ಹೆಚ್ಚು ವೆಚ್ಚವಾಗುವುದರಿಂದ ಆರ್ಥಿಕ ತೊಂದರೆಯನ್ನು ಎದುರಿಸಬೇಕಾಗುತ್ತದೆಂದು ಮತ್ತು ೩ ಜನರು ಶಿಕ್ಷಣದಿಂದ ಮಕ್ಕಳು ಕೆಟ್ಟದಾರಿ ಹಿಡಿಯುವರೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದನ್ನು ಈ ಮುಂದಿನ ಕೋಷ್ಟಕಗಳಿಂದ ತಿಳಿಯಬಹುದು.

ಕೋಷ್ಟಕ ೩.೨ ಶಿಕ್ಷಣದ ಅವಶ್ಯಕತೆ ಇದೆ ಎನ್ನುವುದಾದರೆ

ಕ್ರ.ಸಂ	ಕಾರಣ	ಸಂಖ್ಯೆ	ಶೇಕಡ
೧.	ಸಮಾನತೆಗಾಗಿ	೨೬	೨೬.೦೦
೨.	ಉದ್ಯೋಗಕ್ಕಾಗಿ	೩೩	೩೩.೦೦
೩.	ಶೋಷಣೆಯಿಂದ ತಪ್ಪಿಸಲು	೬	೬.೦೦
೪.	ತಿಳುವಳಿಕೆ	೬	೬.೦೦
೫.	ಇತರೆ	೦	೦.೦೦
೬.	ಸಂಬಂಧವಿಲ್ಲ	೨೯	೨೯.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೩.೩ ಶಿಕ್ಷಣದ ಅವಶ್ಯಕತೆ ಇಲ್ಲ ಎನ್ನುವುದಾದರೆ

ಕ್ರ.ಸಂ	ಕಾರಣ	ಸಂಖ್ಯೆ	ಶೇಕಡ
೧.	ಮಕ್ಕಳು ನಮ್ಮ ಹಿಡಿತ ತಪ್ಪಬಹುದು	೧೦	೧೦.೦೦
೨.	ಕೆಟ್ಟದಾರಿ ಹಿಡಿಯಬಹುದು	೩	೩.೦೦
೩.	ವಿನಯತೆ ಇರುವುದಿಲ್ಲ	೧೧	೧೧.೦೦
೪.	ಅಧಿಕ ಖರ್ಚು	೫	೫.೦೦
೫	ಸಂಬಂಧವಿಲ್ಲ	೭೧	೭೧.೦೦
	ಒಟ್ಟು	೧೦೦	೧೦೦.೦೦

ನಮ್ಮ ಅಧ್ಯಯನದಲ್ಲಿ ಮಹಿಳೆಯರ ಶಿಕ್ಷಣ ಕುರಿತು ಕೇಳಿದರೆ, ಬಹುತೇಕ ಮಹಿಳೆಯರು ಹೆಣ್ಣುಮಕ್ಕಳಿಗೆ ಸಾಮಾನ್ಯ ತಿಳುವಳಿಕೆ ಅರಿತುಕೊಳ್ಳುವಷ್ಟು ಶಿಕ್ಷಣ ಇದ್ದರೆ ಸಾಕು. ಕಾರಣ ಅವರು ನಿರಂತರವಾಗಿ ನಮ್ಮ ಮನೆಯಲ್ಲಿರುವವರಲ್ಲ. ಈ ಕಾರಣದಿಂದ ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕಲಿಯುವ ಆಸಕ್ತಿ ಇದ್ದರೂ, ಪೋಷಕರೇ ಅವರ ಶಿಕ್ಷಣಕ್ಕೆ ಅಡ್ಡಿಯಾಗುವ ಅನೇಕ ನಿದರ್ಶನಗಳು ಕಂಡು ಬಂದಿವೆ.

೩.೧.೪. ಗ್ರಾಮೀಣ ಪ್ರದೇಶದಲ್ಲಿ ಅನಕ್ಷರಸ್ತರು ಅಧಿಕವಿರುವುದರಿಂದ ಭಾರತ ಸರ್ಕಾರವು ಮಾನವ ಸಂಪನ್ಮೂಲ ಇಲಾಖೆಯಿಂದ ರಾತ್ರಿ ಶಾಲೆಗಳನ್ನು ತೆರೆದಿದ್ದು, ಇವರಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ರವರ ಮಾರ್ಗದರ್ಶನದಲ್ಲಿ ಭಾರತದ ಪ್ರತಿಯೊಂದು ಹಳ್ಳಿಗಳಲ್ಲೂ ಜನ ಶಿಕ್ಷಣ ನಿಲಯಗಳು ಸ್ಥಾಪಿತವಾಗಿವೆ. ಆದರಂತೆ ಹರಪನಹಳ್ಳಿ ತಾಲ್ಲೂಕಿನಲ್ಲಿಯೂ, ೧೪ ಜನ ಶಿಕ್ಷಣ ನಿಲಯಗಳಿದ್ದು, ಇದಲ್ಲದೆ ರಾತ್ರಿ ಶಾಲೆಗಳನ್ನು ತೆರೆದಿದೆ. ಈ ಜನ ಶಿಕ್ಷಣ ನಿಲಯಗಳು ಮತ್ತು ಸಾಕ್ಷರತಾ ಆಂದೋಲನದ ಅಡಿಯಲ್ಲಿ ತೆರೆದ ಕೇಂದ್ರಗಳಲ್ಲಿ ಜನರಿಗೆ ಅನಕ್ಷರಸ್ಥ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಕೇಂದ್ರಗಳನ್ನು ತೆರೆದಿದ್ದು ಇಲ್ಲಿ ಅನೌಪಚಾರಿಕ ಶಿಕ್ಷಣವನ್ನು ಬೋಧಿಸುತ್ತಿದ್ದಾರೆ. ಈ ತಾಲ್ಲೂಕಿನಲ್ಲಿ ೧೫ರಿಂದ ೩೫ ವರ್ಷ ವಯಸ್ಸಿನ ಅನಕ್ಷರಸ್ಥ ಈ ಜನರನ್ನು ಸಾಕ್ಷರರನ್ನಾಗಿಸಲು ೧೯೯೪ ರಿಂದೀಚೆಗೆ ಅನೇಕ ಕಾರ್ಯಕ್ರಮಗಳನ್ವಯ ರಾತ್ರಿ ಶಾಲೆಗಳು ಚಟುವಟಿಕೆಯಲ್ಲಿರುವುದು ಕಂಡು ಬಂದಿದೆ. ಮೇಲಿನ ವಿಷಯವನ್ನಾಧರಿಸಿ ನಾವು ಸಂದರ್ಶಿಸಿದ ೧೦೦ ಮಂದಿ ಮಾಹಿತಿದಾರರಿಂದ ಸಂಗ್ರಹಿಸಿದ ಅಭಿಪ್ರಾಯದಲ್ಲಿ ರಾತ್ರಿ ಶಾಲೆಗಳ ಕುರಿತು ಶೇ ೪೩ ರಷ್ಟು

ಮಹಿಳೆಯರು ರಾತ್ರಿ ಶಾಲೆಗಳು ಕಾರ್ಯಾಚರಣೆ ಮಾಡುತ್ತವೆ ಎಂದು, ಉಳಿದ ಶೇ ೫೭ ರಷ್ಟು ಈ ಶಾಲೆಗಳು ಕಾರ್ಯ ರೂಪದಲ್ಲಿ ಇಲ್ಲವೆಂದು ಅಭಿಪ್ರಾಯ ನೀಡಿದ್ದಾರೆ. ಒಟ್ಟು ೧೦೦ ಮಾಹಿತಿದಾರರ ಪೈಕಿ ಶೇ ೩೦ ರಷ್ಟು ಜನ ಮಾತ್ರ ರಾತ್ರಿ ಶಾಲೆಗೆ ಹಾಜರಾಗುತ್ತಿದ್ದಾರೆ. ಹೆಚ್ಚಿನ ವಿವರಣೆಯನ್ನು ಕೋಷ್ಟಕದ(೩.೩) ಮೂಲಕ ತಿಳಿಯಬಹುದು.

ಕೋಷ್ಟಕ ೩.೪ ನಿಮ್ಮ ಊರಲ್ಲಿ ರಾತ್ರಿ ಶಾಲೆಗಳಿವೆಯೋ?

ಕ್ರ.ಸಂ	ವಿವರ	ಸಂಖ್ಯೆ	ಶೇಕಡ
೧	ಹೌದು	೪೩	೪೩.೦೦
೨.	ಇಲ್ಲ	೫೭	೫೭.೦೦
	ಒಟ್ಟು	೧೦೦	೧೦೦.೦೦

೨.೧.೬ ಕೃಷಿ ಪ್ರಧಾನ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಶಿಕ್ಷಣಕ್ಕೆ ಅನುಕೂಲ ವಾತಾವರಣಕ್ಕಿಂತ ಪ್ರತಿಕೂಲ ವಾತಾವರಣವಿರುವುದು ಸಾಮಾನ್ಯ ವಿಷಯವಾಗಿದೆ. ಇದಕ್ಕೆ ಕೃಷಿ ಕಾರ್ಮಿಕ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಹಾಗುಪ್ರಚಲಿತವಿರುವ ಸಾಮಾಜಿಕ ಪರಿಸ್ಥಿತಿಗಳೆರಡು ಪೂರಕವಾಗಿ ಮಕ್ಕಳ ಶಿಕ್ಷಣವನ್ನು ಕುಂಠಿತಗೊಳಿಸುತ್ತವೆ. ಮಕ್ಕಳ ತಂದೆ-ತಾಯಿಗಳೇ ಮಕ್ಕಳನ್ನು ಶಾಲೆ ಬಿಡಿಸಿ ತಮ್ಮ ಕೂಲಿ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಇಂತಹ ಪರಿಸ್ಥಿತಿ ಕ್ಷೇತ್ರ ಕಾರ್ಯದಿಂದ ತಿಳಿದು ಬರುತ್ತದೆ.

೧೦೦ ಮಂದಿ ಸಂದರ್ಶನದ ಸಮಯದಲ್ಲಿ ದೊರೆತ ಅಭಿಪ್ರಾಯಗಳೆಂದರೆ ಶೇ ೩೪ ಜನ, ಮಹಿಳೆಯರಿಂದ ನಮ್ಮ ಮಕ್ಕಳು ಬಡತನದ ಕಾರಣಕ್ಕಾಗಿ ಶಾಲೆಗೆ ಹೋಗುವುದಿಲ್ಲವೆಂದು ಪ್ರತಿ ಕ್ರಿಯಿಸಿದರೆ, ಮಕ್ಕಳಿಗೆ ಕಲಿಯುವ ಆಸಕ್ತಿ ಇಲ್ಲದಿರುವುದರಿಂದ ಶೇ ೨೯ ಜನ ಶಾಲೆ ಬಿಟ್ಟಿರಲು ಕಾರಣವನ್ನು ಒಡ್ಡಿದರು. ಗ್ರಾಮಾಂತರ ಪ್ರದೇಶದಲ್ಲಿ ಶೇ ೪ ರಷ್ಟು ಮಹಿಳೆಯರು ನಮ್ಮ ಮಕ್ಕಳಿಗೆ ಶಾಲೆ ಕಲಿಯುವ ಆಸಕ್ತಿ ಇದ್ದರು ಶಿಕ್ಷಕರು ಸರಿಯಾಗಿ ಬರುವುದಿಲ್ಲ. ಶಾಲೆಯಲ್ಲಿ ಮಕ್ಕಳ ಸಂಖ್ಯೆ ಅಧಿಕವಿದ್ದರೂ ಶಿಕ್ಷಕರ ಕೊರತೆಯಿಂದ ಮಕ್ಕಳು ಸರಿಯಾಗಿ ಅಭ್ಯಾಸದ ಕಡೆ ಗಮನ ಹರಿಸುವುದು ತೀರಾ ಕಡಿಮೆಯಾದ್ದರಿಂದ ಶಾಲೆಗೆ ಹೋಗುವುದಿಲ್ಲ. ಬದಲು ತಂದೆ-ತಾಯಿಯವರ ಜೊತೆ ದುಡಿಯಲು ಹೋಗುತ್ತಾರೆ. ಶೇ ೩ರಷ್ಟು ಜನ ಅನಾರೋಗ್ಯದ ನಿಮಿತ್ತ ಶಾಲೆಯಿಂದ ವಂಚಿತರಾಗುವುದನ್ನು ಕಾಣಬಹುದಾಗಿದೆ.

ಕೋಷ್ಟಕ ೩.೫ಮಕ್ಕಳು ಶಾಲೆ ಬಿಡಲು ಕಾರಣ

ಕ್ರ.ಸಂ	ಕಾರಣ	ಸಂಖ್ಯೆ	ಶೇಕಡ
೧.	ಬಡತನ	೩೪	೩೪.೦೦
೨.	ಆಸಕ್ತಿ ಇಲ್ಲ	೨೯	೨೯.೦೦
೩.	ಕಲಿಸುವವರಿಲ್ಲ	೪	೪.೦೦
೪.	ಅನಾರೋಗ್ಯ	೩	೩.೦೦
೫	ಅನ್ವಯವಿಲ್ಲ	೩೦	೩೦.೦೦
	ಒಟ್ಟು	೧೦೦	೧೦೦.೦೦

ಮೇಲಿನ ವಿವರಣೆಯಿಂದ ನಾವು ಇನ್ನೊಂದು ಪ್ರಮುಖ ವಿಷಯವನ್ನು ಗಮನಿಸಬಹುದು. ಮಕ್ಕಳು ಯಾವ ಕಾರಣಕ್ಕೆ ಶಾಲೆ ಬಿಟ್ಟಿರುತ್ತಾರೆ ಎನ್ನುವುದರ ಜೊತೆಗೆ ಯಾವ ವಯಸ್ಸಿಗೆ ಶಾಲೆ ಬಿಟ್ಟಿರುತ್ತಾರೆ ಎನ್ನುವುದು ಅಷ್ಟೇ ಮುಖ್ಯವಾಗಿ ಕಾಣಿಸುತ್ತದೆ. ಕಾರಣ ಈ ಭಾಗದಲ್ಲಿ ಬಹುತೇಕ ಮಹಿಳಾ ಕೃಷಿ ಕಾರ್ಮಿಕರು ತಮ್ಮ ಜೊತೆ ತಮ್ಮ ಮಕ್ಕಳನ್ನು ದುಡಿಯಲ್ಲಿಕ್ಕೆ ಕರೆದುಕೊಂಡು ಹೋಗುವುದನ್ನು ಕಾಣಬಹುದಾಗಿದೆ. ೭ ರಿಂದ ೮ನೇ ವಯಸ್ಸಿನ ಮಕ್ಕಳು ಶೇ ೩೭ ರಷ್ಟು ಶಾಲೆ ಬಿಟ್ಟರೆ ೯ ರಿಂದ ೧೧ ವಯಸ್ಸಿನ ಸಂಖ್ಯೆ ಶೇ ೩೦ ರಷ್ಟು, ೧೩ರಿಂದ ೧೬ವಯಸ್ಸಿನ ಮಕ್ಕಳ ಶೇ ೭ರಷ್ಟು ಶಾಲೆ ಬಿಟ್ಟಿರುತ್ತಾರೆ. ಒಟ್ಟಾರೆ ಶೇ ೭೪ ರಷ್ಟು ಮಕ್ಕಳು ಶಾಲೆಯಿಂದ ವಂಚಿತರಾಗಿರುವುದನ್ನು ಕಾಣಬಹುದಾಗಿದೆ.

ಮಕ್ಕಳು ಯಾವ ವಯಸ್ಸಿಗೆ ಶಾಲೆ ಬಿಟ್ಟಿರುತ್ತಾರೆ ಎನ್ನುವ ಅಂಶದ ಜೊತೆಗೆ ಇನ್ನೊಂದು ಪ್ರಮುಖ ವಿಷಯವನ್ನು ಗಮನಿಸಬಹುದು. ಸಂದರ್ಶಿಸಿದ ೧೦೦ ಮಂದಿ ಮಾಹಿತಿದಾರರ ಪೈಕಿ ಶಾಲೆಯನ್ನು ಯಾರು ಬಿಡಿಸಿದ್ದಾರೆ ಇಲ್ಲವೇ ಅವರೇ ಬಿಟ್ಟಿರುತ್ತಾರೆ ಎನ್ನುವುದು ಪ್ರಮುಖ ಚರ್ಚೆಯ ವಿಷಯ. ಶಾಲೆ ಬಿಟ್ಟಿರುವವರಲ್ಲಿ ಶೇ ೭೪ ಮಕ್ಕಳು ವಿವಿಧ ಕಾರಣಗಳಿಂದ ಶಾಲೆ ಬಿಟ್ಟರೆ ಮಕ್ಕಳಿಗೆ ಕಲಿಕೆಯ ವಾತಾವರಣದಿಂದ ವಂಚಿತರಾಗಿರುವುದರಿಂದ ಶೇ ೩೨ ರಷ್ಟು ಮಕ್ಕಳು ತಾವೇ ಶಾಲೆಯನ್ನು ಬಿಟ್ಟಿರುವುದನ್ನು ಗಮನಿಸಬಹುದು. ಇಷ್ಟೇ ಅಲ್ಲದೆ ಕುಟುಂಬದಲ್ಲಿ ಆರ್ಥಿಕ ಹೊರೆ ಹೆಚ್ಚಾಗಿರುವುದರಿಂದ ಮಕ್ಕಳನ್ನು ಸಣ್ಣ ಪುಟ್ಟ ಕೆಲಸಗಳಿಗೆ ಕರೆದುಕೊಂಡು ಹೋಗುವುದನ್ನು ಕಾಣಬಹುದಾದ್ದರಿಂದ, ಶೇ ೪೨ರಷ್ಟು ಜನ ತಂದೆ-ತಾಯಿಗಳೇ ಮಕ್ಕಳನ್ನು ಶಾಲೆ ಬಿಡಿಸಿರುವುದನ್ನು ಕಾಣಬಹುದಾಗಿದೆ.

೩.೨.ಹರಪನಹಳ್ಳಿ ತಾಲ್ಲೂಕು ಮಹಿಳಾ ಕೃಷಿ ಕಾರ್ಮಿಕರು ಮತ್ತು ಆರೋಗ್ಯ

ಸಾಮಾಜಿಕ, ಆರ್ಥಿಕ, ರಾಜಕೀಯ ಹಿನ್ನೆಲೆಯಲ್ಲಿ ಮಹಿಳೆ ದ್ವಿತೀಯ ದರ್ಜೆಯ ಅಥವಾ ಇನ್ನೂ ಕೆಳ ಮಟ್ಟದ ಸ್ಥಾನವನ್ನು ಹೊಂದಿದ್ದಾಳೆ. ಬಡತನದ ರೇಖೆಗಿಂತ ಕೆಳಮಟ್ಟದಲ್ಲಿ ಬದುಕುವ ಅನೇಕ ಮಹಿಳೆಯರು "ಅಸಂಘಟಿತ ವಲಯದಲ್ಲಿ ಅಧಿಕವಾಗಿದ್ದಾರೆ. ಇವರಲ್ಲಿ ಕಡಿಮೆ ಪ್ರಮಾಣದ ಕೂಲಿ ಅಧಿಕ ದುಡಿಮೆ ಹಾಗು ಉದ್ಯೋಗದಲ್ಲಿ ಅಭದ್ರತೆ ಇರುತ್ತದೆ. ಪ್ರಪಂಚದ ಒಟ್ಟು ಮಹಿಳಾ ಕಾರ್ಮಿಕರ ಶಕ್ತಿಯ ಶೇ ೯೪ ರಷ್ಟು ಮಹಿಳೆಯರು ಶೋಷಣೆಯ ಸುಳಿಗೆ ಒಳಗಾಗಿದ್ದಾರೆ". (ವಿಶ್ವಸಂಸ್ಥೆ ವರದಿ,೧೯೯೫) ಉದ್ಯೋಗಸ್ಥ ಮಹಿಳೆಯರು ಕೌಟುಂಬಿಕ ಕೆಲಸಗಳಲ್ಲದೆ ಮನೆಯ ಹೊರಗೂ ದುಡಿಯುವುದು ಅನಿವಾರ್ಯವಾಗಿದೆ. ಇದರಿಂದಾಗಿ ಆಕೆ ಅನೇಕ ಮಾನಸಿಕ, ದೈಹಿಕ ತೊಂದರೆಗಳನ್ನು ಎದುರಿಸಬೇಕಾಗಿದೆ. ಪುನರುತ್ಪಾದನಾ ಚಟುವಟಿಕೆಯಲ್ಲಿ ಭಾಗಿಯಾದ ನಂತರ ಮಕ್ಕಳ ಲಾಲನೆ ಪಾಲನೆಯಲ್ಲಿ ಅವಳ ಪಾತ್ರ ಪ್ರಮುಖವಾದದ್ದು. ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ತಾಯಿಯ ಪಾತ್ರ ಹಿರಿದಾದ್ದು. ಆದರೆ ಆರ್ಥಿಕ ಅನಿವಾರ್ಯತೆಗಳಿಂದ ಅವಳು ತನ್ನ ಮಕ್ಕಳಿಂದ ಹಗಲಿಡೀ, ದೂರವಿರಬೇಕಾದ ಸಂದರ್ಭ ಹೆಚ್ಚು. ಈ ಕಾರಣದಿಂದ ಮಕ್ಕಳ ದೈಹಿಕ ಹಾಗು ಸಾಮಾಜಿಕ ಅಭಿವೃದ್ಧಿ ಕುಂಠಿತವಾಗುತ್ತದೆ. (ಜಯರಾಮ್ ಎನ್ ೧೯೯೦).

ವಿಶ್ವ ಸಂಸ್ಥೆಯ ವರದಿಯ ಪ್ರಕಾರ "ಭಾರತದ ಮಹಿಳೆಯರ ಆರೋಗ್ಯ ಮತ್ತು ಪೌಷ್ಟಿಕತೆಯನ್ನು ತೆಗೆದುಕೊಂಡರೆ ಅಲ್ಲೂ ನಮಗೆ ಸಮಾಧಾನಕರ ಅಂಶ ಕಂಡು ಬರುವುದಿಲ್ಲ. ಆರೋಗ್ಯಕ್ಕೆ ಸಂಬಂಧ ಪಟ್ಟಂತೆ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ".

ಪ್ರಸ್ತುತ ಅಧ್ಯಯನದ ಕ್ಷೇತ್ರವು ಹೈದ್ರಾಬಾದ್-ಕರ್ನಾಟಕ ಪ್ರಾಂತದ ಬಳ್ಳಾರಿ ಜಿಲ್ಲೆಯ, ಹರಪನಹಳ್ಳಿ ತಾಲ್ಲೂಕನ್ನು ಕೇಂದ್ರೀಕರಿಸಿದೆ. ಇಲ್ಲಿನ ಮಹಿಳೆಯರ ಸ್ಥಿತಿಗತಿಯನ್ನು ಕುರಿತು ಲಭ್ಯವಿದ್ದ ಆನುಷಂಗಿಕ ಮಾಹಿತಿಯ ಮೂಲಕ ತಿಳಿಯಬಹುದಾಗಿದೆ. ಇಲ್ಲಿ ದುಡಿಯುವ ಮಹಿಳೆಯರ ಆರೋಗ್ಯದ ಸ್ಥಿತಿಗತಿಯನ್ನು ತಿಳಿಯಬಹುದಾಗಿದೆ.

ಹೈದ್ರಾಬಾದ್-ಕರ್ನಾಟಕ (ಬಳ್ಳಾರಿ, ಬೀದರ್ , ಗುಲ್ಬರ್ಗಾ, ರಾಯಚೂರು) ಈ ಪ್ರದೇಶವು ಪ್ರಾದೇಶಿಕ ಅಸಮಾನತೆಯನ್ನು ಎದುರಿಸುತ್ತಿದೆ.(ಶೇಷಾದ್ರಿ,ಬಿ.ಮತ್ತು ಟಿ.ಆರ್ .ಚಂದ್ರಶೇಖರ್, ೧೯೯೭) ಸರ್ಕಾರದಿಂದ ದೊರೆಯುವ ಅವಕಾಶಗಳಿಂದ ವಂಚಿತವಾಗಿದೆ. ಇದು ಕೇವಲ ಯಾವುದೇ

೩.೨.ಹರಪನಹಳ್ಳಿ ತಾಲ್ಲೂಕು ಮಹಿಳಾ ಕೃಷಿ ಕಾರ್ಮಿಕರು ಮತ್ತು ಆರೋಗ್ಯ

ಸಾಮಾಜಿಕ, ಆರ್ಥಿಕ, ರಾಜಕೀಯ ಹಿನ್ನೆಲೆಯಲ್ಲಿ ಮಹಿಳೆ ದ್ವಿತೀಯ ದರ್ಜೆಯ ಅಥವಾ ಇನ್ನೂ ಕೆಳ ಮಟ್ಟದ ಸ್ಥಾನವನ್ನು ಹೊಂದಿದ್ದಾಳೆ. ಬಡತನದ ರೇಖೆಗಿಂತ ಕೆಳಮಟ್ಟದಲ್ಲಿ ಬದುಕುವ ಅನೇಕ ಮಹಿಳೆಯರು "ಅಸಂಘಟಿತ ವಲಯದಲ್ಲಿ ಅಧಿಕವಾಗಿದ್ದಾರೆ. ಇವರಲ್ಲಿ ಕಡಿಮೆ ಪ್ರಮಾಣದ ಕೂಲಿ ಅಧಿಕ ದುಡಿಮೆ ಹಾಗು ಉದ್ಯೋಗದಲ್ಲಿ ಅಭದ್ರತೆ ಇರುತ್ತದೆ. ಪ್ರಪಂಚದ ಒಟ್ಟು ಮಹಿಳಾ ಕಾರ್ಮಿಕರ ಶಕ್ತಿಯ ಶೇ ೯೪ ರಷ್ಟು ಮಹಿಳೆಯರು ಶೋಷಣೆಯ ಸುಳಿಗೆ ಒಳಗಾಗಿದ್ದಾರೆ". (ವಿಶ್ವಸಂಸ್ಥೆ ವರದಿ,೧೯೯೫) ಉದ್ಯೋಗಸ್ಥ ಮಹಿಳೆಯರು ಕೌಟುಂಬಿಕ ಕೆಲಸಗಳಲ್ಲದೆ ಮನೆಯ ಹೊರಗೂ ದುಡಿಯುವುದು ಅನಿವಾರ್ಯವಾಗಿದೆ. ಇದರಿಂದಾಗಿ ಆಕೆ ಅನೇಕ ಮಾನಸಿಕ, ದೈಹಿಕ ತೊಂದರೆಗಳನ್ನು ಎದುರಿಸಬೇಕಾಗಿದೆ. ಪುನರುತ್ಪಾದನಾ ಚಟುವಟಿಕೆಯಲ್ಲಿ ಭಾಗಿಯಾದ ನಂತರ ಮಕ್ಕಳ ಲಾಲನೆ ಪಾಲನೆಯಲ್ಲಿ ಅವಳ ಪಾತ್ರ ಪ್ರಮುಖವಾದದ್ದು. ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ತಾಯಿಯ ಪಾತ್ರ ಹಿರಿದಾದ್ದು. ಆದರೆ ಆರ್ಥಿಕ ಅನಿವಾರ್ಯತೆಗಳಿಂದ ಅವಳು ತನ್ನ ಮಕ್ಕಳಿಂದ ಹಗಲಿಡೀ, ದೂರವಿರಬೇಕಾದ ಸಂದರ್ಭ ಹೆಚ್ಚು. ಈ ಕಾರಣದಿಂದ ಮಕ್ಕಳ ದೈಹಿಕ ಹಾಗು ಸಾಮಾಜಿಕ ಅಭಿವೃದ್ದಿ ಕುಂಠಿತವಾಗುತ್ತದೆ. (ಜಯರಾಮ್ ಎನ್ ೧೯೯೦).

ವಿಶ್ವ ಸಂಸ್ಥೆಯ ವರದಿಯ ಪ್ರಕಾರ "ಭಾರತದ ಮಹಿಳೆಯರ ಆರೋಗ್ಯ ಮತ್ತು ಪೌಷ್ಟಿಕತೆಯನ್ನು ತೆಗೆದುಕೊಂಡರೆ ಅಲ್ಲೂ ನಮಗೆ ಸಮಾಧಾನಕರ ಅಂಶ ಕಂಡು ಬರುವುದಿಲ್ಲ. ಆರೋಗ್ಯಕ್ಕೆ ಸಂಬಂಧ ಪಟ್ಟಂತೆ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ".

ಪ್ರಸ್ತುತ ಅಧ್ಯಯನದ ಕ್ಷೇತ್ರವು ಹೈದ್ರಾಬಾದ್-ಕರ್ನಾಟಕ ಪ್ರಾಂತದ ಬಳ್ಳಾರಿ ಜಿಲ್ಲೆಯ, ಹರಪನಹಳ್ಳಿ ತಾಲ್ಲೂಕನ್ನು ಕೇಂದ್ರೀಕರಿಸಿದೆ. ಇಲ್ಲಿನ ಮಹಿಳೆಯರ ಸ್ಥಿತಿಗತಿಯನ್ನು ಕುರಿತು ಲಭ್ಯವಿದ್ದ ಆನುಷಂಗಿಕ ಮಾಹಿತಿಯ ಮೂಲಕ ತಿಳಿಯಬಹುದಾಗಿದೆ. ಇಲ್ಲಿ ದುಡಿಯುವ ಮಹಿಳೆಯರ ಆರೋಗ್ಯದ ಸ್ಥಿತಿಗತಿಯನ್ನು ತಿಳಿಯಬಹುದಾಗಿದೆ.

ಹೈದ್ರಾಬಾದ್-ಕರ್ನಾಟಕ (ಬಳ್ಳಾರಿ, ಬೀದರ್ , ಗುಲ್ಬರ್ಗಾ, ರಾಯಚೂರು) ಈ ಪ್ರದೇಶವು ಪ್ರಾದೇಶಿಕ ಅಸಮಾನತೆಯನ್ನು ಎದುರಿಸುತ್ತಿದೆ.(ಶೇಷಾದ್ರಿ,ಬಿ.ಮತ್ತು ಟಿ.ಆರ್ .ಚಂದ್ರಶೇಖರ್, ೧೯೯೭) ಸರ್ಕಾರದಿಂದ ದೊರೆಯುವ ಅವಕಾಶಗಳಿಂದ ವಂಚಿತವಾಗಿದೆ. ಇದು ಕೇವಲ ಯಾವುದೇ

ಒಂದು ಅಂಶಕ್ಕೆ ಮಾತ್ರ ಸೀಮಿತವಾಗಿರದೆ ಸಾಮಾಜಿಕ, ಆರ್ಥಿಕ, ರಾಜಕೀಯ, ಆರೋಗ್ಯದ ವಿಷಯದಲ್ಲಿಯೂ ಸಹ ತೀವ್ರ ಅಸಮಾನತೆಯನ್ನು ಎದುರಿಸುತ್ತಿದೆ. ಈ ವಿವರಣೆಗೆ ಪೂರಕವಾದ ಕೆಲವು ಮಾಹಿತಿಗಳ ಮೂಲಕ ತಿಳಿಯಬಹುದಾಗಿದೆ. ೧೯೯೪ ರಲ್ಲಿ ರಾಜ್ಯ ಒಟ್ಟು ೧೩೫೭ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗು ೭೭೯೩ ಉಪ ಕೇಂದ್ರಗಳನ್ನು ಹೊಂದಿದೆ. ಇದೇ ರೀತಿ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ೨೩೮ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಇದೇ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯು ೪೭ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೊಂದಿದ್ದರೆ, ೨೪೦ ಉಪ ಕೇಂದ್ರಗಳನ್ನು ಹೊಂದಿದೆ. ಇದೇ ರೀತಿ ಹರಪನಹಳ್ಳಿ ತಾಲ್ಲೂಕಿನಲ್ಲಿ ೬ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ೭ ಉಪ ಕೇಂದ್ರಗಳು ಇವೆ. ಅಂದರೆ ಕರ್ನಾಟಕದ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶವು ಕೊನೆಯ ಸ್ಥಾನವನ್ನು ಹೊಂದಿದ್ದರೆ, ಬಳ್ಳಾರಿಯನ್ನು ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ೧೮ನೇ ಸ್ಥಾನವನ್ನು ಪಡೆದಿದೆ. ಹರಪನಹಳ್ಳಿಯು ಬಳ್ಳಾರಿ ಜಿಲ್ಲೆಯಲ್ಲಿ ಎರಡನೆಯ ಸ್ಥಾನವನ್ನು ಹೊಂದಿದೆ. ಮೇಲಿನ ಅಂಕಿ ಅಂಶಗಳ ಆಧಾರದ ಮೇಲೆ ಗುಲ್ಬರ್ಗಾ ವಿಭಾಗದ ಜನರ ಆರೋಗ್ಯದ ಸ್ಥಿತಿಯು ಅತ್ಯಂತ ಕೆಳಮಟ್ಟದಲ್ಲಿದೆ. ಕರ್ನಾಟಕದಲ್ಲಿ ಪ್ರತಿ ೧೮,೯೧೯ ಗ್ರಾಮೀಣ ನಿವಾಸಿಗಳಿಗೆ ಒಂದು ಪ್ರಾಥಮಿಕ ಆರೋಗ್ಯ ಘಟಕವಿದ್ದರೆ ಪ್ರತಿ ೧೪,೭೫೦ ಜನರಿಗೊಂದು ಉಪಕೇಂದ್ರ ಇದೆ. ಹೈದ್ರಾಬಾದ್ ಕರ್ನಾಟಕ ಪ್ರಾಂತದಲ್ಲಿ ೨೩,೦೩೨ ಜನರಿಗೊಂದು ಪ್ರಾಥಮಿಕ ಆರೋಗ್ಯಕೇಂದ್ರವಿದ್ದರೆ ಪ್ರತಿ ೪,೧೯ ಜನರಿಗೆ ಉಪ ಕೇಂದ್ರವಿದೆ. ಬಳ್ಳಾರಿ ಜಿಲ್ಲೆಯಲ್ಲಿ ೨೩,೩೧೨ ಜನರಿಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದರೆ ೪,೫೬೫ ಜನರಿಗೊಂದು ಉಪ ಕೇಂದ್ರದ ಸೌಲಭ್ಯ ದೊರೆಯುತ್ತದೆ. ಹರಪನಹಳ್ಳಿಯಲ್ಲಿ ಪ್ರತಿ ೩೮,೯೦೦ ಜನರಿಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರವೂ, ಪ್ರತಿ ೩೩,೪೪೨ ಜನರಿಗೊಂದು ಉಪಕೇಂದ್ರವೂ ಲಭ್ಯವಾಗಿವೆ. ಹರಪನಹಳ್ಳಿಯಲ್ಲಿ ಪ್ರತಿ ೧೭,೦೫೪ ಜನರಿಗೊಂದು ಆಸ್ಪತ್ರೆ ಈ ತಾಲ್ಲೂಕಿನ ಜನತೆಯ ಆರೋಗ್ಯವನ್ನು ಸುಧಾರಿಸುವಲ್ಲಿ ಕಾರ್ಯತತ್ಪರವಾಗಿದೆ. (ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಪುಟ ೨೮) (Selected Indicators of population and Health, Karnataka೧೯೯೫,ಮತ್ತು Taluk Soci-Economic Indicators,೧೯೯೫)ಪುಟ ೨೦೧).

ಈ ಹಿನ್ನೆಲೆಯನ್ನಿಟ್ಟುಕೊಂಡು ನಮ್ಮ ಮಹಿಳಾ ಮಾಹಿತಿದಾರರನ್ನು ತಮ್ಮ ಆರೋಗ್ಯದ ಬಗ್ಗೆ ವಿಚಾರಿಸಿದಾಗ ಈಕೆಳಗಿನಂತೆ ಅಭಿಪ್ರಾಯಗಳು ಮೂಡಿಬಂದವು. ಶೇ ೫೭ ಮಹಿಳೆಯರು ತಮ್ಮ ಕುಟುಂಬವು ಆರೋಗ್ಯವಾಗಿವೆಯೆಂದು ಹೇಳಿದರೆ, ಶೇ ೪೪ ರಷ್ಟು ಮಹಿಳೆಯರು ತಮ್ಮ ಕುಟುಂಬದ

ಸದಸ್ಯರು ವಿವಿಧ ಕಾಯಿಲೆಗಳಿಂದ ನರಳುತ್ತಿದ್ದಾರೆ ಎಂದರು. ಈ ಶೇ ೪೪ ಮಹಿಳೆಯರು ತಮ್ಮ ಕುಟುಂಬದ ಸದಸ್ಯರಲ್ಲಿ ಕೆಲವರು ಕ್ಷಯಾ, ಕ್ಯಾನ್ಸರ್ ಹಾಗು ಇತರೆ ಸಣ್ಣ ಪುಟ್ಟ ಕಾಯಿಲೆಗಳಿಂದ ಬಳಲುತ್ತಿದ್ದಾರೆಂದು ಹೇಳಿದರು. ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಬಹು ದೂರದವರೆಗೆ ನಡೆದುಕೊಂಡು ಹೋಗ ಬೇಕಾದ್ದರಿಂದ ಸಾರಿಗೆ ಸಮಸ್ಯೆ ಇದೆ. ಈ ಕುರಿತು ಮಹಿಳೆಯರನ್ನು ವಿಚಾರಿಸಿದಾಗ ನೀವು ಕಾಯಿಲೆಯಾದರೆ ಯಾವ ವೈದ್ಯರನ್ನು ಕಾಣುವಿರಿ ಎಂಬ ಪ್ರಶ್ನೆಗೆ ಶೇ ೨೦ ಖಾಸಗೀ ವೈದ್ಯರನ್ನು ಶೇ ೪೩ ರಷ್ಟು ಸರ್ಕಾರಿ ವೈದ್ಯರನ್ನು ಶೇ ೯ ರಷ್ಟು ಆಯುರ್ವೇದಿಕ್ ವೈದ್ಯರನ್ನು ಶೇ ೪ ರಷ್ಟು ನಾಟಿ ವೈದ್ಯರನ್ನು, ಶೇ ೨೪ ರಷ್ಟು ದೇವರು ಮತ್ತಿತರ ಅಂಶಗಳ ಮೂಲಕ ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳುತ್ತೇವೆ ಎಂದರು. ಇದನ್ನು ಕೋಷ್ಟಕ ೩.೬ ಮೂಲಕ ತಿಳಿಯಬಹುದು.

ಕೋಷ್ಟಕ :೩.೬ಕಾಯಿಲೆಯಾದರೆ ವಿವಿಧ ಬಗೆಯ ವೈದ್ಯರ ಉಪಚಾರ ಪಡೆಯುವ ಬಗ್ಗೆ

ಕ್ರ.ಸಂ	ವೈದ್ಯರು	ಸಂಖ್ಯೆ	ಶೇಕಡ
೧.	ಖಾಸಗಿ	೨೦	೨೦.೦೦
೨.	ಸರ್ಕಾರಿ	೪೩	೪೩.೦೦
೩.	ಆಯುರ್ವೇದಿಕ್	೯	೯.೦೦
೪.	ನಾಟಿ	೪	೪.೦೦
೫.	ದೇವರು	೨೪	೨೪.೦೦
೬.	೧,೨ ಮತ್ತು ೩	೦	೦.೦೦
೭.	ಇತರೆ	೦	೦.೦೦
	ಒಟ್ಟು	೧೦೦	೧೦೦.೦೦

ಮಹಿಳೆಯರು ನಿರಂತರವಾಗಿ ದುಡಿಮೆಯಲ್ಲಿ ತೊಡಗಿರುವುದರಿಂದ ತಮಗೆ ಅನಾರೋಗ್ಯ ಸಂಭವಿಸಿದಾಗ ಇವರು ಬೇಗನೆ ಆಸ್ಪತ್ರೆಗೆ ಹೋಗುವಂತಹ ಅವಕಾಶವನ್ನು ಕಳೆದು ಕೊಳ್ಳುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳು ಅತ್ಯಂತ ಕಳಪೆ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಕೆಲವೆಡೆ ಇದರ ಸೌಲಭ್ಯ ಉತ್ತಮವಾಗಿದ್ದರೆಅದು ಹಳ್ಳಿಗಳಿಂದ ಬಹಳ ದೂರದಲ್ಲಿರುತ್ತವೆ. ಇದರಿಂದಾಗಿ ರೋಗದಿಂದ ಬಳಲುತ್ತಿರುವವರು ಇನ್ನಷ್ಟೇ ತೀವ್ರವಾದ ಪರಿಸ್ಥಿತಿಗೆ

ಒಳಗಾಗುತ್ತಾರೆ. ಈ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನ ಕ್ಷೇತ್ರದ ಮಹಿಳಾ ಕಾರ್ಮಿಕರನ್ನು ವಿಚಾರಿಸಿದಾಗ ಬಂದ ಮಾಹಿತಿಯನ್ನು ಕೋಷ್ಟಕ ೩.೭ ನೀಡಲಾಗಿದೆ.

ಕೋಷ್ಟಕ ೩.೭ಗ್ರಾಮೀಣ ಪ್ರದೇಶದಿಂದ ಆಸ್ಪತ್ರೆಗಳಿರುವ ಅಂತರ (ಕಿ.ಮೀ)

ಕ್ರ.ಸಂ	ಅಂತರ ಕಿ.ಮೀಗಳಲ್ಲಿ	ಸಂಖ್ಯೆ	ಶೇಕಡ
೧.	೦-ಗಿಂತ ಕಡಿಮೆ	೨೭	೨೭.೦೦
೨.	೧-೨ ಕಿ.ಮೀ	೩೧	೩೧.೦೦
೩.	೩-೫ ಕಿ.ಮೀ	೧೭	೧೭.೦೦
೪.	೬-೮ ಕಿ.ಮೀ	೧	೧.೦೦
೫.	೯- ಅಧಿಕ	೨೪	೨೪.೦೦
	ಒಟ್ಟು	೧೦೦	೧೦.೦೦

ಮಾಹಿತಿದಾರರನ್ನು ವೈದ್ಯಕೀಯ ಸೇವೆಯ ಬಗ್ಗೆ ವಿಚಾರಿಸಿದಾಗ ಶೇ ೨೭ ಮಹಿಳೆಯರು ವೈದ್ಯಕೀಯ ಸೇವೆ ಒಂದರಿಂದ ಎರಡು ಕಿ.ಮೀ ಅಂತರದಲ್ಲಿದೆ ಎಂದರು. ಶೇ ೧೮ ಮಹಿಳೆಯರು ೩-೮ ಕಿ.ಮೀ, ಶೇ ೨೪ರಷ್ಟು ಮಹಿಳೆಯರು ೯ಕಿ.ಮೀ ಕ್ಕಿಂತ ವೈದ್ಯಕೀಯ ಸೌಲಭ್ಯಕ್ಕಾಗಿ ಅಧಿಕ ದೂರ ಹೋಗಬೇಕಾಗುತ್ತದೆ ಎಂದರು. ಈಕಾರಣದಿಂದ ಬಹುತೇಕ ಮಹಿಳೆಯರು ತಮ್ಮ ಪ್ರಜನೋತ್ಪತ್ತಿ ಕ್ರಿಯೆಗಳನ್ನು ತಮ್ಮ ಮನೆಯಲ್ಲಿಯೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ನಾವು ಸಂಗ್ರಹಿಸಿದ ಮಾಹಿತಿದಾರರ ಪೈಕಿ ಶೇ ೪೭ರಷ್ಟು ಮಹಿಳೆಯರು ತಮ್ಮ ಮನೆಯಲ್ಲಿಯೇ ಹೆರಿಗೆ ಮಾಡಿಕೊಂಡರೆ ಉಳಿದ ೫೩ ಮಹಿಳೆ ಲಭ್ಯವಿರುವ ವೈದ್ಯಕೀಯ ಅವಕಾಶಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದನ್ನು ಕೋಷ್ಟಕ ೩.೮ ರ ಮೂಲಕ ತಿಳಿಯಬಹುದು.

ಕೋಷ್ಟಕ:೩.೮ ಮಾಹಿತಿದಾರರ ಮನೆಯಲ್ಲಿ/ಆಸ್ಪತ್ರೆಯಲ್ಲಿ ಹೆರಿಗೆ ಕ್ರಿಯೆ ಕುರಿತು

ಕ್ರ.ಸಂ	ಮಾಹಿತಿ	ಸಂಖ್ಯೆ	ಶೇಕಡ
೧.	ಮನೆಯಲ್ಲಿ ಸಂಭವಿಸುತ್ತದೆ	೪೭	೪೭.೦೦
೨.	ಆಸ್ಪತ್ರೆಯಲ್ಲಿ ಸಂಭವಿಸುದಿಲ್ಲ	೫೩	೫೩.೦೦
	ಒಟ್ಟು	೧೦೦	೧೦೦.೦೦

ಗ್ರಾಮೀಣ ಪ್ರದೇಶದ ಮಹಿಳೆಯರ ಆರೋಗ್ಯವನ್ನು ಸುಧಾರಿಸುವ ದೃಷ್ಟಿಯಿಂದ ಗ್ರಾಮಗಳ ಮಟ್ಟದಲ್ಲಿ ದಾದಿಯರು (ಎ.ಎನ್ .ಎಮ್) ಕಾರ್ಯ ನಿರ್ವಹಿಸುತ್ತಿದ್ದು ಈ ಬಗ್ಗೆ ಮಹಿಳೆಯರನ್ನು ನಿಮ್ಮ ಮನೆಗೆ ದಾದಿಯರು ಸಮಯಕ್ಕೆ ಸರಿಯಾಗಿ ಬರುವರೇ, ಇವರಿಂದ ನಿಮ್ಮ ಕಾಯಿಲೆಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ, ಮತ್ತು ಪುಕ್ಕಟೆ ಔಷಧಿಯನ್ನು ಪಡೆಯುವಿರಾ ಎಂದು ಪ್ರಶ್ನಿಸಿದಾಗ ಶೇ ೪೬ರಷ್ಟು ಮಾಹಿತಿದಾರರು ದಾದಿಯರು ಸಮಯಕ್ಕೆ ಸರಿಯಾಗಿ ಬರುವುರೆಂದು, ಶೇ ೫೪ ರಷ್ಟು ಮಾಹಿತಿದಾರರು, ದಾದಿಯರು ಸಮಯಕ್ಕೆ ಸರಿಯಾಗಿ ಬರುವುದಿಲ್ಲವೆಂದು ಪ್ರತಿಕ್ರಿಯಿಸಿದರು. ಇದನ್ನು ಕೋಷ್ಟಕ ೩.೯ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೩.೯ ದಾದಿಯರ (ಎ.ಎನ್.ಎಮ್) ಭೇಟಿ ಕುರಿತು(ಸಮಯಕ್ಕೆ ಸರಿಯಾಗಿ ಬರುವರೆ)

ಕ್ರ.ಸಂ	ಮಾಹಿತಿ	ಸಂಖ್ಯೆ	ಶೇಕಡ
೧.	ಹೌದು	೪೬	೪೬.೦೦
೨.	ಇಲ್ಲ	೫೪	೫೪.೦೦
	ಒಟ್ಟು	೧೦೦	೧೦೦.೦೦

ಇದರ ಜೊತೆಗೆ ಗ್ರಾಮೀಣ ಮಹಿಳೆಯರ ಆರೋಗ್ಯದ ಸ್ಥಿತಿಯನ್ನು ಸುಧಾರಿಸಲು ಸರ್ಕಾರವು ಬಡವರಿಗಾಗಿ ಕೆಲವು ಪುಕ್ಕಟೆ ಔಷಧಿಯನ್ನು ವಿತರಿಸುವಲ್ಲಿ ಸರಿಯಾಗಿ ವಿತರಿಸುವುದಿಲ್ಲವೆಂದು ಶೇ.೫೮ ಮಹಿಳೆಯರು ಅಭಿಪ್ರಾಯ ವ್ಯಕ್ತ ಪಡಿಸಿದರು. ಉಳಿದ ಶೇ ೪೨ ಮಾಹಿತಿದಾರರು ಇವರ ಸೌಲಭ್ಯ ಪಡೆಯುತ್ತಿದ್ದಾರೆಂದು ತಿಳಿಸಿದರು. ಇದಲ್ಲದೆ ದಾದಿಯರು ಕುಟುಂಬದವರನ್ನು ಮುಖ್ಯವಾಗಿ ಮಹಿಳೆಯರ ಆರೋಗ್ಯದ ಕುರಿತು ಅವರಿಗೆ ಸಾಮಾನ್ಯ ತಿಳುವಳಿಕೆಯನ್ನು ದಾದಿಯರು ನೀಡುವ ಮಾರ್ಗದರ್ಶನವನ್ನು ಬಹಳಷ್ಟು ಮಹಿಳೆಯರು ನಿರೀಕ್ಷಿಸುತ್ತಿದ್ದಾರೆಂದು ತಿಳುದುಬಂದಿದೆ. ಸಂತಾನಹರಣ ಚಿಕಿತ್ಸೆ ಮಾಡಿಸಿಕೊಂಡಿರುವಿರಾ ಎಂಬ ಪ್ರಶ್ನೆಗೆ ಶೇ ೬೦ ರಷ್ಟು ಮಹಿಳೆಯ ಶಸ್ತ್ರ ಚಿಕಿತ್ಸೆ ಮಾಡಿಸಿ ಕೊಂಡಿದ್ದು, ಇದರಲ್ಲಿ ಶೇ ೨೪ರಷ್ಟು ಮಹಿಳೆಯರು ವಿವಿಧ ಕಾಯಿಲೆಗಳ ಕಾರಣಗಳಿಂದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆಂದು ತಿಳಿದುಬಂದಿದೆ. ಗ್ರಾಮೀಣ ಕುಟುಂಬಗಳು ಬಹಳಷ್ಟು ವ್ಯವಸಾಯದಲ್ಲಿ ತೊಡಗಿರುವುದರಿಂದ ದಾದಿಯರು ನೀಡುವ ಸಲಹೆಗಳು ತಲುಪಲು ಸಾಧ್ಯವಾಗುತ್ತಿಲ್ಲ. ದಾದಿಯರು ಬಂದ ವೇಳೆಯಲ್ಲಿ ದುಡಿಯುವ ಮಹಿಳೆಯರು ತಮ್ಮ ತಮ್ಮ ಕೆಲಸಗಳಿಗೆ ಹೋಗಿರುತ್ತಾರೆ. ಹೀಗಾಗಿ ಮಹಿಳೆಯರಿಗೆ ತಮಗರಿವಿಲ್ಲದಂತೆ ಅನೇಕ ಕಾಯಿಲೆಗಳು ಬರುವುದು ಸರ್ವೆ ಸಾಮಾನ್ಯ

ವಿಷಯವಾದ್ದರಿಂದ, ಮಾಹಿತಿದಾರರು ನೀಡುವ ಸಲಹೆ ಎಂದರೆ ಕೆಲಸಕ್ಕೆ ಹೋಗುವ ಮುಂಚಿತವಾಗಿ, ಮುಂಜಾನೆ ದಾದಿಯರು ಬಂದರೆ ನಮಗೆ ಅವರಿಂದ ಪಡೆಯುವ ಸೌಲಭ್ಯ ಸದುಪಯೋಗವಾಗಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

೬.೨ಅಧ್ಯಯನದ ಪ್ರಮುಖ ಫಲಿತಗಳು:

ಸ್ವಾತಂತ್ರೋತ್ತರ ಕಾಲಾವಧಿಯಲ್ಲಿ ರಾಷ್ಟ್ರಮಟ್ಟದಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಾಗಿರುವುದನ್ನು ಕಾಣುತ್ತೇವೆ.ಪುರುಷರ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣಗಳೆರಡರಲ್ಲೂ ೧೯೫೧-೧೯೯೧ರ ಮಧ್ಯ ಗಣನೀಯ ಏರಿಕೆಯನ್ನು ಕಾಣಬಹುದು. ಆದರೆ ಪುರುಷರ ಸಾಕ್ಷರತೆ ಮಹಿಳೆಯರ ಸಾಕ್ಷರತೆಗಿಂತ ಹೆಚ್ಚಿನದರದಲ್ಲಿ ಏರಿಕೆಯಾಗಿರುವುದು ಲಿಂಗ ಅಸಮಾನತೆಯ ದೃಷ್ಟಿಯಿಂದ ಅಷ್ಟು ಹಿತಕರವಾದ ಬದಲಾವಣೆಯಲ್ಲ.

ರಾಷ್ಟ್ರದ ಇಂದಿನ ಸರಾಸರಿ ಸಾಕ್ಷರತೆ ಪ್ರಮಾಣಕ್ಕಿಂತ (ಒಟ್ಟು-ಪುರುಷ-ಮಹಿಳೆಯ) ಕರ್ನಾಟಕ ರಾಜ್ಯದ ಸರಾಸರಿ ಸಾಕ್ಷರತಾ ಪ್ರಮಾಣ ಹೆಚ್ಚು ಇರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಆದರೆ ಕರ್ನಾಟಕದ ನೆರೆಯ ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ಸಾಕ್ಷರತೆಯಲ್ಲಿ ಹಿಂದುಳಿದಿರುವುದು ಕಂಡು ಬರುತ್ತದೆ.

ಅಧ್ಯಯನ ಕ್ಷೇತ್ರವಾದ ಹರಪನಹಳ್ಳಿ ತಾಲ್ಲೂಕಿನ, ಬಳ್ಳಾರಿ ಜಿಲ್ಲೆಯ ಮತ್ತು ಹೈದ್ರಾಬಾದ್ -ಕರ್ನಾಟಕ ಪ್ರದೇಶದಸಾಕ್ಷರತಾ ಪರಿಸ್ಥಿತಿ ಅತೃಪ್ತಿಕರವಾಗಿದೆ. ಹೈದ್ರಾಬಾದ್ - ಕರ್ನಾಟಕದ ಸಾಕ್ಷರತೆ (ಒಟ್ಟು, ಪುರುಷರ ಮತ್ತು ಮಹಿಳೆಯರ) ರಾಷ್ಟ್ರದ ಮತ್ತು ರಾಜ್ಯದ ಸರಾಸರಿಗಿಂತ ಕಡಿಮೆ ಇದೆ.ಹರಪನಹಳ್ಳಿ ತಾಲ್ಲೂಕಿನ ಸಾಕ್ಷರತೆ ಬಳ್ಳಾರಿ ಜಿಲ್ಲೆಯ, ಹೈದ್ರಾಬಾದ್ -ಕರ್ನಾಟಕದ ರಾಜ್ಯದ ಮತ್ತು ರಾಷ್ಟ್ರದ ಸರಾಸರಿಗಿಂತ ತೀರಾ ಹಿಂದುಳಿದಿರುವುದು ಶೋಚನೀಯ ಸಂಗತಿ .ಮಹಿಳೆಯರ,ಆದರಲ್ಲಿ ಗ್ರಾಮೀಣ ಮಹಿಳೆಯರ ಸಾಕ್ಷರತೆ ಹರಪನಹಳ್ಳಿಯಲ್ಲಿ ಗಣನೀಯವಾಗಿ ಹಿಂದುಳಿದಿರುವುದು ಕಂಡು ಬಂದಿದೆ.

ರಾತ್ರಿ ಶಾಲೆಗಳ ಕಾರ್ಯಾಚರಣೆಯ ಬಗ್ಗೆ ಮಾಹಿತಿದಾರರಲ್ಲಿ ಭಿನ್ನಾಭಿಪ್ರಾಯ ಕಂಡುಬರುತ್ತದೆ. ಅವರಲ್ಲಿ ಶೇ೫೭ರಷ್ಟು ಜನರು ಮಹಿಳೆಯರು, ರಾತ್ರಿ ಶಾಲೆಗಳು ತಾವು ನಿರ್ವಹಿಸಬಹುದಾದ ಕಾರ್ಯವನ್ನು ನಿರ್ವಹಿಸುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ

ಮಾಹಿತಿದಾರರೆಲ್ಲರೂ ರಾತ್ರಿ ಶಾಲೆಗಳಿಗೆ ಹಾಜರಾಗುತ್ತಿಲ್ಲ. ಶೇ ೩೦ ಜನ ಮಾಹಿತಿದಾರರು ಹಾಜರಾಗುತ್ತಿರುವುದು ತಿಳಿದು ಬರುತ್ತದೆ.

ಮಹಿಳಾ ಕೃಷಿ ಕಾರ್ಮಿಕರ ಮಕ್ಕಳು ನಿಯಮಿತವಾಗಿ ಶಾಲೆಗೆ ಹೋಗದಿರಲು ಕಾರಣಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಮಾಹಿತಿದಾರರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಕಾರಣಗಳನ್ನುನೀಡಿರುತ್ತಾರೆ. ಅವರು ನೀಡಿದ ಹಲವಾರು ಕಾರಣಗಳಲ್ಲಿ ಎರಡು ಕಾರಣಗಳು ಪ್ರಮುಖವಾಗಿ ಕಂಡುಬರುತ್ತವೆ. ಶೇ ೩೪ರಷ್ಟು ಮಾಹಿತಿದಾರರು ಬಡತನದ ಕಾರಣಗಳನ್ನು ನೀಡಿದರೆ, ಶೇ ೨೯ರಷ್ಟು ಮಾಹಿತಿದಾರರು ತಮ್ಮ ಮಕ್ಕಳಲ್ಲಿ ಕಲಿಯುವ ಆಸಕ್ತಿ ಇಲ್ಲದಿರುವ ಕಾರಣಗಳನ್ನು ನೀಡಿರುತ್ತಾರೆ.

ಆರೋಗ್ಯ ಸೌಲಭ್ಯಗಳ ದೃಷ್ಟಿಯಿಂದ ಹರಪನಹಳ್ಳಿ ತಾಲ್ಲೂಕಿನಲ್ಲಿ ಜನರು ಆರೋಗ್ಯ ಸೌಲಭ್ಯಗಳಿಂದ ವಂಚಿತರಾಗಿರುವುದು ಕಂಡುಬಂದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರತಿ ೨೩,೩೧೨ ಜನರಿಗೊಂದು ಪ್ರಾಥಮಿಕ ಆರೋಗ್ಯಘಟಕ ಹಾಗೂ ೪೫೬೫ ಜನರಿಗೊಂದು ಉಪ-ಕೇಂದ್ರ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರತಿ ೨೩,೦೩೨ ಜನರಿಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರತಿ ೪,೧೮೯ ಜನರಿಗೊಂದು ಉಪಕೇಂದ್ರವಿದ್ದರೆ, ಹರಪನಹಳ್ಳಿತಾಲ್ಲೂಕಿನಲ್ಲಿ ಕ್ರಮವಾಗಿ ಈ ಸಂಖ್ಯೆಗಳು ೩೮,೬೦೦ ಮತ್ತು ೩,೪೪೨ ಇರುತ್ತದೆ.

ಮಾಹಿತಿದಾರರು ರೋಗ-ರುಜಿನಗಳ ನಿವಾರಣೆಗೆ ಯಾವ ರೀತಿಯ ಉಪಚಾರ ಪಡೆಯುತ್ತೀರ ಎಂಬ ಪ್ರಶ್ನೆಗೆವಿವಿಧ ರೀತಿಯ ಉತ್ತರಗಳನ್ನು ನೀಡಿದ್ದಾರೆ. ನಮ್ಮ ಮಾಹಿತಿದಾರರಲ್ಲಿ ಶೇ ೪೩ರಷ್ಟು ಆರೋಗ್ಯ ಸೌಲಭ್ಯಕ್ಕೆ ಸರ್ಕಾರಿದವಾಖಾನೆಗಳನ್ನು ಅವಲಂಬಿಸಿದ್ದಾರೆ. ಆದರೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಆರೋಗ್ಯ ಸೌಲಭ್ಯ ಜನಸಂಖ್ಯೆಗನುಗುಣವಾಗಿಇಲ್ಲ. ಬಹಳ ಆತಂಕಕಾರಿ ಸಂಗತಿ ಎಂದರೆ ನಮ್ಮ ಮಾಹಿತಿದಾರರಲ್ಲಿ ಶೇ ೨೪ರಷ್ಟು ರೋಗ ರುಜಿನಗಳ ನಿವಾರಣೆಗೆದೇವರುಗಳನ್ನು ನಂಬುವುದು ತಿಳಿದುಬಂದಿದೆ. ನಾವು ಸಂದರ್ಶಿಸಿದ ಒಟ್ಟು ಮಾಹಿತಿದಾರರಲ್ಲಿ ಶೇ ೨೬ರಷ್ಟು ಖಾಸಗಿದವಾಖಾನೆಗಳು ಆಶ್ರಯಿಸಿರುವುದು ಕಂಡುಬಂದಿದೆ. ಒಟ್ಟಾರೆ ಹರಪನಹಳ್ಳಿ ತಾಲ್ಲೂಕಿನ ಆರೋಗ್ಯ ಸೌಲಭ್ಯಗಳುನಿಕೃಷ್ಟವಾಗಿರುವುದರಿಂದ ಬಡ ಗ್ರಾಮವಾಸಿ ಮಹಿಳೆಯರಿಗೆ ಹೆಚ್ಚಿನ ತೊಂದರೆ ಉಂಟಾಗುತ್ತದೆ.

ನಮ್ಮ ನಮೂನೆಯಲ್ಲಿರುವ ಕುಟುಂಬಗಳಿಗೆ ಎಷ್ಟು ದೂರದಲ್ಲಿ ಆರೋಗ್ಯ ಸೌಲಭ್ಯವಿದೆ ಎಂಬುದರ ಬಗ್ಗೆಮಾಹಿತಿ ಸಂಗ್ರಹಿಸಲಾಗಿದೆ. ಕೋಷ್ಟಕ ೩.೭ರಲ್ಲಿ ತೋರಿಸಿರುವಂತೆ ದವಾಖಾನೆ ಸೌಲಭ್ಯವು ಶೇ ೭೩ ಕುಟುಂಬಗಳಿಗೆಅಸ್ವಸ್ಥತೆಯ ಸಂಧರ್ಭದಲ್ಲಿ ವೈದ್ಯಕೀಯ ಸೇವೆಗಾಗಿ ಅನೇಕ ಕಿ.ಮೀ.ಗಳ ದೂರ ಹೋಗಬೇಕಾಗುತ್ತದೆ. ನಮ್ಮ ಮಾಹಿತಿದಾರರಲ್ಲಿ ಶೇ ೨೪ರಷ್ಟು ೯ ಕಿ.ಮೀ.ಗಿಂತ ದೂರ ಸಂಚರಿಸಬೇಕಾದ ಧಾರಣ ಸ್ಥಿತಿ ಇದೆ.

ನಮ್ಮ ನಮೂನೆಯಲ್ಲಿರುವ ೧೦೦ಮಹಿಳೆಯರಲ್ಲಿ ಶೇ ೪೭ರಷ್ಟು ಕುಟುಂಬಗಳಲ್ಲಿ ಹೆರಿಗೆಯು ಮನೆಯಲ್ಲೇ ಸಂಭವಿಸುವುದು ತಿಳಿದು ಬಂದಿದೆ (ಕೋಷ್ಟಕ ೩.೯).ಒಟ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.೫೩ರಷ್ಟುಕುಟುಂಬಗಳು ಹೆರಿಗೆಗಾಗಿ ಆಸ್ಪತ್ರೆ ಸೌಲಭ್ಯವನ್ನು ಅವಲಂಬಿಸಿದ್ದು ಸ್ವಾಗತ್ತಾರ್ಹ ವಿಷಯವಾದರೆ, ಹರಪನಹಳ್ಳಿ ತಾಲ್ಲೂಕಿನಲ್ಲಿ ಆರೋಗ್ಯ ಸೌಲಭ್ಯಗಳು ಜನರ ಬೇಡಿಕೆ ಅನುಗುಣವಾಗಿಲ್ಲ.

ಅಧ್ಯಾಯ:೪

ಮಹಿಳಾ ಕೃಷಿಕಾರ್ಮಿಕರ ಆರ್ಥಿಕ ಸಮಸ್ಯೆ

"ಅಂತರ್- ಖಂಡಗಳ, ಅಂತರಾಷ್ಟ್ರೀಯ ಅಭಿವೃದ್ಧಿಯ ಅಧ್ಯಯನಗಳು ಹೊರಹಾಕಿದ ಅವಮಾನವೀಯ ಲಿಂಗ ಸಂಬಂಧೀ ನಗ್ನಸತ್ಯವೆಂದರೆ, ಪ್ರಪಂಚದ ಪ್ರತಿ ರಾಷ್ಟ್ರವು ಮಹಿಳೆಯರ ಧಾರಣ ಶಕ್ತಿಯನ್ನು ಹೆಚ್ಚಿಸುವಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದಾಗ್ಯೂ, ಯಾವ ರಾಷ್ಟ್ರದಲ್ಲೂ ಸಹ ಪುರುಷರು ಅನುಭವಿಸುವಷ್ಟು ಅವಕಾಶಗಳನ್ನು ಮಹಿಳೆಯರುಅನುಭವಿಸುತ್ತಿಲ್ಲ. ಅವಕಾಶಗಳ ದೃಷ್ಟಿಯಿಂದ ಪುರುಷರು ಮತ್ತು ಸ್ತ್ರೀಯರು ಎರಡು ಬೇರೆ ಬೇರೆ ಅಸಮಾನ ಪ್ರಪಂಚದಲ್ಲಿ ಬದುಕುತ್ತಿದ್ದಾರೆ ".(HDR,೧೯೯೫ :ಪು.೨ ಮತ್ತು ೩). ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದ ಹಾಗೇ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ದೊರಕಿದಷ್ಟು ಅವಕಾಶಗಳು ಆರ್ಥಿಕ ಕ್ಷೇತ್ರದಲ್ಲಿ ದೊರಕಿರುವುದಿಲ್ಲ . ಮಹಿಳೆಯರ, ಪ್ರತ್ಯೇಕವಾಗಿ ಗ್ರಾಮೀಣ ಮಹಿಳೆಯರ ದುಡಿಮೆಯ ಸಮಯ ಮತ್ತು ದುಡಿಮೆ , ಪುರುಷರಿಗಿಂತ ಗಣನೀಯವಾಗಿ ಹೆಚ್ಚು ಇರುವುದನ್ನು ಅಧ್ಯಯನಗಳು ತಿಳಿಸುತ್ತವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕೂಡ ಮಹಿಳೆಯರ ಕೆಲಸದ ಹೊರೆ ಶೇ. ೫೩ರಷ್ಟಿದ್ದು ಪುರುಷರದ್ದು ಶೇ.೪೭ ರಷ್ಟಿರುತ್ತದೆ. ಮಹಿಳೆಯ ಆರ್ಥಿಕ ಪರಿಸ್ಥಿತಿ ವಿಷಯದಲ್ಲಿ ಇನ್ನೂ ಆತಂಕಕಾರಿ ವಿಷಯವೆಂದರೆ, ಮಹಿಳೆಯರ ಬಹಳಷ್ಟು ದುಡಿಮೆಯು ಕ್ರಯರಹಿತವು ಮತ್ತು ವಿವಂಚಿತವೂ ಆಗಿದೆ. ಯು.ಎನ್ .ಡಿ.ಪಿ. ಮಾಡಿದ ಆಯ್ದ ಒಂಬತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಅಧ್ಯಯನದ ಪ್ರಕಾರ "ಮಹಿಳೆಯ ಎಲ್ಲಾ ಆರ್ಥಿಕ ಚಟುವಟಿಕೆಗಳಿಗೆ ಸಂದ ಒಟ್ಟು ದುಡಿಮೆಯ ಅವಧಿಯಲ್ಲಿ ಶೇ.೩೪ ರಷ್ಟು ಮಾತ್ರ ರಾಷ್ಟ್ರೀಯ ವರಮಾನದ ಕೋಶಕ್ಕೆ ಸೇರ್ಪಡೆಯಾಗುತ್ತದೆ. ಆದರೆ ಪುರುಷರ ಎಲ್ಲಾ ಆರ್ಥಿಕ ಚಟುವಟಿಕೆಗೆ ಸಂದ ಒಟ್ಟು ದುಡಿಮೆ ಅವಧಿಯಲ್ಲಿ ಶೇ.೭೬ರಷ್ಟು ರಾಷ್ಟ್ರೀಯ ವರಮಾನದ ಕೋಶಕ್ಕೆ ಸೇರ್ಪಡೆಯಾಗುತ್ತದೆ.(HDR, ೧೯೯೫ ಪು.೮-೮೯).ಮಾನವ ಅಭಿವೃದ್ಧಿ ವರದಿ ಪ್ರಕಾರ "ಭಾರತದಲ್ಲಿ ಗಳಿಸಿದ ಒಟ್ಟು ವರಮಾನದಲ್ಲಿ ಮಹಿಳೆಯರ ಪಾಲು ಶೇ. ೨೫.೭ ರಷ್ಟಾದರೆ ಪುರುಷರ ಪಾಲು ಶೇ.೭೪.೩ ರಷ್ಟಿದೆ". (HDR ೧೯೯೭ ಪು. ೧೫೧). ಈ ಅಂಶಗಳು ಮಹಿಳೆಯರಿಗೆ ಪ್ರತಿಕೂಲವಾದ ಲಿಂಗಸಂಬಂಧೀ ಆರ್ಥಿಕ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಬದಲಾಗುತ್ತಿರುವ ಸಾಮಾಜಿಕ - ಆರ್ಥಿಕ ಸ್ಥಿತಿಯಲ್ಲಿ ಜನತೆಯ ಕನಿಷ್ಠ ಅವಶ್ಯಕತೆಗಳು ಕೂಡ ಬದಲಾಗಿವೆ. ಜೀವನದ ರೀತಿ ನೀತಿಗಳು ಸಾಕಷ್ಟು ಬದಲಾಗಿವೆ. ಕನಿಷ್ಠ ಅವಶ್ಯಕ ಸರಕುಗಳ ಬೆಲೆಗಳು ಗಗನಕ್ಕೇರಿವೆ. ಆದರೆ ಕೂಲಿಯ ದರದಲ್ಲಿ ಈವರೆಗೂ ಯಾವುದೇ ಬದಲಾವಣೆಯನ್ನು ಕಾಣದಿರುವುದು ವಿಶಾದನೀಯ. ೧೯೪೮ರ 'ಕನಿಷ್ಠ ಕೂಲಿಯ ಕಾಯ್ದೆಯು ' ಕೇವಲ ಸಂಘಟಿತ ವಲಯದಲ್ಲಿ ಮಾತ್ರ ಜಾರಿಯಾಗಿದ್ದು, ಶೇ.೯೪ರಷ್ಟು ಜನ ಅಸಂಘಟಿತ ಕೃಷಿ ವಲಯದಲ್ಲಿ ನಿರತರಾಗಿರುವವರಿಗೆ ಮೇಲಿನ ಕಾಯ್ದೆಯ ಉಪಯೋಗ ದೊರೆಯುವುದು ದೂರದ ಮಾತಾಗಿದೆ. ಈ ಬಗ್ಗೆ ಪ್ರಪಂಚಾದ್ಯಂತ ಅನೇಕ ಅಧ್ಯಯನಗಳು ಪದೇ ಪದೇ ನಡೆಯುತ್ತಲೇ ಇವೆ. ಆದರೆ ಸರಕಾರ ಈ ಬಗ್ಗೆ ಸರಿಯಾದ ರೀತಿಯಲ್ಲಿ ನೀತಿಗಳನ್ನು ಕಡ್ಡಾಯವಾಗಿ ಜಾರಿಗೆ ತರುವಲ್ಲಿ ವಿಳಂಬಿಸುತ್ತಿದೆ.

U.N.D.P.ಯ ಮಾನವ ಅಭಿವೃದ್ಧಿ ವರದಿ ೧೯೯೫ ರಲ್ಲಿ ಆರ್ಥಿಕ , ಸಾಮಾಜಿಕ , ನೆಲೆಗಳಲ್ಲಿ ಸ್ತ್ರೀ- ಪುರುಷರ ನಡುವೆ ಲಿಂಗ ಅಸಮಾನತೆಯ ಅಂಶಗಳ ಕಡೆಗೆ ವಿಶೇಷವಾಗಿ ಗಮನ ಕೇಂದ್ರೀಕರಿಸಿದೆ. ಪಾಕಿಸ್ತಾನದ ಮಾಜಿವಿತ್ತ ಮತ್ತು ಯೋಜನಾ ಮಂತ್ರಿಗಳಾದ ಮೆಹಬೂಬ ಉಲ್ -ಹಕ್ ಅವರ ಮೇಲ್ವಿಚಾರಣೆಯಲ್ಲಿ ಸಿದ್ಧಪಡಿಸಿದ ಲಿಂಗ ಅಸಮಾನತೆಯ ಕುರಿತು ಈ ವರದಿಯು ಲಿಂಗ ಅಸಮಾನತೆಯ ನೆಲೆಯಲ್ಲಿ ಕಂಡುಕೊಂಡ ಅಂಶಗಳು ಪ್ರಪಂಚದ ಸರ್ವತೋಮುಖ ಮಾನವ ಅಭಿವೃದ್ಧಿಯಲ್ಲಿ ಸ್ತ್ರೀಯನ್ನು ಎಷ್ಟು ನಿರ್ಲಕ್ಷಿಸಿದೆ ಎನ್ನುವುದರ ಬಗ್ಗೆ ಹೀಗೆನ್ನುತ್ತಾರೆ:

ಜಗತ್ತಿನ ಪ್ರತಿ ದೇಶದಲ್ಲೂ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮಯ ದುಡಿಯುತ್ತಾರೆ. ಆದರೆ ಅದಕ್ಕೆ ತಕ್ಕ ಪ್ರತಿಫಲ ಅವರಿಗೆ ದೊರೆಯುವುದಿಲ್ಲ. ರಾಷ್ಟ್ರೀಯ ಅಂಕಿ ಅಂಶಗಳ ಪಟ್ಟಿಯಲ್ಲಿ ಮಹಿಳೆಯರ ದುಡಿಮೆಯನ್ನು ಸರಿಯಾಗಿ ಪ್ರತಿಬಿಂಬಿಸಿದ್ದೇ ಆದರೆ ಜಗತ್ತಿನಲ್ಲಿ ದುಡಿಮೆ ಸಂಪಾದಿಸುವವರು ಪುರುಷರು ಎಂಬ ಪುರಾಣವೇ ನುಚ್ಚು ನೂರಾಗುತ್ತದೆ ಎಂದು U.N.D.P. ವರದಿಯ ಸಂಪಾದಕರಾದ ಮಹಬೂಬ ಉಲ್ -ಹಕ್ ರವರ ಅಭಿಮತವಾಗಿದೆ. ಮುಂದುವರಿದು ಹೇಳುತ್ತಾ ವೇತನವುಳ್ಳ ಮತ್ತು ವೇತನರಹಿತ ಕೌಟುಂಬಿಕ ಹಾಗು ಸಾಮುದಾಯಿಕ ದುಡಿಮೆಯಲ್ಲಿ ಮಹಿಳೆಯರು -ಪುರುಷರು ತಲಾ ಎಷ್ಟು ಸಮಯವನ್ನು ವ್ಯಯಿಸುತ್ತಾರೆ ಎಂಬ ಬಗೆಗಿನ ಅಧ್ಯಯನವೊಂದು ಜಗತ್ತಿನಾದ್ಯಂತ ೩೧ ದೇಶಗಳ ಸ್ಥಿತಿಯನ್ನು ವಿಶ್ಲೇಷಿಸಿದೆ. ಕೈಗಾರಿಕಾಕರಣಗೊಂಡ ದೇಶಗಳು, ಅಭಿವೃದ್ಧಿಶೀಲ ದೇಶಗಳು ಮತ್ತು ಪೂರ್ವ ಯುರೋಪಿನ ಸಂಕ್ರಮಣ ಸ್ಥಿತಿಯಲ್ಲಿರುವ ಸ್ವತಂತ್ರ ರಾಷ್ಟ್ರಗಳು, ಕಾಮನ್‌ವೆಲ್ತ್ ದೇಶಗಳು ಈ ಅಧ್ಯಯನದಲ್ಲಿ ಸೇರಿವೆ. ಈ ಅಧ್ಯಯನದ ಕೆಲವು ಪ್ರಮುಖ ಫಲಿತಗಳನ್ನು ಮಾತ್ರ ಅಧ್ಯಯನದ ಅನುಕೂಲಕ್ಕೆ ವಿವರಿಸಲಾಗಿದೆ.

೧) ಅಭಿವೃದ್ಧಿಶೀಲ ಹಾಗು ಕೈಗಾರಿಕಾ ಜಗತ್ತುಗಳಲ್ಲಿ ಆದಾಯದ ಸಿಂಹಪಾಲನ್ನು ಪುರುಷರು ತಮ್ಮ ಆರ್ಥಿಕ ಕಾಣಿಕೆಗಳಿಗಾಗಿ ಪಡೆಯುತ್ತಾರೆ. ಆದರೆ ಅದೇ ದೇಶಗಳಲ್ಲಿ ಮಹಿಳೆಯರ ಬಹುಪಾಲು ಶ್ರಮವು ವೇತನ ರಹಿತವಾಗಿ ಗುರುತಿಸಲ್ಪಡದೆ ಅಪಮೌಲ್ಯಕ್ಕೆ ಒಳಗಾಗಿದೆ.

೨) ಪ್ರತಿ ದೇಶದಲ್ಲಿ ಮಹಿಳೆಯರ ದುಡಿಮೆಯ ಕಾಲಾವಧಿ ಪುರುಷರಿಗಿಂತ (ವೇತನ ಸಹಿತ ಹಾಗು ವೇತನ ರಹಿತ) ಹೆಚ್ಚಾಗಿರುತ್ತದೆ. ದುಡಿಮೆಯ ಒಟ್ಟು ಹೊರೆಯಲ್ಲಿ ಅಭಿವೃದ್ಧಿ ಶೀಲ ದೇಶಗಳ ಮಹಿಳೆಯರು ಶೇ.೫೩ರಷ್ಟು ಹೊರುತ್ತಿದ್ದಾರೆ. ಕೈಗಾರಿಕಾ ರಾಷ್ಟ್ರಗಳಲ್ಲಿ ಅವರ ಹೊರೆ ಶೇ.೫೧ರಷ್ಟು ಇದೆ.

೩) ಕೈಗಾರಿಕಾ ದೇಶಗಳಲ್ಲಿ ಮಹಿಳೆಯರ ಒಟ್ಟು ದುಡಿಮೆಯಲ್ಲಿ ಸುಮಾರು ೨/೩ ಭಾಗ, ವೇತನವಿಲ್ಲದ ಕಾರ್ಯ ಚಟುವಟಿಕೆಗಳಿಗೂ ಮತ್ತು ೧/೩ ಭಾಗವು ವೇತನ ಸಹಿತ ದುಡಿಮೆಗೂ ಬಳಕೆಯಾಗುತ್ತದೆ. ಪುರುಷರಿಗೆ ಈ ಪ್ರಮಾಣ ತಿರುವು ಮುರುವಾಗಿರುತ್ತದೆ. ಅಭಿವೃದ್ಧಿ ಶೀಲ ದೇಶಗಳಲ್ಲಿ ಕೂಡಾ ಮಹಿಳೆಯರ ಒಟ್ಟು ದುಡಿಮೆಯಲ್ಲಿ ೨/೩ ಭಾಗ ವೇತನ ರಹಿತವಾಗಿರುತ್ತದೆ. ಆದರೆ ಇಲ್ಲಿನ ಪುರುಷರು ೧/೪ ಕಡಿಮೆ ಭಾಗ ವೇತನ ರಹಿತ ದುಡಿಮೆಯಲ್ಲಿ ವ್ಯಯಿಸುತ್ತಾರೆ.

"ಜಾಗತಿಕ ಆದಾಯ/ ಉತ್ಪಾದನೆಯಲ್ಲಿ ನೇರವಾಗಿ ಪರೋಕ್ಷವಾಗಿ ವೈಯಕ್ತಿಕವಾಗಿ ಇಲ್ಲವೆ ಪತಿಗಳೊಂದಿಗೆ ಸಹಭಾಗಿಗಳಾಗಿ ಮಹಿಳೆಯರು ಬಹು ದೊಡ್ಡ ಭಾಗವನ್ನು ಉತ್ಪಾದಿಸುತ್ತಿದ್ದರೂ ಅವರನ್ನು ಆರ್ಥಿಕ ಘಟಕಗಳೇ ಅಲ್ಲವೆಂಬಂತೆ ಪರಿಗಣಿಸಿರುವುದು ಅಪಾಯಕರ" "ಮಹಿಳೆಯರ ಆರ್ಥಿಕ ಕಾಣಿಕೆಯನ್ನು ಸಮಗ್ರವಾಗಿ ಗುರುತಿಸುವುದರಿಂದ ಪರಂಪರಾಗತವಾಗಿ ಲಿಂಗಾಧಾರಿತ ಸಂಬಂಧಗಳಿಗೆ ತಪ್ಪು ಆಧಾರಗಳನ್ನು ಒದಗಿಸುವ ಸಾಮಾಜಿಕ,ಆರ್ಥಿಕ, ಪ್ರಮೇಯಗಳೇ ಬುಡಮೇಲಾಗಬಲ್ಲದು" (ಮಹಬೂಬ ಉಲ್-ಹಕ್, ೧೯೯೫).(ನೋಡಿರಿ 'ಅಚಲ' ೧೯೯೬,)

ಇತ್ತೀಚಿನ ದಿನಗಳಲ್ಲಿ ಮಹಿಳೆಯು ದುಡಿಮೆಯ ಕ್ಷೇತ್ರದಲ್ಲಿ ನಿರತವಾಗಿರುವುದು ಅಧಿಕ ಸಂಖ್ಯೆಯಲ್ಲಿದೆ ಎಂಬುದು ವಾಸ್ತವ ಸಂಗತಿ. ಇಲ್ಲಿ ಮಹಿಳಾ ಕಾರ್ಮಿಕರ ಪೂರೈಕೆ, ಬೇಡಿಕೆಗಿಂತ ಅಧಿಕ ಸಂಖ್ಯೆಯಲ್ಲಿರುವುದರಿಂದ ಇವರ ವೇತನ/ಕೂಲಿ ತಾರತಮ್ಯಕ್ಕೊಂದು ಕಾರಣವಾಗಿದೆ. ಇಂತಹ ಸಂದರ್ಭದಲ್ಲಿ ಅವಳು ಅನಿವಾರ್ಯವಾಗಿ ರಾಜಿಮಾರ್ಗ ಹಿಡಿಯಬೇಕಾಗುತ್ತದೆ. ಮಾಲಿಕ, ಗಂಡ, ತಂದೆ ಹಾಗೂ ಇತರರ ಮನೋಗತಕ್ಕನುಗುಣವಾಗಿ ದುಡಿಮೆಯಲ್ಲಿ ನಿರತಳಾಗುತ್ತಾಳೆ. ಇದು ಯಾವುದೇ ಒಂದು ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಿಗೆ ಅನ್ವಯಿಸದೇ ಸಂಘಟಿತ, ಅಸಂಘಟಿತ ವಲಯವೆರಡನ್ನು ಆವರಿಸಿದೆ.

ಭಾರತದಲ್ಲಿ , ಕೃಷಿಯಲ್ಲಿಯೇ ಮಹಿಳಾ ಕಾರ್ಮಿಕರ ಸಂಖ್ಯೆ ಅಧಿಕವಿದ್ದು, ಇದು ಎಲ್ಲರಿಗೂ ಉದ್ಯೋಗವಕಾಶವನ್ನೊದಗಿಸಿ ಕೊಡುವಂತಹ ವಲಯವಲ್ಲದಿದ್ದರೂ, ಇಲ್ಲಿ ಅನಕ್ಷರತೆ, ತರಬೇತಿಯ ಕೊರತೆಯಿಂದ , ಇನ್ನೂ ಹಲವಾರು ಕಾರಣಗಳಿಂದ ಕೃಷಿಗೆ ಅಂಟಿಕೊಂಡು ಬದುಕುವವರ ಸಂಖ್ಯೆ ಗಣನೀಯವಾಗಿದ್ದುದರಿಂದ ಸುಲಭವಾಗಿ ಭಾರತದ ಗ್ರಾಮೀಣ ಮಹಿಳೆಯರು ಕೂಲಿಯ ತಾರತಮ್ಯವನ್ನು ಎದುರಿಸಬೇಕಾಗಿದೆ. ಇಷ್ಟೇ ಅಲ್ಲದೆ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ದುಡಿಯುವವರು ಸಹ ಕಡಿಮೆ ಕೂಲಿ ಪಡೆಯುತ್ತಾರೆ. ಕೃಷಿಯಿರಲಿ, ಕೈಗಾರಿಕೆಯಿರಲಿ ಅಸಂಘಟಿತ ವಲಯದ ಯಾವುದೇ ಉದ್ಯೋಗಿಗಳಾಗಿರಲಿ ಇವರು ಕೂಲಿಯ ತಾರತಮ್ಯ ಎದುರಿಸಲು ಸಿದ್ಧರಿದ್ದಾರೆ.ಅನಾವಶ್ಯಕ ಕಿರುಕುಳದ ಮೂಲಕ ತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ.

ಭಾರತದಲ್ಲಿ ಮಧ್ಯಮ ವರ್ಗದ ಕುಟುಂಬದವರಿಗೆ ಉದ್ಯೋಗ ಐಚ್ಛಿಕವಾಗಿರಬಹುದು. ಆದರೆ ಕೆಳವರ್ಗದ, ದಲಿತ ಮಹಿಳೆಯರಿಗೆ ಉದ್ಯೋಗ 'ಬದುಕಿಗೆ ಅನಿವಾರ್ಯ,'. ಹಳ್ಳಿಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕ ಮಹಿಳೆಯರಿಂದ ಹಿಡಿದು ಪಟ್ಟಣದಲ್ಲಿ, ಮನೆಗೆಲಸ, ಚಿಕ್ಕಪುಟ್ಟ ಸಣ್ಣ ಗುಡಿ ಕೈಗಾರಿಕೆಗಳಲ್ಲಿ ದುಡಿಯುವ , ಕಟ್ಟಡ ನಿರ್ಮಾಣದಲ್ಲಿ ದುಡಿಯುವ, ಬೀಡಿ ಕಟ್ಟುವ ಇತ್ಯಾದಿ ಕಡಿಮೆ ವರಮಾನ ಬರುವ ಕೆಲಸದಲ್ಲಿ ತೊಡಗಿರುವ ಮಹಿಳೆಯರಿಗೆ ಉದ್ಯೋಗ ಅನಿವಾರ್ಯ . ಆದರೆ ಅವರಿಗೆ ಕೆಲಸದ ಭದ್ರತೆಯಾಗಲಿ, ನಿಗದಿತ ಕೂಲಿಯಾಗಲಿ, ಅಪಘಾತ ಸಂಭವಿಸಿದರೆ ಜೀವನದ ಭದ್ರತೆಯಾಗಲಿ ಯಾವುದೂ ಅವರಿಗೆ ದೊರೆಯುವುದಿಲ್ಲ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ನಾವು ಆಯ್ದುಕೊಂಡ ಮಹಿಳಾ ಕಾರ್ಮಿಕರ ಆರ್ಥಿಕ ಸಮಸ್ಯೆಯನ್ನು ಚರ್ಚಿಸಿದ್ದೇವೆ. ಅದರಂತೆ ಈ ಅಧ್ಯಾಯವು ನಾಲ್ಕು ಭಾಗಗಳನ್ನು ಒಳಗೊಂಡಿದ್ದು, ಮೊದಲನೆ ಭಾಗವು ಮಹಿಳೆಯರಲ್ಲಿನ ಕೂಲಿಯ ಸಮಸ್ಯೆಯನ್ನು,ಎರಡನೇ ಭಾಗವು ಸಂಘಟನೆ ಸಮಸ್ಯೆಯನ್ನು ಮತ್ತು ಮೂರನೇ ಭಾಗವು ವಲಸೆ ಸಮಸ್ಯೆಗಳನ್ನು ಒಳಗೊಂಡಿದೆ. ನಾಲ್ಕನೇ ಭಾಗದಲ್ಲಿ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿನ ಹೈದ್ರಾಬಾದ ಕರ್ನಾಟಕ ಪ್ರದೇಶದ ಬಳ್ಳಾರಿ ಜಿಲ್ಲೆಯ , ಮತ್ತು ಅಧ್ಯಯನ ಕ್ಷೇತ್ರವಾದ ಹರಪನಹಳ್ಳಿ ತಾಲ್ಲೂಕಿನ ಅಸಂಘಟಿತ ಗ್ರಾಮೀಣ ಮಹಿಳಾ ಕೃಷಿ ಕಾರ್ಮಿಕರ ಪರಿಸ್ಥಿತಿ, ಈಗಾಗಲೇ ತಿಳಿಸಿರುವ ಜಾಗತಿಕ ಮಟ್ಟ ಮತ್ತು ರಾಷ್ಟ್ರಮಟ್ಟದಲ್ಲಿನ ಪರಿಸ್ಥಿತಿಗಿಂತ ಬಹಳ

ಭಿನ್ನವಾಗಿರುವುದಿಲ್ಲ. ಈ ಪ್ರದೇಶದಲ್ಲಿಯೂ ಸಹ ಮಹಿಳೆಯರ ದುಡಿಯುವ ಕಾಲಾವಧಿಯು ನಿಗದಿತ ಕಾಲಾವಧಿಗಿಂತ ಹೆಚ್ಚಿದ್ದಾಗ್ಯೂ, ಅವರ ಬಹುತೇಕ ಪಾಲು ಶ್ರಮ ಬೆಲೆಯನ್ನು ಪಡೆಯುತ್ತಿಲ್ಲ. ಅವರು ನಿರ್ವಹಿಸುವ ಉತ್ಪಾದನಾ ಕಾರ್ಯ ಮತ್ತು ಪ್ರಜನೋತ್ಪತ್ತಿ ಕಾರ್ಯಗಳಿಗೆ, ಪುನರುತ್ಪಾದನಾ ಚಟುವಟಿಕೆಗಳಿಗೆ, ಕುಟುಂಬದಲ್ಲಾಗಲೀ, ಸಮಾಜದಲ್ಲಾಗಲೀ ಮತ್ತು ರಾಷ್ಟ್ರೀಯ ಆದಾಯ ಮಾಪನದಲ್ಲಿ ಅವರ ಶ್ರಮಕ್ಕೆ ಸಿಗಬೇಕಾದ ಮಾನ್ಯತೆ ಸಿಗುತ್ತಿಲ್ಲ. ಅಧ್ಯಯನದ ಕ್ಷೇತ್ರದಲ್ಲಿರುವ ಮಹಿಳಾ ಕೃಷಿ ಕಾರ್ಮಿಕರಿಗೆ ನಾನಾ ಕಾರಣಗಳಿಂದ ಮನೆ ಹೊರಗಿನ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರ ಕೆಲಸದ ಕಾಲಾವಧಿಯು ದ್ವಿಪಟ್ಟಾಗಿರುತ್ತದೆ (ವಾಲಸ್, ೧೯೯೪). ಹೆಚ್ಚಿನ ಕೆಲಸದ ಒತ್ತಡದಿಂದಾಗಿ ಇಲ್ಲಿಯ ಮಹಿಳಾ ಕೃಷಿ ಕಾರ್ಮಿಕರು ಲಿಂಗಾಧಾರಿತ ಕೂಲಿ ಅಸಮಾನತೆಗೆ ಗುರಿಯಾಗಿದ್ದಾರೆ. ಹೆಚ್ಚಿನ ಕೆಲಸದ ಒತ್ತಡ ಮತ್ತು ಕಡಿಮೆ ಕೂಲಿ ಮಹಿಳೆಯರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ.

೪.೧ ಮಹಿಳಾ ಕೃಷಿ ಕಾರ್ಮಿಕರ ಕೂಲಿ ಸಮಸ್ಯೆ

ಕೃಷಿಯಲ್ಲಿನ ಕೂಲಿಯ ತಾರತಮ್ಯವು ಲಿಂಗ ಅಸಮಾನತೆಯಿಂದ ಕೂಡಿದ್ದು , ಇಲ್ಲಿ ಶ್ರಮವಿಭಜನೆಗೆ ತಕ್ಕಂತೆ ವೇತನ ದೊರೆಯದೇ ಇರುವುದನ್ನು ಕಾಣಬಹುದಾಗಿದೆ. ಇದು ಬಹುತೇಕ ಅಸಂಘಟಿತ ವಲಯದಲ್ಲಿ ಕಂಡು ಬರುತ್ತದೆ. ಗ್ರಾಮೀಣ ಭಾರತದ ಭೂರಹಿತ ಕೃಷಿ ಕಾರ್ಮಿಕ ಸಮುದಾಯಕ್ಕೆ ಕೂಲಿಯೇ ಆಸ್ತಿಯಾಗಿರುವುದರಿಂದ ಅವರ ಕನಿಷ್ಠಅವಶ್ಯಕತೆಗಳನ್ನು ಪೂರೈಸಲು ಐದು ದಶಕಗಳ ನಂತರವೂ ಸಾಧ್ಯವಾಗಿಲ್ಲ. ಹಗಲಿಡೀ ದುಡಿದರೂ ಅದಕ್ಕೆ ತಕ್ಕಂತೆ ದೊರಕುವ ಕೂಲಿಯ ಪ್ರಮಾಣದಿಂದ ಕೃಷಿ ಕಾರ್ಮಿಕರು ಜೀವನ ಸಾಗಿಸಲು ಕಷ್ಟ. ಈ ಸಮಸ್ಯೆ ಮಹಿಳಾ ಕೃಷಿ ಕಾರ್ಮಿಕರಿಗೆ ಅತ್ಯಂತ ತೀವ್ರವಾಗುತ್ತದೆ. ದಿನವಿಡೀ ಹೊಲಗದ್ದೆಗಳಲ್ಲಿ ಹೋರಾಟ ನಡೆಸಿದರೂ ಸಿಗುವ ಕೂಲಿಯಿಂದ ಕುಟುಂಬದ ಜೀವನ ನಡೆಸಲು ಸಾಧ್ಯವಾಗುತ್ತದೆಯೇ ಎಂದು ಪ್ರಶ್ನಿಸಿದರೆ ಶೇ.೮೦ ಕ್ಕಿಂತ ಅಧಿಕ ಮಹಿಳೆಯರು ಪ್ರಸ್ತುತ ಕೂಲಿಯಿಂದ ಸಾಧ್ಯವಿಲ್ಲವೆಂದರು. ಕೇವಲ ಶೇ.೧೮ ಮಹಿಳೆಯರು ಮಾತ್ರ ಈಗ ದೊರಕುತ್ತಿರುವ ಕೂಲಿ ಸಾಕಾಗುತ್ತದೆ ಎಂದು ನುಡಿದರು. ಕೂಲಿಯು ಸಾಕಷ್ಟು ಸಿಗುವುದಿಲ್ಲವಾದ್ದರಿಂದ ಮಹಿಳೆಯರು ಅನೇಕ ರೀತಿಯ ತ್ಯಾಗಗಳನ್ನು ಕುಟುಂಬಕ್ಕೋಸ್ಕರ ಮಾಡಬೇಕಾಗುತ್ತದೆ. ಈ ಕಾರಣಕ್ಕಾಗಿ ಮಹಿಳೆಯರು ಮಾನಸಿಕ ಹಾಗೂ ದೈಹಿಕವಾಗಿ ದುರ್ಬಲರಾಗುತ್ತಾರೆ.

ಕೋಷ್ಟಕ ೪.೧ ಕೃಷಿಯಿಂದ ಬಂದ ಕೂಲಿಯಲ್ಲಿ ಕುಟುಂಬ ಸಾಗಿಸಲು ಸಾಧ್ಯವೇ

ಕ್ರ.ಸಂ.	ಅಭಿಪ್ರಾಯ	ಸಂಖ್ಯೆ	ಶೇಕಡ
೧	ಸಾಧ್ಯ	೧೮	೧೮.೦೦
೨	ಅಸಾಧ್ಯ	೮೨	೮೨.೦೦
	ಒಟ್ಟು	೧೦೦	೧೦೦.೦೦

ದುಡಿಮೆಯ ಅವಧಿ:

ಈಗಾಗಲೆ ತಿಳಿಸಿರುವಂತೆ ಹೆಚ್ಚಿನ ಮಹಿಳಾ ಕೃಷಿ ಕಾರ್ಮಿಕರು ಹಗಲಡೀ ದುಡಿಯುತ್ತಾರೆ. ಆದರೆ ಇದರ ಪ್ರತಿ ಫಲವಾಗಿ ಕೈಗೆಸಿಗುವ ಕೂಲಿಯ ಪ್ರಮಾಣ ಕಡಿಮೆಯಾಗಿರುವುದರಿಂದ ಅನೇಕ ಮಹಿಳೆಯರು ಬೆಳಗಿನ ಜಾವದಿಂದರಾತ್ರಿಯಾಗುವವರೆಗೂ ದುಡಿಯುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನದ ಮಹಿಳೆಯರು ಎಷ್ಟು ಗಂಟೆಗಳ ಕಾಲ ದುಡಿಮೆಯಲ್ಲಿ ನಿರತರಾಗಿರುತ್ತಾರೆ ಎಂದರಿಯುವುದು ಅವಶ್ಯಕ. ಕೊಷ್ಟಕ.೪.೨ರಲ್ಲಿದುಡಿಮೆಯ ಕಾಲಾವಧಿ ಕುರಿತು ಮಾಹಿತಿ ನೀಡಲಾಗಿದೆ.

ಕೋಷ್ಟಕ.೪.೨:ದುಡಿಮೆಯ ಅವಧಿ ಕುರಿತು:

ಕ್ರ.ಸಂ	ದುಡಿಯುವ ಅವಧಿ	ಸಂಖ್ಯೆ	ಶೇಕಡ
೧	೮ಗಂಟೆ.	೨೦	೨೦.೦೦
೨	೧೦ಗಂಟೆ.	೫೬	೫೬.೦೦
೩	೧೨ಕ್ಕಿಂತ ಅಧಿಕ	೨೪	೨೪.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೪.೨ರ ಪ್ರಕಾರ ೫೬ ಶೇಕಡ ಮಹಿಳಾ ಮಾಹಿತಿದಾರರು ದಿನಾಲು ೧೦ ಗಂಟೆಗಿಂತ ಅಧಿಕ ಕಾಲ ದುಡಿಮೆಯಲ್ಲಿ ನಿರತರಾಗಿರುತ್ತಾರೆ. ಕೇವಲ ಶೇ ೨೦ ಮಹಿಳೆಯರು ಮಾತ್ರ ೮ ಗಂಟೆಯಷ್ಟು ಕಾಲ ದುಡಿಯುತ್ತಾರೆ.ಕುಟುಂಬದ ಗಾತ್ರ ದೊಡ್ಡದಿರುವುದರಿಂದ ಮಕ್ಕಳನ್ನು ಸಾಕಲು ಸಲಹಲು ಮಹಿಳೆಯರು ಅನಿವಾರ್ಯವಾಗಿ ಹೊಲಗದ್ದೆಗಳಲ್ಲಿ ಬಹಳ ಕಾಲ ದುಡಿಯ ಬೇಕಾಗುತ್ತದೆ. ಕೂಲಿಯ ಅಗತ್ಯತೆ ಒಂದಡೆ ದೀರ್ಘ ಕಾಲಾವಧಿ ದುಡಿಯುವಿಕೆಇನ್ನೊಂದಡೆ ಇಂಥ ಸಮಸ್ಯೆಗಳಿಂದಾಗಿ ದುಡಿಯುವ ಮಹಿಳೆಯರು ಜೀವನ ಪರ್ಯಂತ ದುಡಿಯುತ್ತಾ ಇರುತ್ತಾರೆ. ೧೦ ಗಂಟೆಗಳಿಗಿಂತ

ಅಧಿಕವಾಗಿ ದುಡಿದರೂ ಕೂಲಿಯ ಪ್ರಮಾಣದಲ್ಲಿ ಹೇಳಿಕೊಳ್ಳುವಂತಹ ಬದಲಾವಣೆ ಆಗುವುದಿಲ್ಲ.ಅನೇಕ ಮಹಿಳೆಯರು ಸಂದರ್ಶನ ಸಮಯದಲ್ಲಿ ತಮ್ಮ ಕೆಲಸಕ್ಕನುಗುಣವಾಗಿ ತಮಗೆ ಕೂಲಿ ಸಿಗಬೇಕು ಎಂದರು. ಇವರ ಅಭಿಪ್ರಾಯಗಳನ್ನು ಕೋಷ್ಟಕ ೪.೩ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೩:ಕೆಲಸಕ್ಕನುಗುಣವಾಗಿ ಪಡೆಯುವ ಕೂಲಿ:

ಕ್ರ.ಸಂ.	ಕೆಲಸಕ್ಕನುಗುಣವಾಗಿ	ಸಂಖ್ಯೆ	ಶೇಕಡ
೧	ಪಡೆಯುತ್ತೇವೆ	೨೨	೨೨.೦೦
೨	ಪಡೆಯುವುದಿಲ್ಲಾ	೭೮	೭೮.೦೦
	ಒಟ್ಟು	೧೦೦	೧೦೦.೦೦

ವೇತನದಲ್ಲಿ ಅಸಮಾನತೆ, ಕೂಲಿಯಲ್ಲಿ ತಾರತಮ್ಯತೆಯನ್ನು ಇಂದು ನಾವು ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಾಣುತ್ತೇವೆ.ಹರಪನಹಳ್ಳಿ ತಾಲ್ಲೂಕು ಸಹ ಇದಕ್ಕೆ ಹೊರತಾಗಿಲ್ಲ. ಇಲ್ಲಿಯುಸಹ ಪುರುಷ-ಕೇಂದ್ರಿತ ದುಡಿಮೆಗೆ ಮನ್ನಣೆನೀಡಲಾಗುತ್ತದೆ, ಹಾಗೂ ಅವರಿಗೆ ಅಧಿಕ ಕೂಲಿ ದೊರಕುತ್ತದೆ. ಈ ಹಿನ್ನೆಲೆಯಲ್ಲಿ ನಾವು ನಮ್ಮ ಆಯ್ದ ಮಹಿಳಾಕೃಷಿ ಕಾರ್ಮಿಕರಲ್ಲಿ ವಿಚಾರಿಸಿದಾಗ ಸುಮಾರು ಶೇ ೬೫ರಷ್ಟು ಮಹಿಳೆಯರು ನಮ್ಮ ದುಡಿಮೆಗೆ ತಕ್ಕ ಪ್ರತಿಫಲ ದೊರಕುತ್ತಿಲ್ಲ ಎಂದರು. ಪುರುಷರು ಕಡಿಮೆ ದುಡಿದರೂ ಅವರಿಗೆ ದೊರಕುವ ಕೂಲಿ ಪ್ರಮಾಣ ಹೆಚ್ಚು. ಈ ಮಾಹಿತಿಯನ್ನು ಕೋಷ್ಟಕ ೪.೪.ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೪ಪುರುಷರಷ್ಟೆ ಕೂಲಿ ಪಡೆಯುವಿರಾ?

ಕ್ರ.ಸಂ.	ಮಾಹಿತಿ	ಸಂಖ್ಯೆ	ಶೇಕಡ
೧	ಹೌದು	೩೫	೩೫.೦೦
೨	ಇಲ್ಲ	೬೫	೬೫.೦೦
	ಒಟ್ಟು	೧೦೦	೧೦೦.೦೦

ಕೂಲಿಯಲ್ಲಿನ ತಾರತಮ್ಯತೆ, ಅಸಮಾನತೆಯನ್ನು ನಾವು ನಮ್ಮ ಅಧ್ಯಯನದ ಮೂಲಕ ಸ್ಪಷ್ಟವಾಗಿ ಕಾಣಬಹುದು.ಮಹಿಳೆಯರ ದುಡಿಮೆಗೆ ತಕ್ಕಂತೆ ಕೂಲಿ ಸಿಗದೇ ಇದ್ದದ್ದು ಸಮಸ್ಯೆಯನ್ನಂಟು ಮಾಡಿದೆ. ಕೇವಲ ಹಗಲಡೀ ದುಡಿದು ಕೂಲಿ ತರುವುದು ಒಂದೇ ಸಮಸ್ಯೆಯಲ್ಲ ದುಡಿದು ತಂದ ಕೂಲಿಯನ್ನು

ಯಾವ ರೀತಿ ಖರ್ಚುಮಾಡುತ್ತಾರೆ ಎಂದು ತಿಳಿಯುವುದು ಅವಶ್ಯಕ. ಏಕೆಂದರೆ ಮಹಿಳೆಯರಿಗೆ ಕೇವಲ ಉದ್ಯೋಗ ಅವಶ್ಯಕ ನೀಡಿದರೆಮಾತ್ರ ಸಾಲದು, ಅವರು ದುಡಿದು ತರುವ ಕೂಲಿಯ ಮೇಲೆ ಅವಳಿಗೆ ನಿಯಂತ್ರಣವಿರಬೇಕು, ಇಲ್ಲವಾದಲ್ಲಿ ಮಹಿಳೆದುಡಿದ ಲಾಭ ಅವಳಿಗೆ ದೊರಕದೇ ಇರಬಹುದು. (ವಾಲಸ್, ೧೯೯೪) ಈ ಹಿನ್ನೆಲೆಯಲ್ಲಿ ಯಾರು ಈ ಕೂಲಿಯನ್ನ ಖರ್ಚ ಮಾಡುತ್ತಾರೆ ಎಂದು ತಿಳಿಯುವುದು ಅವಶ್ಯಕ. ಕೋಷ್ಟಕ ೪.೫ರಲ್ಲಿ ಇದಕ್ಕೆ ಕುರಿತಾದ ಮಾಹಿತಿ ನೀಡಲಾಗಿದೆ. ಒಂದು ಅಶ್ಚರ್ಯಕರ ಸಂಗತಿ ಎಂದರೆ ಕೇವಲ ಶೇ ೩ ಮಹಿಳೆಯರು ಮಾತ್ರ ಸ್ವಂತ ಇಚ್ಚೆಯಿಂದ ಖರ್ಚುಮಾಡುತ್ತಾರೆ.ಸುಮಾರು ಅರ್ಧಕಿಂತಲೂ ಹೆಚ್ಚು ಮಹಿಳೆಯರು ದುಡಿದ ಹಣವನ್ನು ಗಂಡನಿಗೆ ಕೊಡುತ್ತಾರೆ. ಇದು ಮಹಿಳೆಯರ ನೈಜ ಪರಿಸ್ಥಿತಿಯನ್ನು ತಿಳಿಸುತ್ತದೆ.

ಕೋಷ್ಟಕ ೪.೫:ಕೂಲಿಯನ್ನು ಖರ್ಚು ಮಾಡುವವರು:

ಕ್ರ.ಸಂ	ಖರ್ಚು ಮಾಡುವವರು	ಸಂಖ್ಯೆ	ಶೇಕಡ
೧	ಗಂಡ	೫೪	೫೪.೦೦
೨	ತಂದೆ	೧೩	೧೩.೦೦
೩	ತಾಯಿ	೧೨	೧೨.೦೦
೪	ಅತ್ತೆ	೧೮	೧೮.೦೦
೫	ನಾನೆ	೩	೩.೦೦
	ಒಟ್ಟು	೧೦೦	೧೦೦.೦೦

ಒಟ್ಟಾರೆ ಹೇಳುವುದಾದರೆ ಮಾಹಿಳಾ ಕೃಷಿ ಕಾರ್ಮಿಕರು ತಮ್ಮ ದುಡಿಮೆಗೆ ತಕ್ಕ ಕೂಲಿ ಪಡೆಯದೆ ಇದ್ದರೂ, ಬಂದ ಕೂಲಿಯನ್ನು ಖರ್ಚಮಾಡುವಂತಹ ಸ್ವಾತಂತ್ರ್ಯವನ್ನು ಹೊಂದಿಲ್ಲ ಎಂಬುದು ಈ ಅಧ್ಯಯನದಲ್ಲಿ ತಿಳಿದು ಬಂದಿದೆ.

೪.೨ ಮಹಿಳಾ ಕೃಷಿ ಕಾರ್ಮಿಕರ ವಲಸೆ ಸಮಸ್ಯೆ:

ಇತ್ತೀಚಿಗೆ ಗ್ರಾಮೀಣ ಪ್ರದೇಶದಲ್ಲಿ ಆಧುನಿಕ ಆರ್ಥಿಕ ನಿಯಮಗಳು, ತಂತ್ರಜ್ಞಾನಗಳು ಮಹಿಳೆಯರನ್ನು ಹೆಚ್ಚು ಹೆಚ್ಚುನಿರ್ಗತಿಕರನ್ನಾಗಿ ಮಾಡುತ್ತಿವೆ. ಗ್ರಾಮೀಣ ಪ್ರಧೇಶದಲ್ಲಿ ಒಂದು ಸಣ್ಣ ತಾಂತ್ರಿಕ ಬದಲಾವಣೆಯಾದರೂ ಅಥವಾ ಕೃಷಿ ಉತ್ಪಾದನೆಯಲ್ಲಿ ಏನೇ ಬದಲಾವಣೆಯಾದರೂ ಅದು

ಮಹಿಳೆಯರ ಮೇಲೆ ಪ್ರತಿಕೂಲವಾದ ಪರಿಣಾಮವನ್ನು ಬೀರುತ್ತದೆ.ಈ ಹಂತದಲ್ಲಿ ಮಹಿಳೆಯರು ಎಷ್ಟೇ ಶ್ರಮ ವಹಿಸಿದರೂ ಅವರಿಗೆ ಸಿಗುವ ಪ್ರತಿಫಲ ಮಾತ್ರ ತುಂಬಾ ಕಡಿಮೆ. ಈರೀತಿಯ ತಾರತಮ್ಯವನ್ನು ಹೊಂದಿರುವ ಮಹಿಳೆಯರಿಗೆ ಕೃಷಿ ಕ್ಷೇತ್ರದಲ್ಲಿ ಕೆಲಸಗಳ ಕೊರತೆ ಇದ್ದಾಗ ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಅಥವಾ ಕೌಟುಂಬಿಕ ಸಮಸ್ಯಗಳನ್ನು ನೀಗಿಸಿಕೊಳ್ಳಲಿಕ್ಕೆ ಅವಳಿಗೆ ಇರುವ ಬದಲಿ ವ್ಯವಸ್ಥೆ ಎಂದರೆ ಉದ್ಯೋಗವಿರುವ ಕಡೆ ಹೋಗಿ ದುಡಿದುಕೊಂಡು ಬರುವುದು. 'ಇದನ್ನೇ ನಾವುಇನ್ನೊಂದು ಅರ್ಥದಲ್ಲಿ ವಲಸೆ ಪ್ರವೃತ್ತಿ ಎಂತಲೂ ಕರೆಯಬಹುದು. (ಮಧುಕೀಶ್ವರ್ ,೧೯೯೫), ಈ ವಲಸೆ ಪ್ರವೃತ್ತಿಯನ್ನು ನಾವು ಗ್ರಾಮೀಣ ಭಾರತದ ಪ್ರತಿಯೊಂದು ಹಳ್ಳಿಗಳಲ್ಲೂ ಕಾಣಬಹುದು. ಇದರಿಂದ ಗ್ರಾಮ ನಿವಾಸಿಗಳುಉದ್ಯೋಗ ಹುಡುಕುತ್ತಾ ನಗರಕ್ಕೆ ಬರುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಗಣನೀಯವಾಗಿ ಏರುತ್ತಲೇ ಇದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಮುಖ್ಯವಾಗಿ ಎರಡು ಗುಂಪಿನ ಜನಾಂಗದವರಲ್ಲಿ ವಲಸೆ ಪ್ರವೃತಿಯನ್ನು ಕಾಣಬಹುದು.ಬುಡಕಟ್ಟು ಜನಾಂಗವಾದ ಲಂಬಾಣಿಗಳು ಮತ್ತು ಗ್ರಾಮಾಂತರ ಪ್ರದೇಶದ ಭೂರಹಿತ ಕೃಷಿ ಕಾರ್ಮಿಕರು.

ಹರಪನಹಳ್ಳಿ ತಾಲ್ಲೂಕಿನ ಕೊನೆಯ ಭಾಗದಲ್ಲಿ ಅಂದರೆ ಪೂರ್ವಕ್ಕೆ ಬರುವ ಕಂಚಿಕೇರಿ ಭಾಗ ಮತ್ತು ಉತ್ತರಕ್ಕೆ ಬರುವಹುಲಿಕಟ್ಟಿ-ಹಾರಕನಾಳು ಗ್ರಾಮಗಳ ಸುತ್ತ ಮುತ್ತಲ ಪ್ರದೇಶಗಳಲ್ಲಿ ವಲಸೆ ಪ್ರವೃತ್ತಿಯನ್ನು ಗಣನೀಯವಾಗಿ ಕಾಣಬಹುದು.ಕಂಚಿಕೇರಿ ಭಾಗದಲ್ಲಿ ನೀರಾವರಿ ಸೌಲಭ್ಯವಿದ್ದರೂ ಅದರಿಂದ ದೊರೆಯುವ ಆದಾಯ ಪ್ರಮಾಣ ತೀರಾ ಕಡಿಮೆ. ಅಲ್ಲದೆ ಈ ಪ್ರದೇಶದಲ್ಲಿ ಕೂಲಿಗೆ ಸಂಬಂಧಿಸಿದಂತೆ ಲಿಂಗ ತಾರತಮ್ಯವ್ಯವಸ್ಥೆ ಅಸ್ತಿತ್ವದಲ್ಲಿದ್ದುದರಿಂದ, ಈ ಭಾಗದ ಜನತೆ ಅಧಿಕ ಕೂಲಿಗಾಗಿ ಸಮೀಪದ ದಾವಣಗೇರಿಗೆ ವಲಸೆ ಹೋಗುತ್ತಿದ್ದಾರೆ. ಇದೇ ಬಗೆಯ ವಲಸೆ ಪ್ರವೃತ್ತಿಯನ್ನು ಕಂಚಿಕೇರಿಯ ಸುತ್ತಮುತ್ತಲ್ಲಿರುವ ಸತ್ತೂರು, ಹಿರೇಮ್ಯಾಗಳಗೇರಿ, ಚಿಕ್ಕಾಮ್ಯಾಗಳಗೇರಿ, ಹೊಸಹಳ್ಳಿ, ಚೌಡಾಪುರ, ಗೊಲ್ಲರ ಹಟ್ಟಿ ಮುಂತಾದ ಗ್ರಾಮಗಳಲ್ಲಿ ಕಾಣಬಹುದು.

ಕಂಚಿಕೇರಿ ಮತ್ತು ಸತ್ತೂರು ಭಾಗದಲ್ಲಿ ಬರುವ ಮಹಿಳೆಯರು ದಾವಣಗೇರಿ ಸುತ್ತ-ಮುತ್ತಲಿನ ನೀರಾವರಿ ಪ್ರದೇಶದಲ್ಲಿಭತ್ತ ನಾಟಿ ಮಾಡುವ, ಕಳೆ ತೆಗೆಯುವ, ಹತ್ತಿ, ಶೇಂಗಾ, ಮುಂತಾದ ಕೃಷಿ ಚಟುವಟಿಕೆಯಲ್ಲಿ ನಿರತರಾಗಿರುವುದುಈ ಭಾಗದ ಮಹಿಳಾ ವಲಸೆಗಳ ದುಡಿಮೆಯ ಸ್ವರೂಪವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ಕೃಷಿ ಕಾರ್ಮಿಕ ವಲಸೆಯ ಪ್ರವೃತ್ತಿ-ಕಾರಣ ಹಾಗೂ ಯಾವ ಪ್ರದೇಶಗಳಿಗೆ ವಲಸೆಹೋಗುತ್ತಾರೆ ಎಂಬುದನ್ನು ಕುರಿತು ಮಾಹಿತಿಯನ್ನು ಕೋಷ್ಟಕ ೪.೬ ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೪.೬.ಮಹಿಳಾ ಕೃಷಿಕಾರ್ಮಿಕರಲ್ಲಿ ವಲಸೆ:

ಕ್ರ.ಸಂ.	ವಲಸೆ	ಸಂಖ್ಯೆ	ಶೇಕಡ
೧	ಹೋಗುತ್ತೇವೆ	೬೬	೬೬.೦೦
೨	ಹೋಗುವುದಿಲ್ಲ	೩೪	೩೪.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೪.೬ರ ಪ್ರಕಾರ ಶೇ ೬೬ರಷ್ಟು ಮಾಹಿತಿದಾರರು ವಲಸೆ ಹೋಗುತ್ತಾರೆ. ಶೇ ೩೪ರಷ್ಟು ಮಾಹಿತಿದಾರರುವಲಸೆ ಹೋಗದೇ, ಸ್ಥಳೀಯವಾಗಿ ಲಭ್ಯವಿರುವ ಉದ್ಯೋಗಗಳಲ್ಲಿ ಭಾಗವಹಿಸುತ್ತಾರೆ. ಮೇಲಿನ ಅಂಶದಿಂದ ತಿಳಿಯುವುದೇನೆಂದರೆ, ಬಹುತೇಕ ಮಹಿಳಾ ಕೃಷಿ ಕಾರ್ಮಿಕರ ಕುಟುಂಬಗಳಿಗೆ ನಿರಂತರವಾದ ಉದ್ಯೋಗದ ಕೊರತೆ ಇರುವುದರಿಂದ ಬದುಕಿನ ಅನಿವಾರ್ಯತೆಗಾಗಿ ವಲಸೆ ಹೋಗುತ್ತಾರೆ. ಕೋಷ್ಟಕ ೪.೭ರಲ್ಲಿ ಶೇ ೬೬ ವಲಸೆ ಹೋಗುವವರನ್ನು ಯಾವ ಕಾರಣಕ್ಕೆ ವಲಸೆ ಹೋಗುವಿರೆಂದು ಪ್ರಶ್ನಿಸಿದರೆ, ಶೇ ೩೫ರಷ್ಟು ಜನರು ನಿರಂತರವಾಗಿದುಡಿಮೆಗಾಗಿ, ಶೇ ೩೧ ಜನ ಕೂಲಿವ್ಯತ್ಯಾಸಕ್ಕೆ ಎಂಬುದು ತಿಳಿದುಬಂದಿದೆ.

ಕೋಷ್ಟಕ ೪.೭: ವಲಸೆ ಹೋಗುವ ಕಾರಣಗಳು:

ಕ್ರ.ಸಂ.	ಕಾರಣಗಳು	ಸಂಖ್ಯೆ	ಶೇಕಡ
೧	ದುಡಿಮೆಗಾಗಿ	೩೫	೩೫.೦೦
೨	ಕೂಲಿ ವ್ಯತ್ಯಾಸ	೩೧	೩೧.೦೦
೩	ಸಂಬಂಧವಿಲ್ಲದವರು	೩೪	೩೪.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೪.೮ ರಲ್ಲಿ ಉಲ್ಲೇಖಿಸಿದಂತೆ ಮಾಹಿತಿದಾರರಿಗೆ ನೀವು ಎಷ್ಟು ತಿಂಗಳ ಕಾಲ ವಲಸೆ

ಹೋಗುತ್ತೀರೆಂಬ ಪ್ರಶ್ನೆಗೆ,ವಿಭಿನ್ನ ಅಭಿಪ್ರಾಯಗಳನ್ನುವ್ಯಕ್ತಪಡಿಸಲಾಗಿದೆ. ಶೇ ೩೭ ರಷ್ಟು ಜನರು ೩-೫ ತಿಂಗಳು, ಮತ್ತು ಶೇ ೨೯ ರಷ್ಟು ಜನ ೬ ರಿಂದ ೮ ತಿಂಗಳ ಕಾಲ ಹೋಗುವರೆಂದು, ಉಳಿದ ಶೇ ೩೪ರಷ್ಟು ಜನ ಸ್ಥಳೀಯವಾಗಿ ಉದ್ಯೋಗವನ್ನು ಮುಂದುವರಿಸುತ್ತಿದ್ದಾರೆ ಎಂಬುದು ಮಾಹಿತಿದಾರರಿಂದ ತಿಳಿದು ಬಂದಿದೆ.

ಕೋಷ್ಟಕ ೪.೮:ಎಷ್ಟು ತಿಂಗಳ ಕಾಲ ವಲಸೆ ಹೋಗುವಿರಿ

ಕ್ರ.ಸಂ.	ತಿಂಗಳ ಕಾಲ	ಸಂಖ್ಯೆ	ಶೇಕಡ
೧	೩-೫	೩೭	೩೭.೦೦
೨	೬-೮	೨೯	೨೯.೦೦
೩	ಸಂಬಂಧವಿಲ್ಲ	೩೪	೩೪.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೪.೯ ರಂತೆ ಶೇ ೧೮ ರಷ್ಟು ಜನ ರಾಜ್ಯದ ಪ್ರಮುಖ ಪಟ್ಟಣಗಳಾದ ಬೆಂಗಳೂರು, ಹುಬ್ಬಳ್ಳಿ-ದಾರವಾಡ,ಮೈಸೂರು, ದಾವಣಗೇರಿ, ಮಂಗಳೂರು, ಮುಂತಾದ ಪ್ರದೇಶಗಳಿಗೆ ಅಧಿಕವಾಗಿ ವಲಸೆ ಹೋಗುತ್ತಾರೆ. ಶೇ೨೬ರಷ್ಟು ಜನ ಮಲೆನಾಡಿಗೆ, ಶೇ ೧೭ ರಷ್ಟು ಜನ ದಕ್ಷಿಣ ಕನ್ನಡ ಜಿಲ್ಲೆಗೆ, ಶೇ ೫ರಷ್ಟು ಜನರು ಇತರ ಪ್ರದೇಶಗಳಿಗೆ ವಲಸೆ ಹೋಗುವರೆಂದು, ಮತ್ತು ಶೇ ೩೪ರಷ್ಟು ಜನರು ಸ್ಥಳೀಯವಾಗಿಯೇ ಉಳಿದಿದ್ದಾರೆಂದು ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡು ಬಂದ ಅಂಶವಾಗಿದೆ.

ಕೋಷ್ಟಕ ೪.೯: ವಿವಿಧ ಪ್ರದೇಶಗಳಿಗೆ ವಲಸೆ ಹೋಗುವವರು

ಕ್ರ.ಸಂ.	ವಿವಿಧ ಪ್ರದೇಶ	ಸಂಖ್ಯೆ	ಶೇಕಡ
೧	ಪಟ್ಟಣ	೧೮	೧೮.೦೦
೨	ಮಲೆನಾಡು	೨೬	೨೬.೦೦
೩	ದಕ್ಷಿಣ ಕನ್ನಡ	೧೭	೧೭.೦೦
೪	ಇತರೆ	೫	೫.೦೦
೫	ಅನ್ವಯವಿಲ್ಲ	೩೪	೩೪.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೪.೯ ರಲ್ಲಿ ವಿವಿಧ ಪ್ರದೇಶಕ್ಕೆ ವಲಸೆ ಹೋಗುವವರನ್ನು ತೋರಿಸಿದಂತೆ ವಲಸೆ ಸಮಯದಲ್ಲಿಯ ಅವರ ದುಡಿಮೆಯ ಸ್ವರೂಪವು ಸಹ ಬಗೆ ಬಗೆಯಾಗಿರುವುದನ್ನು ಕಾಣಬಹುದಾಗಿದೆ. ಇದನ್ನು ಕೋಷ್ಟಕ ೪.೧೦ರಲ್ಲಿವಿವರಿಸಲಾಗಿದೆ.

ಕೋಷ್ಟಕ ೪.೧೦: ಕೆಲಸದ ಸ್ವರೂಪ:

ಕ್ರ.ಸಂ	ಕೆಲಸದ ಬಗೆ	ಸಂಖ್ಯೆ	ಶೇಕಡ
೧	ಕಷ್ಟಕರ ಕೆಲಸ	೨೪	೨೪.೦೦
೨	ಸಾಧಾರಣ ಕೆಲಸ	೧೨	೧೨.೦೦
೩	ಉತ್ತಮ ಕೆಲಸ	೧೦	೧೦.೦೦
೪	೧ ಮತ್ತು೨	೨೦	೨೦.೦೦
೫	ಸಂಬಂಧವಿಲ್ಲ	೩೪	೩೪.೦೦
	ಒಟ್ಟು	೧೦೦	೧೦೦.೦೦

ಕೋಷ್ಟಕ ೪.೧೦ರಿಂದ ತಿಳಿದು ಬರುವುದೇನೆಂದರೆ ಒಟ್ಟು ಶೇ ೨೪ರಷ್ಟು ಜನರು ಕಷ್ಟಕರವಾದ ದುಡಿಮೆಯಲ್ಲಿ,ಶೇ ೧೨ರಷ್ಟು ಜನರು ಸಾಧಾರಣ ಕೆಲಸದಲ್ಲಿ ತೊಡಗಿದ್ದಾರೆ. ಶೇ ೧೦ರಷ್ಟು ಜನರು ಉತ್ತಮ ಕೆಲಸದಲ್ಲಿ ಮತ್ತುಶೇ ೨೦ರಷ್ಟು ಜನರು ಕಷ್ಟಕರವಾದ, ಸಾಧಾರಣ ಮಟ್ಟದ ದುಡಿಮೆಯಲ್ಲಿ ನಿರತರಾಗಿರುವುದನ್ನು ಕಾಣಬಹುದು.ಉಳಿದ ೩೪ರಷ್ಟು ಜನರು ಸ್ಥಳೀಯವಾಗಿ ಲಭ್ಯವಿದ್ದ ಉದ್ಯೋಗವನ್ನೇ ಅವಲಂಬಿಸಿದವರಾಗಿದ್ದಾರೆ. ಒಟ್ಟಾರೆ ಶೇ೬೦ಕ್ಕೆ ಹೆಚ್ಚು ಜನರು ಕಷ್ಟಕರವಾದ ದುಡಿಮೆಯಲ್ಲಿ ನಿರತರಾಗಿದ್ದು ಇವರ ಆರೋಗ್ಯದ ಮೇಲೆ ಪ್ರತಿ ಕೂಲ ಪರಿಣಾಮ ಉಂಟಾಗುತ್ತದೆ.

೪.೩ ಅಸಂಘಟಿತ ವಲಯದಲ್ಲಿ ಮಹಿಳೆ:

ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿಗೆ ಕೆಲಸದ ಅಭದ್ರತೆ ಕಾಡುತ್ತಿರುತ್ತದೆ. ಅಷ್ಟೇ ಅಲ್ಲದೇ ದುಡಿಮೆಯಲ್ಲಿ ನಿರತರಾದ ಸಮಯದಲ್ಲಿ ಅವರು ಆಕಸ್ಮಿಕವಾಗಿ ಮರಣಹೊಂದಿದಲ್ಲಿ ಅವರಿಗೆ ಯಾವುದೇ ಪರಿಹಾರವಿಲ್ಲ. ಈ ತಾಲ್ಲೂಕಿನಲ್ಲಿ ಅಸಂಘಟಿತ ವಲಯದಲ್ಲಿ ತೊಡಗಿರುವವರನ್ನು ಗಣನೀಯವಾಗಿ ಕಾಣಬಹುದಾಗಿದೆ. ಏಕೆಂದರೆ ಈ ಪ್ರದೇಶ ಮೂಲತಃ ವ್ಯವಸಾಯವನ್ನೇ ಅವಲಂಬಿಸಿರುವದರಿಂದ ಇಲ್ಲಿ ನಿರಂತರವಾದ ದುಡಿಮೆಯನ್ನುನಿರೀಕ್ಷಿಸಲಿಕ್ಕೆ ಸಾಧ್ಯವಿಲ್ಲ. ಕೃಷಿಯಲ್ಲಿ

ನಿರತರಾಗಿರುವವರನ್ನು ಬಿಟ್ಟರೆ, ಕಲ್ಲು ಒಡೆಯುವ, ಕಟ್ಟಿಗೆ, ಹುಲ್ಲುತರುವ, ತುಂಬ್ರಿ ಎಲೆ ಆರಿಸುವ ಕೆಲಸದಲ್ಲಿ ತೊಡಗಿರುವವರನ್ನು ಗ್ರಾಮೀಣ ಪ್ರದೇಶದಲ್ಲಿ ಕಂಡರೆ, ನಗರ ಪ್ರದೇಶದಲ್ಲಿಬಹುತೇಕ ಮುಸ್ಲಿಂ ಮಹಿಳೆಯರು ಬೀಡಿ ಕಟ್ಟುವ ವೃತ್ತಿಯಲ್ಲಿ ಹೆಚ್ಚಾಗಿ ಕಾಣಿಸಿ ಕೊಳ್ಳುತ್ತಾರೆ. ನಗರದ ಬಡ ಮಹಿಳೆಯರು, ವೃದ್ಧರು, ಮತ್ತು ೧೫ ವರ್ಷದೊಳಗಿನ ಬಾಲಕಿಯರು ಸರಕಾರಿ ನೌಕರರ ಮನೆಯಲ್ಲಿ ಮನೆಗೆಲಸದಾಳುಗಳಾಗಿ ದುಡಿಯುತ್ತಿದ್ದಾರೆ. ನಗರದಲ್ಲಿ ಸುಮಾರು ೪೦೦ರಿಂದ ೪೫೦ ನೌಕರರು ಸರ್ಕಾರಿ ಸೇವೆಯಲ್ಲಿದ್ದು, ಇವರಲ್ಲಿ ಬಹುತೇಕ ಜನರು ತಮ್ಮ ಮನೆಕೆಲಸಕ್ಕೆ ಕಡಿಮೆ ಕೂಲಿಯಲ್ಲಿ ಆಳುಗಳನ್ನು ದುಡಿಸಿಕೊಳ್ಳುತ್ತಿದ್ದಾರೆ.ಈ ಕೂಲಿ ಆಳುಗಳೆಲ್ಲಾ ಅಸಂಘಟಿತ ವಲಯದಲ್ಲಿ ಬರುವವರಾಗಿದ್ದಾರೆ. ಇನ್ನು ವ್ಯವಸಾಯದಲ್ಲಿ ತೊಡಗಿರುವವರ ಸ್ಥಿತಿಯಂತೂ ಇನ್ನೂ ಶೋಚನೀಯವಾಗಿದೆ.

ವ್ಯವಸಾಯ ಮುಗಿದ ನಂತರ ಬಹುತೇಕ ಮಹಿಳಾ ಕೃಷಿ ಕಾರ್ಮಿಕರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗುತ್ತಾರೆ.ಇಲ್ಲಿಯೂ ಸಹ ಎಲ್ಲರಿಗೂ ಉದ್ಯೋಗ ದೊರೆಯಲು ಸಾಧ್ಯವಿಲ್ಲ. ಏಕೆಂದರೆ ಬೇಡಿಕೆಗಿಂತ ಅಧಿಕ ಪ್ರಮಾಣದಲ್ಲಿ ಕೂಲಿಗಳು ಲಭ್ಯವಿರುವುದರಿಂದ ಇವರಿಗೆ ದೊರೆಯುವ ಕೂಲಿಯು ಸಹ ಕಡಿಮೆ ಪ್ರಮಾಣದಲ್ಲಿ ಸಿಗುತ್ತದೆ. ಇಲ್ಲಿ ಕೆಲಸಮಾಡುವವರಿಗೆ ಯಾವಾಗಲು ಕೆಲಸದ ಭದ್ರತೆ ಇರುವುದಿಲ್ಲ. ಇಲ್ಲಿ ದುಡಿಯುವ ಮಹಿಳೆಯರು ನಿರಂತರವಾಗಿಶೋಷಣೆಗೊಳಗಾಗಿದ್ದಾರೆ.

ಈ ಭಾಗದಲ್ಲಿ ಕೃಷಿಯೇತರ ಅಸಂಘಟಿತ ವಲಯದಲ್ಲಿ ದುಡಿಯುವವರು, ಗುತ್ತಿಗೆದಾರರಕೈ ಕೆಳಗೆ ದುಡಿಯುತ್ತಿದ್ದಾರೆ.ಕೆಲವು ಮಹಿಳೆಯರು ಬೀಡಿ ಮಾಲಿಕರ ಹಿಡಿತದಲ್ಲಿ ಹಾಗೂ ಶ್ರೀಮಂತರ ದುಡಿಮೆಯಲ್ಲಿ ಭಾಗವಹಿಸುವುದನ್ನು ಕಾಣಬಹದಾಗಿದೆ.

ಕಟ್ಟಡ ನಿರ್ಮಾಣಗಳಲ್ಲಿ ಮಹಿಳೆಯರು ಅತ್ಯಂತ ಭೀಕರವಾದ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಾರೆ. ಇವರಿಗೆ ಕನಿಷ್ಟವೇತನವಂತೂ ಇಲ್ಲ. ಸಿಕ್ಕುವ ಅಲ್ಪಪ್ರಮಾಣದ ಕೂಲಿಯಲ್ಲಿಯು ಗುತ್ತಿದಾರರ ಕೈಕೆಳಗೆ ದುಡಿಯುವ ದಲ್ಲಾಳಿಗಳು ಕೂಲಿಯಲ್ಲಿ ಕಡಿತ ಮಾಡಿ ಕೊಡುತ್ತಿದ್ದಾರೆ. ಇವರನ್ನು ಕೂಲಿ ಕೆಲಸಕ್ಕೆ ಸೇರಿಸಿಕೊಳ್ಳುವ ಕ್ರಮದಿಂದಲೇ ಶೋಷಣೆ ಪ್ರಾರಂಭವಾಗುತ್ತದೆ. ಅಭಿವೃದ್ಧಿಯ ಕನಸನ್ನು ಕಾಣದೆ ಶೋಚನೀಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಸಾಮಾನ್ಯ ಜನತೆಯ ಮೇಲೆ ಸಾಮಾಜದ ಹಲವಾರು ಗುಂಪುಗಳು ಸರ್ವಾಧಿಕಾರವನ್ನು ಸ್ಥಾಪಿಸಿಕೊಂಡಿವೆ. ಮಹಿಳೆಯಕೆಲಸ ಕಾರ್ಯಗಳು

ಅತ್ಯಂತ ದೀರ್ಘವಾಗಿದ್ದರಿಂದ ತಂತ್ರಜ್ಞಾನದ ಕ್ಷೇತ್ರದಲ್ಲಿ ಅವಳಿಗೆ ಸರಿಯಾದ ಅದ್ವತೆಯಿಲ್ಲದಂತಾಗಿದೆ.ಮಹಿಳಾ ಕೃಷಿಕಾರ್ಮಿಕರಲ್ಲಿ ಮುಖ್ಯವಾಗಿ ಸಂಘಟನೆ ಇಲ್ಲದ ಕಾರಣದಿಂದಾಗಿ ಅವರು ನಿರಂತರವಾಗಿ ಶೋಷಣೆಗೆಒಳಗಾಗುತ್ತಿದ್ದಾರೆ. ಅವರನ್ನು ಸಂಘಟಿಸಿ ಅವರ ಸಮಸ್ಯೆಗಳಿಗೆ ಪರಿಹಾರವನ್ನು ದೊರೆಕಿಸಿ ಕೊಳ್ಳುವಲ್ಲಿ ಮಹಿಳೆಯರ ಅಜ್ಞಾನ, ಅವರ ಸಾಂಸ್ಕೃತಿಕ ರಚನಾ ಕ್ರಮಗಳು ಅವರನ್ನು ನಿರಂತರವಾಗಿ ಸಮಾಜ ಶೋಷಣೆಗೆಗುರಿ ಮಾಡಿವೆ. ಇವೆಲ್ಲವೂ ಸಹ ಮಾಹಿಳಾ ಸಂಘಟನೆಗಳ ಕೊರತೆಯಿಂದ ಲಿಂಗಭೇದ ತಾರತಮ್ಯವನ್ನು ಕಾಣಬಹುದಾಗಿದೆ.ಮಹಿಳೆಯರಲ್ಲಿ ಏಕತೆಯಿಂದ ಚಳುವಳಿಗಳು ರೂಪುಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳಾವುವು ಇಲ್ಲ. ಸರಕಾರದ ಅನುಕೂಲ ಪಡೆಯಲು ಹುಟ್ಟಿಕೊಂಡ ಕೆಲವುಮಹಿಳಾ ಮಂಡಳಗಳು, ಜಾತಿ-ವರ್ಗ ಆಧರಿತ ಮಹಿಳಾ ಸಮಾಜಗಳು ಕೇವಲ ಮಹಿಳೆಯನ್ನು ಸ್ವಂತ ಕಾಲ ಮೇಲೆನಿಲ್ಲುವ ಉದ್ಯೋಗವನ್ನು ಪ್ರಶ್ನೆ ಮಾಡುವಂತ ಸಂಘಟನೆಗಳು ಇಲ್ಲದೇ ಇರುವುದು ಮಹಿಳೆಯರ ಶೋಷಣೆಗೆಪ್ರಬಲವಾದ ಕಾರಣವಾಗಿದೆ.ನಮ್ಮ ಅಧ್ಯಯನದ ಹಿನ್ನೆಲೆಯಲ್ಲಿ ನಾವು ಕೈಗೊಂಡ ಸಂದರ್ಶನದ ಸೂಚಿಯಲ್ಲಿ ನೂರು ಮಹಿಳೆಯರ ಸಂದರ್ಶನದ ಸಂದರ್ಭದಲ್ಲಿ "ನಿಮಗೇನಾದರು ಸಂಘಟನೆ ಪರಿಚಯ ಏದೆಯೇ"? ಎಂದು ಕೇಳಿದರೆ ಶೇ ೯೫ ಮಂದಿ ಯಿಂದ ಬಂದ ಉತ್ತರ 'ಇಲ್ಲ' ಎಂದು. ಹೀಗೆ ಗ್ರಾಮೀಣ ಮಹಿಳೆಯರ ಕುರಿತು ಹೇಳುವುದು ಮಹಿಳೆಯರ ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳು ಕೆಲವು ಮೂಲಭೂತ ವಿಷಯಗಳನ್ನು ಕಾರ್ಯಗತಗೊಳಿಸಬೇಕು. ಮಹಿಳೆಯರಿಗೆ ಕುರಿತಾದ ಕೃಷಿ ತಂತ್ರಜ್ಞಾನ, ವೈಜ್ಞಾನಿಕತೆಯಂತಹ ಆಧುನಿಕ ತಿಳುವಳಿಕೆ ಬೇಕಾಗಿದೆ. ಇದರ ಮೂಲಕ ಅವರ ದುಡಿಮೆಯ ಫಲಹೆಚ್ಚಿಸಿಕೊಂಡು ತಮ್ಮ ಮೇಲೆ ತಮಗೆ ವಿಶ್ವಾಸ ಹುಟ್ಟಿಸುವಂತೆ ಕಾರ್ಯ ಚಟುವಟಿಕೆಗಳನ್ನು ಸರಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಈ ನಿಟ್ಟಿನಲ್ಲಿಅನಿವಾರ್ಯ ಮತ್ತು ಅವಶ್ಯಕವಾಗಿ ಕಾರ್ಯ ನಿರ್ವಹಿಸಬೇಕಾಗಿದೆ.

ಮಹಿಳೆಯರ ಅಭಿವೃದ್ಧಿಯತ್ತ ಯಾವುದೇ ಹೋರಾಟವಿರಲಿ ಅದು ಬಡತನದಿಂದ ಜರ್ಝರಿತವಾಗಿರುತ್ತವೆ. ತತ್ಪರಿಣಮವಾಗಿ ಸೌಲಭ್ಯಗಳಿಂದ ವಂಚಿತರಾದ ಮಹಿಳೆಯರಿಂದಲೇ ಸಂಘಟನೆಯ ಪ್ರಜ್ಞೆ ಆರಂಭವಾಗಬೇಕು.ಹೀಗಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಹಾಗು ನಗರಗಳಲ್ಲಿ ಕಡು ಬಡತನದಲ್ಲಿ ಬದುಕುವಂತಹಮಹಿಳೆಯರೊಂದಿಗೆ ಜೊತೆಗೂಡಿ ಅವರನ್ನು ಸಂಘಟಿಸ ಬೇಕು, ಕೆಲಸದಾಳುಗಳೇ ಇರಲಿ, ಕಟ್ಟಡನಿರ್ಮಾಣದ ಕೂಲಿಗಳೇ ಇರಲಿ, ಮಹಿಳಾ ಕೃಷಿ ಕಾರ್ಮಿಕರಿರಲಿ, ಸ್ವ ಉದ್ಯೋಗಳಾಗಿರಲಿ ಇಲ್ಲವೇ ನಿರದ್ಯೋಗಿಗಳಾಗಿರಲಿ ಮಹಿಳೆಯರಾಗಿ

ದುಡಿಯುವ ವರ್ಗಗಳಾಗಿ ಇವರೆಲ್ಲರ ಸಮಸ್ಯೆಗಳಿಗೆ ಪರಿಹಾರ ದೊರೆಯುವುದು, ಮಹಿಳೆಯರದೇ ಆದ ಬಲಿಷ್ಟವಾದ ಸಂಘಟನೆಯನ್ನು ಕಟ್ಟಿದಾಗ ಮಾತ್ರ ಸಾಧ್ಯ.

ಮಹಿಳಾ ಸಂಘಟನೆಗಳು ನ್ಯಾಯಯುತವಾದ ಸಮಾಜಕ್ಕಾಗಿ ನಡೆಸುವ ಹೋರಾಟದ ಅಂಶಗಳನ್ನು ಹೊಂದಿರಬೇಕು.ಮಹಿಳೆಯರು ನಾಲ್ಕು ಗೋಡೆಗಳಿಂದ ಹೊರಗೆ ಬಂದು ವಿಶಾಲ ಪ್ರಪಂಚದ ಕಡೆಗೆ ತೆರೆದು ಕೊಳ್ಳುವಂತಹ ವೇದಿಕೆಗಳಾಗಬೇಕು. ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಿ, ಆಲೋಚನೆಯ ಮೂಲಕ ಪಡೆದಮನೋಬಲದೊಂದಿಗೆ ಮಹಿಳೆಯನ್ನು ಸಂಘಟನೆಗೆ ಸಜ್ಜುಗೊಳಿಸಬೇಕು.

ಒಟ್ಟಾರೆ ಹೇಳುವುದಾದರೆ ಮಹಿಳೆಯರ ಕನಿಷ್ಟ ಕೂಲಿ ಪ್ರಮಾಣ ಅಸಂಘಟಿತ ವಲಯದ ದುಡಿಮೆ ಹಾಗು ವಲಸೆಗಳಿಗೆ ಸಂಬಂಧವಿದೆ ಎನ್ನುವುದು ನಮ್ಮ ಅಧ್ಯಯನದ ಮೂಲಕ ಸ್ಪಷ್ಟವಾಗಿ ತಿಳಿಯಬಹುದು. ಹೆಚ್ಚಿನಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುವುದರಿಂದ ಅವರು ದುಡಿಯುವ ಸಮಯ ಹೆಚ್ಚಾಗಿದ್ದುಅವರು ಗಳಿಸುವ ಕೂಲಿಯ ಪ್ರಮಾಣ ಕಡಮೆಯಾಗಿದೆ. ಹಾಗು ವರ್ಷ ವಿಡೀ ವ್ಯವಸಾಯದಿಂದ ಬರುವ ಕೂಲಿಯಕೊರತೆ ಇರುವುದರಿಂದ ಮಹಿಳಾ ಕೃಷಿ ಕಾರ್ಮಿಕರು ವಲಸೆ ಹೋಗುವುದು ಅನಿವಾರ್ಯವಾಗಿದೆ.

೪.೪ ಅಧ್ಯಾಯದ ಪ್ರಮುಖ ಫಲಿತಗಳು:

೪.೪.೧ ಮಹಿಳೆಯರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅಂತರರಾಷ್ಟ್ರೀಯ ಹಾಗು ರಾಷ್ಟ್ರೀಯ ಮಟ್ಟದಲ್ಲಿ ನಡೆದಅಧ್ಯಯನಗಳು ಮಹಿಳಾ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ನಿಖರವಾದ ನಿಲುವುಗಳನ್ನು ನೀಡುತ್ತವೆ.ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರ ನಾಲ್ಕೈದು ದಶಕಗಳಿಂದ ಯೋಜನಾಧಾರಿತ ಅಭಿವೃದ್ಧಿ ಪ್ರಕ್ರಿಯಗಳನ್ನುಕೈಗೊಂಡಿದ್ದಾಗ್ಯೂ ಪುರುಷರಿಗೆ ದೊರಕುವಷ್ಟು ಅವಕಾಶಗಳು ಮಹಿಳೆಯರಿಗೆ ದೊರಕುವುದಿಲ್ಲ. ಅವರದುಡಿಮೆಯ ಹೊರೆ ಪುರುಷರ ದುಡಿಮೆಯ ಹೊರೆಗಿಂತ ಅಧಿಕವಾಗಿದ್ದಾಗ್ಯೂ, ಅವರ ಪರಿಶ್ರಮಕ್ಕೆ ತಕ್ಕಂತೆ ಕ್ರಯ ದೊರಕುತ್ತಿಲ್ಲ. ಲಿಂಗದೃಷ್ಟಿಯಿಂದ ನಾವಿನ್ನೂ ಅಸಮಾನತಾ ಪ್ರಪಂಚದಲ್ಲಿ ಬದುಕುತ್ತಿದೇವೆಂದು ಮಾನವ ಅಭಿವೃದ್ಧಿವರದಿ ೧೯೯೫ರ ಅಂಕಿ ಅಂಶಗಳ ಸಾಕ್ಷ್ಯಧಾರಗಳ ಮೂಲಕ ರುಜುಪಡಿಸುತ್ತಿದೆ. ಇಂತಹದೇ ಲಿಂಗಾಧಾರಿತ ಅಸಮಾನತೆಯ ಪರಿಸ್ಥಿತಿ ಹೈದ್ರಾಬಾದ್ -ಕರ್ನಾಟಕ ಪ್ರದೇಶದಲ್ಲಿನ ಬಳ್ಳಾರಿ ಜಿಲ್ಲೆಯ ಮತ್ತು ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರು ಎದುರಿಸುತ್ತಿದ್ದಾರೆ.

೪.೪.೨ ಅಧ್ಯಯನಕ್ಕೆ ಆರಿಸಿಕೊಂಡ ಮಾಹಿತಿದಾರರ ಪೈಕಿ ಬಹುತೇಕ ಜನರು (ಶೇ ೮೨ರಷ್ಟು) ತಮಗೆ ಬರುವಕೂಲಿಯಿಂದ ತಮ್ಮ ಕನಿಷ್ಟ ಆವಶ್ಯಕತೆಗಳನ್ನು ಒದಗಿಸಿಕೊಳ್ಳಲು ಸಾಧ್ಯವಾಗಿಲ್ಲವೆಂದು ತಿಳಿಸಿರುತ್ತಾರೆ. ಇದಕ್ಕೆಪ್ರಮುಖ ಕಾರಣ ಈ ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ಕೂಲಿಯ ಕಾನೂನಿನ ಪ್ರಕಾರ ಕನಿಷ್ಟ ಕೂಲಿ ಸಿಗದೇಇರುವುದು ನಮ್ಮ ಅಧ್ಯಯನದಿಂದ ತಿಳಿದು ಬರುತ್ತದೆ.

೪.೪.೩ ಮಹಿಳಾ ಕೃಷಿಕಾರ್ಮಿಕರು ದಿನಕ್ಕೆ ೮ ಗಂಟೆಗಳಿಂದ ೧೨ ಗಂಟೆಗಳಿಗೂ ಮೀರಿದುಡಿಯುತ್ತಿರುತ್ತಾರೆ. ನಮ್ಮ ಮಾಹಿತಿದಾರರಲ್ಲಿ ಶೇ ೫೬ರಷ್ಟು ಜನರು ದಿನಕ್ಕೆ ೧೦ ಗಂಟೆಗಳ ಕಾಲ ದುಡಿಯುವುದಾಗಿಯೂ, ಶೇ ೨೪ ರಷ್ಟು ಜನರು ದಿನಕ್ಕೆ ೧೨ ಗಂಟೆಗಳಿಗಿಂತ ಮೇಲ್ಪಟ್ಟು ದುಡಿಯುವುದಾಗಿಯೂ ಮತ್ತು ಉಳಿದ ಶೇ ೨೦ರಷ್ಟು ಜನರು ದಿನಕ್ಕೆ ೮ ಗಂಟೆಗಳ ಕಾಲ ದುಡಿಯುವುದಾಗಿಯೂ ತಿಳಿಸಿರುತ್ತಾರೆ. ಈ ಅಂಕಿ ಅಂಶಗಳಿಂದ ಮಹಿಳಾ ಕಾರ್ಮಿಕರು ಭೂಮಾಲಿಕರಿಂದ ಶೋಷಣೆಗೆ ಒಳಗಾಗಿದ್ದಾರೆಂದು ತಿಳಿದು ಬರುತ್ತದೆ.

೪.೪.೪ ಅಧ್ಯಯನದಿಂದ ಬಹುತೇಕ ಮಹಿಳಾ ಕೃಷಿ ಕಾರ್ಮಿಕರು (ಶೇ ೭೮) ತಮ್ಮ ಕೆಲಸಕ್ಕೆನುಗುಣವಾಗಿಕೂಲಿ ದೊರೆಯುವುದಿಲ್ಲವೆಂದು ತಿಳಿಸಿದರೆ, ಉಳಿದ ಶೇ ೨೨ ಜನರು ತಮ್ಮ ದುಡಿಮೆಗೆ ತಕ್ಕ ಕೂಲಿಯನ್ನು ಪಡೆಯುವರೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾಹಿತಿದಾರರ ಈ ಪ್ರತಿಕ್ರಿಯೆಗಳು ಕೂಡಾ ಮಹಿಳಾ ಶೋಷಣೆಯು ಪ್ರಚಲಿತದಲ್ಲಿರುವುದರ ಬಗ್ಗೆ ಬೆಂಬಲ ವ್ಯಕ್ತ ಪಡಿಸುತ್ತವೆ.

೪.೪.೫ ಕೂಲಿಯ ವಿಷಯದಲ್ಲಿ ,ಅಧ್ಯಯನ ಮಹಿಳಾ ಕಾರ್ಮಿಕರಿಗಾಗುತ್ತಿರುವ ಅನ್ಯಾಯವನ್ನು ಎತ್ತಿ ತೋರಿಸುತ್ತದೆ.ಮಹಿಳೆಯರಿಗೆ ಸಿಗುವ ದಿನಗೂಲಿ ಪುರುಷರಿಗೆ

ಸಿಗುವ ದಿನಗೂಲಿಗಿಂತ ಕಡಿಮೆ ಇರುತ್ತದೆ. ಈ ವಿಷಯದಲ್ಲಿ ಶೇ ೬೫ ಮಾಹಿತಿದಾರರು ತಮಗೆ ದುಡಿಮೆ ತಕ್ಕ ಕೂಲಿಯು ಪುರುಷರಿಗೆ ಸಿಗುವಷ್ಟು ಸಿಗುವುದಿಲ್ಲವೆಂದು ಹೇಳಿದರೆ, ಶೇ ೩೫ರಷ್ಟು ಮಾಹಿತಿದಾರರು ಪುರುಷರಿಗೆ ಸಮಾನವಾಗಿ ಕೂಲಿ ಸಿಗುತ್ತದೆಂದು ತಿಳಿಸಿರುತ್ತಾರೆ. ಈ ಫಲಿತವೂ ಸಹ ಮಹಿಳಾ ಕಾರ್ಮಿಕರ ಆರ್ಥಿಕ ಶೋಷಣೆ ಇರುವಿಕೆಗೆ ಬೆಂಬಲ ನೀಡುತ್ತದೆ.

೪.೪.೬ .ಮಹಿಳಾ ಕೃಷಿ ಕಾರ್ಮಿಕರು ಕೃಷಿ ಸಮಯದಲ್ಲಿ ನಿರತರಾಗಿ ಹಣದ ರೂಪದಲ್ಲಿ ದುಡಿಮೆಯನ್ನುಗಳಿಸಿದಾಗ್ಯೂ ಅದನ್ನು ಖರ್ಚು ಮಾಡುವ ಸ್ವಾಯತ್ತತೆ ಅವರಲ್ಲಿ ಇಲ್ಲದಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.ಮಾಹಿತಿದಾರರ ಪೈಕಿ ಅರ್ಧಕ್ಕೂ (ಶೇ ೫೪) ಹೆಚ್ಚು ಜನರು ತಮ್ಮ ಗಂಡದಿರು ತಮ್ಮ ಕೂಲಿಯನ್ನು ಖರ್ಚು ಮಾಡುವುದಾಗಿಯೂ, ಶೇ ೧೮ ಜನರು ತಮ್ಮ ಅತ್ತೆಯವರು ಖರ್ಚು ಮಾಡುವುದಾಗಿಯೂ ಶೇ೧೩ ರಷ್ಟು ತಮ್ಮ ತಂದೆಯವರು ಮಾಡುವವರೆಂದು, ಶೇ೧೨ ರಷ್ಟು ಜನರು ತಾಯಿಯವರು ಖರ್ಚು ಮಾಡುವವರೆಂದು ಮತ್ತು ಕೇವಲ ಶೇ೩ ರಷ್ಟು ಜನರು ತಾವೇ ಖರ್ಚು ಮಾಡುವುದಾಗಿ ತಿಳಿಸಿರುತ್ತಾರೆ. ಈ ಅಂಕಿಅಂಶಗಳು ಮಹಿಳೆಗೆ ತನ್ನ ದುಡಿಮೆಯ ಮೇಲೆ ತನ್ನ ಅಧಿಕಾರವಿಲ್ಲದಿರುವುದುನ್ನು ಸ್ಪಷ್ಟವಾಗಿ ತಿಳಿಸುತ್ತದೆ.

೪.೪.೭ ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರಲ್ಲಿ ವಲಸೆ ಹೋಗುವ ಪ್ರವೃತ್ತಿ ಕಂಡುಬರುವುದು ಸಾಮಾನ್ಯ ವಿಷಯ. ಮಾಹಿತಿದಾರರಲ್ಲಿ ಶೇ ೬೬ರಷ್ಟು ಜನರು ವಲಸೆ ಹೋಗುವವರೆಂದು ತಿಳಿಸಿರುತ್ತಾರೆ.ಅವರಲ್ಲಿಅರ್ಧಕ್ಕಿಂತಲೂ ಹೆಚ್ಚು ಜನರು ದುಡಿಯುವ ಅವಕಾಶಗಳ ಅಭಾವದಿಂದ ಖಾಯಂ ಆಗಿ ಉದ್ಯೋಗ ದೊರೆಯುವ ಪ್ರದೇಶಗಳಿಗೆ ವಲಸೆ ಹೋಗುವುದುಂಟು. ಅವರಲ್ಲಿ ಇನ್ನುಳಿದವರು ತಾತ್ಕಾಲಿಕವಾಗಿ ಪಕ್ಕದ ನಗರ ಪ್ರದೇಶಗಳಿಗೆವಲಸೆ ಹೋಗುವುದುಂಟು. ಉಳಿದ ಶೇ ೩೪ರಷ್ಟು ಜನರು ವಲಸೆ ಹೋಗುವುದಿಲ್ಲವೆಂದು ತಿಳಿಸಿರುತ್ತಾರೆ.

೪.೪.೮ ಭಾರತದಲ್ಲಿ ಎರಡು ಮೂರು ರಾಜ್ಯಗಳನ್ನು ಬಿಟ್ಟು (ಉದಾ: ಕೇರಳ ಮತ್ತು ಪಶ್ಚಿಮ ಬಂಗಾಳ) ಉಳಿದರಾಜ್ಯಗಳಲ್ಲಿ ಗ್ರಾಮೀಣ ಮಹಿಳೆಯರು, ಅದರಲ್ಲೂ ಮಹಿಳಾ ಕೃಷಿಕಾರ್ಮಿಕರು ಸಂಘಟಿತರಾಗಿರುವುದಿಲ್ಲ. ಈ ಪರಿಸ್ಥಿತಿ ಕರ್ನಾಟಕದ ಬಹುತೇಕ ಜಿಲ್ಲೆಗಳಿಗೂ ಮತ್ತು ಅಧ್ಯಯನ ಕ್ಷೇತ್ರವಾದ ಹರಪನಹಳ್ಳಿ ತಾಲ್ಲೂಕಿಗೂ ಅನ್ವಯವಾಗುತ್ತದೆ. ಮಾಹಿತಿದಾರರ ಪೈಕಿ ಶೇ ೯೫ ರಷ್ಟು ಜನರು ಸಂಘಟನೆಯ ಬಗ್ಗೆ ತಿಳಿವಳಿಕೆ ಇಲ್ಲದಿರುವುದನ್ನುವ್ಯಕ್ತಪಡಿಸಿದ್ದಾರೆ. ಇದರಿಂದ ಮಹಿಳೆಯರ ಶೋಷಣೆಗೆ ಒಂದು ಮುಖ್ಯ ಕಾರಣ ಅಸಂಘಟಿತರಾಗಿರುವರೆಂದು ಕಂಡುಬರುತ್ತದೆ.

೫.೧ ಅಧ್ಯಯನದ ಸಂಕ್ಷಿಪ್ತ ಸಾರಾಂಶ:

ಈ ಭಾಗದಲ್ಲಿ ನಮ್ಮ ಅಧ್ಯಯನದ ಒಟ್ಟು ಚಿತ್ರವನ್ನು ಸಂಕ್ಷಿಪ್ತ ಸಾರಾಂಶದ ರೂಪದಲ್ಲಿ ಮಂಡಿಸಲು ಪ್ರಯತ್ನಿಸಲಾಗಿದೆ.ಅಧ್ಯಯನದ ವಿಷಯ, ಅಧ್ಯಯನ ವಿಧಾನ, ಅಧ್ಯಯನದ ಉದ್ದೇಶಗಳು ಮುಂತಾದವುಗಳನ್ನು ಪುನರಪಿ ಮಂಡಿಸಲಾಗಿದೆ. ಅಧ್ಯಯನ ಕ್ಷೇತ್ರದ ಪಕ್ಷಿನೋಟವನ್ನು ಮಗದೊಮ್ಮೆ ಸೂಕ್ಷ್ಮವಾಗಿ· ವಿವರಿಸಲಾಗಿದೆ. ನಮ್ಮ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಮಾಹಿತಿದಾರ ಮಹಿಳೆಯರ ಸಮಾಜೋ -ಆರ್ಥಿಕ ಸ್ಥಿತಿ-ಗತಿಗಳು ಹಾಗೂ ಸಮಸ್ಯೆಗಳನ್ನೂ ವಿವರಿಸಲಾಗಿದೆ.

೫.೧.೧. ಅಧ್ಯಯನ ಕ್ಷೇತ್ರವಾದ ಹರಪನಹಳ್ಳಿ ತಾಲ್ಲೂಕಿನ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸ್ಥಾನಮಾನವನ್ನು ಗುರುತಿಸುವುದು ಅಧ್ಯಯನದ ಒಂದು ಮುಖ್ಯ ಉದ್ದೇಶವಾಗಿದೆ. ಮಹಿಳೆಯರ ಸಾಕ್ಷರತೆ, ಶಿಕ್ಷಣಮತ್ತು ಪ್ರಾಥಮಿಕ ಆರೋಗ್ಯ ಮುಂತಾದವು ಹಾಗು ಅವರ ಸ್ವಾತಂತ್ರ್ಯ, ಉತ್ಪಾದನ ಕ್ಷಮತೆ ಹಾಗೂ ಪ್ರಜನೋತ್ಪತ್ತಿ ವಿಷಯಗಳಲ್ಲಿ ಮಹಿಳೆಯರ ನಿರ್ಣಯ ತೆಗೆದುಕೊಳ್ಳುವಲ್ಲಿನ ಸ್ವಾಯತ್ತತೆ ಮುಂತಾದವು ಸಮಾಜದಲ್ಲಿ ಹಾಗೂ ಕುಟುಂಬಗಳಲ್ಲಿಅವರ ಸ್ಥಾನ ಮಾನವನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ ಎಂಬ ಸತ್ಯವನ್ನು ಅನೇಕ ಅಧ್ಯಯನಗಳು ಹೊರಗೆಡವಿವೆ. (ಜೀನ್ ಡ್ರೀಜೆ ಮತ್ತು ಅಮರ್ತ್ಯಸೇನ್ .೧೯೯೫) (ವಾಲೇಸ್ ೧೯೯೪). ಈ ಹಿನ್ನೆಲೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಆರ್ಥಿಕ-ಸಾಮಾಜಿಕ ಸ್ಥಾನ -ಮಾನವನ್ನು ಗುರುತಿಸಲು ನಮ್ಮ ಅಧ್ಯಯನದಲ್ಲೂ ಅಂತಹವೇಚಲಕಗಳನ್ನು ಬಳಸಿದ್ದೇವೆ. ಮಹಿಳಾ ಕೃಷಿ ಕಾರ್ಮಿಕರ ಸಂಘಟನೆಗಳು ಹಾಗೂ ಆ ಸಂಘಟನೆಗಳನ್ನು ಹತ್ತಿಕ್ಕಲು ನಡೆದಿರುವ ಪ್ರಯತ್ನವನ್ನೂ ಗುರುತಿಸಲು ಪ್ರಯತ್ನಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಕ್ಕಳು ಶಾಲೆಗಳನ್ನು ತ್ಯಜಿಸಿ ಅಪ್ರಾಪ್ತವಯಸ್ಸಿಗೆ ಕೃಷಿ ಕಾರ್ಮಿಕರಾಗುವ ದುರ್ದೆಸೆಗೆ ಕಾರಣಗಳನ್ನು ಕ್ಷೇತ್ರ ಕಾರ್ಯದಮೂಲಕ ಕಂಡು ಕೊಳ್ಳಲು ಪ್ರಯತ್ನಿಸಲಾಗಿದೆ.

೫.೧.೨. ಪ್ರಸ್ತುತ ಅಧ್ಯಯನವು ಅನುಷಂಗಿಕ ಹಾಗೂ ಪ್ರಾಥಮಿಕ ಮೂಲಗಳಿಂದ ಸಂಗ್ರಹಿಸಿದ ಅಂಕಿ-ಅಂಶಗಳನ್ನು ಆಧರಿಸಿದ ನಿದರ್ಶನಾತ್ಮಕ ಅಧ್ಯಯನವಾಗಿದೆ. ಅನುಷಂಗಿಕ ಮಾಹಿತಿಯನ್ನು ವಿಶ್ವಬ್ಯಾಂಕು, ಯು ಎನ್ ಡಿಪಿ, ಕೇಂದ್ರ ಸರ್ಕಾರ, ಕರ್ನಾಟಕ ಸರ್ಕಾರ, ಸ್ಯಾಂಖಿಕ ನಿರ್ದೇಶನಾಲಯ, ಮಹಾಪ್ರಬಂಧಗಳು ಹಾಗೂ ಸಂಪ್ರಬಂಧಗಳಿಂದಸಂಗ್ರಹಿಸಲಾಗಿದೆ. ನಮ್ಮ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮಾಹಿತಿದಾರ ಮಹಿಳೆಯರನ್ನೂ ಸಂದರ್ಶಿಸಿ ವಿಚಾರವಿನಿಮಯ ನಡೆಸಿ ಮಾಹಿತಿಯನ್ನು

ಅಧ್ಯಾಯ ೫

ಅಧ್ಯಯನದ ಸಂಕ್ಷಿಪ್ತ ಸಾರಾಂಶ, ಉಪಸಂಹಾರ ಮತ್ತು ಸಲಹೆಗಳು:

ಅಧ್ಯಯನದ ಶೀರ್ಷಿಕೆ ಸೂಚಿಸುವಂತೆ 'ಗ್ರಾಮೀಣ ಮಹಿಳಾ ಕೃಷಿ ಕಾರ್ಮಿಕರು' ಈ ಅಧ್ಯಯನದ ಕೇಂದ್ರಬಿಂದುವಾಗಿದ್ದಾರೆ. ಮಹಿಳಾ ಕೃಷಿ ಕಾರ್ಮಿಕರ ಸಮಾಜೋ-ಆರ್ಥಿಕ ಸ್ಥಿತಿಗತಿಗಳು ಹಾಗೂ ಸಮಸ್ಯೆಗಳ ಸುತ್ತ ಈ ಅಧ್ಯಯನ ಹೆಣೆಯಲ್ಪಟ್ಟಿದೆ. ಇದಲ್ಲದೆ ನಮ್ಮ ಅಧ್ಯಯನ ಕ್ಷೇತ್ರವಾದ ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರ ದೃಷ್ಟಿಯಿಂದ, ಅವರ ಸಮಸ್ಯೆಗಳ ತೀವ್ರತೆಯನ್ನು ಶಮನಗೊಳಿಸುವ ಮಾರ್ಗಗಳನ್ನು ಗುರುತಿಸುವಪ್ರಯತ್ನವೂ ಈ ಅಧ್ಯಯನದಲ್ಲಿ ನಡೆದಿದೆ. ಪ್ರಸ್ತಾವನೆ ರೂಪದಲ್ಲಿರುವ ಈ ಅಧ್ಯಯನದ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ವಿಷಯವನ್ನು ನಿರೂಪಿಸುವುದರ ಜೊತೆಗೆ ಅಧ್ಯಯನದ ಪ್ರಮುಖ ಉದ್ದೇಶ ಹಾಗೂ ಪೂರ್ವ ಕಲ್ಪನೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ಅಧ್ಯಯನದ ವಿಧಾನ, ವ್ಯಾಪ್ತಿ, ಮಹತ್ವ ಮತ್ತು ಅಧ್ಯಾಯಗಳ ವಿನ್ಯಾಸವನ್ನೂಮಂಡಿಸಲಾಗಿದೆ. ಅಂದರೆ ಅಧ್ಯಯನದ 'ಏನು','ಏಕೆ' ಮತ್ತು 'ಹೇಗೆ' ಗಳನ್ನು ಇಲ್ಲಿ ಚರ್ಚಿಸಲಾಗಿದೆ. ಈ ಉಪಸಂಹಾರೋಪಾದಿಯಲ್ಲಿರುವ ಪ್ರಸ್ತುತ ಕೊನೆಯ ಅಧ್ಯಾಯ ದಲ್ಲಿ ಪ್ರಸ್ತಾವನೆಯಲ್ಲಿ ಎತ್ತಿಕೊಂಡ ಪ್ರಶ್ನೆಗಳಿಗೆ ಉತ್ತರವೇನೂ ಎನ್ನುವ ಹಾಗೆ ಒಟ್ಟಾರೆ ಇಡೀ ಅಧ್ಯಯನದ ಸಂಕ್ಷಿಪ್ತ ಸಾರಾಂಶವನ್ನು ಮತ್ತು ಅಧ್ಯಯನದ ಪ್ರಮುಖ ಫಲಿತಗಳನ್ನು ಮಂಡಿಸುವುದರ ಜೊತೆಗೆ ಅಧ್ಯಯನದ ತಥ್ಯಗಳ ಆಧಾರದ ಮೇಲೆ ಮಹಿಳಾ ಕೃಷಿ ಕಾರ್ಮಿಕರ ಜೀವನಸ್ಥಿತಿಗತಿಗಳನ್ನು ಪರಿಹರಿಸಲು ಉಪಯುಕ್ತವಾಗಬಲ್ಲ ಸಲಹೆಗಳನ್ನು ಸೂಚಿಸುವ ಪ್ರಯತ್ನವನ್ನೂ ಮಾಡಲಾಗಿದೆ. ಪ್ರಸ್ತುತಕೊನೆಯ ಅಧ್ಯಾಯವನ್ನು ಮತ್ತು ಮೊದಲನೆಯ ಪ್ರಸ್ತಾವನೆಯ ರೂಪದಲ್ಲಿರುವ ಅಧ್ಯಾಯವನ್ನು ಸೂಕ್ಷ್ಮವಾಗಿ ಪರಾಮರ್ಶಿಸಿದರೆ ಸಂಶೋಧಕರಿಗೆ ಹಾಗೂ ಸೂಕ್ಷ್ಮಮತಿಗಳಿಗೆ ಇವೆರಡೂ ಅಧ್ಯಾಯಗಳ ನಡುವೆ ಏನು ನಡೆದಿದೆ ಎನ್ನುವುದು ವೇದ್ಯವಾಗಿ ಬಿಡುತ್ತದೆ. ಇಂಥಹ ಉದ್ದೇಶ ವಿರುವ ಪ್ರಸ್ತುತ ಅಧ್ಯಾಯದಲ್ಲಿ ಮೂರು ಮುಖ್ಯಭಾಗಗಳಿವೆ. ಈ ಅಧ್ಯಯನದ ಪ್ರಾರಂಭದ ನಾಲ್ಕು ಅಧ್ಯಾಯಗಳಲ್ಲಿ ನಡೆದ ಚರ್ಚೆಯ ಸಾರಾಂಶವನ್ನು ಮೊದಲನೆಯಭಾಗದಲ್ಲಿ ನೀಡಲಾಗಿದೆ. ಅಧ್ಯಯನದ ಪ್ರಮುಖ ಫಲಿತಗಳ ಸಮಗ್ರ ಚಿತ್ರವನ್ನು ಎರಡನೆಯ ಭಾಗದಲ್ಲಿ ಕೊಡಲಾಗಿದೆ. ಈ ಫಲಿತಗಳನ್ನು ಆಧಾರವಾಗಿಟ್ಟುಕೊಂಡು ಮೂರನೆಯ ಭಾಗದಲ್ಲಿ ಕೆಲವು ಸಲಹೆ- ಸೂಚನೆಗಳನ್ನು ಮಂಡಿಸಲಾಗಿದೆ.

ಕೂಡಿಸಲಾಗಿದೆ. ಆನುಷಂಗಿಕ ಮಾಹಿತಿಯನ್ನು ಜಾಗತಿಕ, ರಾಷ್ಟ್ರೀಯ, ರಾಜ್ಯ ಹಾಗೂ ಪ್ರಾದೇಶಿಕ ಮಟ್ಟದ ಪರಿಸ್ಥಿತಿಯನ್ನು ಅರಿತುಕೊಳ್ಳಲು ಬಳಸಲಾಗಿದೆ. ಪ್ರಾಥಮಿಕ ಮೂಲದಿಂದ ಸಂಗ್ರಹಿಸಿದಮಾಹಿತಿಯನ್ನು ನಮ್ಮ ಅಧ್ಯಯನದ ಕ್ಷೇತ್ರದಲ್ಲಿನ ವಸ್ತು ಪರಿಸ್ಥಿತಿಯ ರೋಗ ಲಕ್ಷಣಗಳನ್ನು ಗುರುತಿಸಲು ಉಪಯೋಗಿಸಲಾಗಿದೆ. ಈ ರೀತಿ ಪಡೆದುಕೊಂಡ ಮಾಹಿತಿಗೆ ಪರಿಮಾಣಾತ್ಮಕ ರೂಪವನ್ನು ನೀಡಲು ಸರಳ ಸಂಖ್ಯಾ ಶಾಸ್ತ್ರೀಯ ಸಾಧನಗಳನ್ನು ಬಳಸಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಇರುವ ಸಮಯ ಹಾಗೂ ಇನ್ನಿತರೆ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಹರಪನಹಳ್ಳಿಯ ೧೦೦ಕೃಷಿ ಕಾರ್ಮಿಕರ ಕುಟುಂಬಗಳ ೧೦೦ ಮಾಹಿಳಾಕೃಷಿ ಕಾರ್ಮಿಕರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ೧೦೦ ಮಹಿಳಾಕೃಷಿ ಕಾರ್ಮಿಕರ ಕುಟುಂಬಗಳು ಬಡತನದ ರೇಖೆಯಿಂದ ಕೆಳಗೆ ಜೀವನ ತೇಯುತ್ತಿರುವ ಕುಟುಂಬಗಳಾಗಿವೆ.೫.೧.೩ ಬಳ್ಳಾರಿ ಜಿಲ್ಲೆಯಲ್ಲಿ ಪಶ್ಚಿಮ ಭಾಗದಲ್ಲಿರುವ ತಾಲ್ಲೂಕು ಹರಪನಹಳ್ಳಿ. ಬಳ್ಳಾರಿ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ ೧೩ ರಷ್ಟು ಜನರು ಹರಪನಹಳ್ಳಿ ತಾಲ್ಲೂಕಿನಲ್ಲಿದ್ದಾರೆ. ಜಿಲ್ಲೆಯ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಹರಪನಹಳ್ಳಿಯಲ್ಲಿರುವ ಮಹಿಳೆಯರ ಸಂಖ್ಯೆ ೧,೧೪,೪೩೬ರಷ್ಟಿದು ಜಿಲ್ಲೆಯಲ್ಲಿನ ಮಹಿಳೆಯರ ಸಂಖ್ಯೆಗಳಿಗನುಗುಣವಾಗಿ ಎರಡನೆ ಸ್ಥಾನವನ್ನು ಹೊಂದಿದೆ.ಹರಪನಹಳ್ಳಿ ತಾಲ್ಲೂಕು ಪೂರ್ಣವಾಗಿ 'ಗ್ರಾಮೀಣ' ಪ್ರದೇಶವೆಂದು ಕರೆಯಲ್ಪಟ್ಟಿದೆ. ಈ ತಾಲ್ಲೂಕಿನಲ್ಲಿ ಕೃಷಿಯಲ್ಲಿ ದುಡಿಯುವಕಾರ್ಮಿಕರಲ್ಲಿ ಬಹುಪಾಲು ಭೂರಹಿತ ಕೃಷಿ ಕಾರ್ಮಿಕರಾಗಿದ್ದಾರೆ. ಇವರಲ್ಲಿ ಸಿಂಹಪಾಲು ದಲಿತರಾಗಿದ್ದಾರೆ. ಒಕ್ಕಲುತನದ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ ತಾಲ್ಲೂಕಿಗೆ ೪ನೇ ಸ್ಥಾನವಿದೆ. ಈ ತಾಲ್ಲೂಕಿನ ಕೃಷಿಚಟುವಟಿಕೆಗಳು ಮಹಿಳಾ ಕೃಷಿ ಕಾರ್ಮಿಕರನ್ನೇ ಅವಲಂಬಿಸಿವೆ. ಈ ತಾಲ್ಲೂಕಿನಲ್ಲಿ ಹಲವು ಶಿಕ್ಷಣ ಸಂಸ್ಥೆಗಳೂ ಹಾಗೂಆರೋಗ್ಯ ಕೇಂದ್ರಗಳು ಲಭ್ಯವಿದ್ದರೂ ಸಹ ಗ್ರಾಮೀಣ ಕೃಷಿ ಕಾರ್ಮಿಕ ಮಹಿಳೆಯರ ಬದುಕಿಗೆ ಆಸರೆಯಾಗಬಲ್ಲಅನುಕೂಲಗಳಿಲ್ಲ.

೫.೧.೪. ಅಧ್ಯಯನ ವಿಷಯದ ಗತಿಶೀಲತೆಯನ್ನು ಅದರ ವಿವಿಧ ಆಯಾಮಗಳನ್ನು ಗುರುತಿಸುವ ದೃಷ್ಟಿಯಿಂದಮಾಹಿತಿದಾರ ಮಹಿಳಾ ಕೃಷಿ ಕಾರ್ಮಿಕರನ್ನು ವಿವಿಧ ವಯೋಮಾನ ಗುಂಪುಗಳಿಂದ ವಿವಿಧ ಧರ್ಮ-ಜಾತಿಗಳಿಂದ,ವಿವಿಧ ವೃತ್ತಿ-ಆದಾಯ ವರ್ಗಗಳಿಂದ, ಆಸ್ತಿ-ಪಾಸ್ತಿ ಗುಂಪುಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

೫.೧.೫. ಈ ಅಧ್ಯಯನದ ಮೂರನೇ ಅಧ್ಯಾಯದಲ್ಲಿ ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸಾಕ್ಷರತೆ, ಶಿಕ್ಷಣದ

ಮತ್ತು ಆರೋಗ್ಯ ಸೌಲಭ್ಯಗಳನ್ನುಅನೇಕ ಸೂಚ್ಯಂಕಗಳ ಆಧಾರದ ಮೇಲೆ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಸಾಕ್ಷರತೆಗೆ ಸಂಬಂಧ ಪಟ್ಟ ವಿಚಾರವನ್ನು ಜಾಗತಿಕ ಮಟ್ಟದಿಂದ ನಮ್ಮ ಅಧ್ಯಯನ ಕ್ಷೇತ್ರದವರೆಗಿನ ಪರಿಸ್ಥಿತಿಯನ್ನು ಆನುಷಂಗಿಕ ಮಾಹಿತಿ ಆಧರಿಸಿ ವಿಶ್ಲೇಷಣೆ ನಡೆಸಲಾಗಿದೆ. ಜಾಗತಿಕ, ರಾಷ್ಟ್ರೀಯ, ರಾಜ್ಯ, ಹೈದರಾಬಾದ್ -ಕರ್ನಾಟಕ, ಬಳ್ಳಾರಿ ಜಿಲ್ಲೆಹಾಗೂ ಹರಪನಹಳ್ಳಿ ತಾಲ್ಲೂಕಿನ ಮಟ್ಟಗಳಲ್ಲಿನ ಸಾಪೇಕ್ಷ ಸಾಕ್ಷರತಾ ಪ್ರಮಾಣ, ಸ್ತ್ರೀ-ಪುರುಷರ ನಡುವಿನ ಸಾಕ್ಷರತೆ ಪ್ರಮಾಣದಲ್ಲಿನ ವ್ಯತ್ಯಾಸ, ೧೯೫೧ ರಿಂದ ೧೯೯೧ ರವರೆಗೆ ಸಾಕ್ಷರತೆಯಲ್ಲಾದ ಬೆಳವಣಿಗೆ ಗತಿ ಮುಂತಾದಗಳನ್ನು ಇಲ್ಲಿಚರ್ಚಿಸಲಾಗಿದೆ.

ಕರ್ನಾಟಕ ರಾಜ್ಯದ ಸಾಕ್ಷರತಾ ಪ್ರಮಾಣ ಭಾರತದ ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕ ವಿರುವುದು ಸ್ಪಷ್ಟವಿದೆ (೧೯೯೧). ಆದರೆ ಹೈದರಾಬಾದ್ -ಕರ್ನಾಟಕ ಪ್ರದೇಶದಲ್ಲಿನ ಸರಾಸರಿ ಸಾಕ್ಷರತಾ ಪ್ರಮಾಣವು ಅಖಿಲ ಬಾರತ ಸರಾಸರಿಗಿಂತ ಹಾಗೂಕರ್ನಾಟಕ ರಾಜ್ಯ ಮಟ್ಟದ ಸರಾಸರಿಗಿಂತ ಕಡಿಮೆ ಇದೆ. ಇವೆಲ್ಲವುಗಳಿಗಿಂತ ಹರಪನಹಳ್ಳಿ ತಾಲ್ಲೂಕಿನ ಸಾಕ್ಷರತಾಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ. ಪ್ರಸ್ತುತ ಅಧ್ಯಯನದ ಕೇಂದ್ರ ಬಿಂದುವಾದ ಮಹಿಳೆಯರ ಸಾಕ್ಷರತೆಯನ್ನು ಪರಿಭಾವಿಸಿದಾಗ, ಮೊದಲನೆದಾಗಿ ಮಹಿಳೆಯರ ಸಾಕ್ಷರತೆ ಪ್ರಮಾಣವು ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆ ಇದೆ.ಎರಡನೆದಾಗಿ ೧೯೫೧ ರಿಂದ ೧೯೯೧ ರ ಕಾಲಾವಧಿಯಲ್ಲಿ ಮಹಿಳೆಯರ ಸಾಕ್ಷರತೆಯ ಬೆಳವಣಿಗೆ ಗತಿಯು ಪುರುಷರ ಸಾಕ್ಷರತೆ ಬೆಳವಣಿಗೆ ಗತಿಗಿಂತ ಕೆಳಮಟ್ಟದಲ್ಲಿದೆ. ನಾವು ಪ್ರಾಥಮಿಕ ಮೂಲಗಳಿಂದ ಸಂಗ್ರಹಿಸಿದ ಸಾಕ್ಷರತೆ ಬಗೆಗಿನ ಮಾಹಿತಿಯು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಗಿಂತ ಗುಣಾತ್ಮಕವಾಗಿ ಭಿನ್ನವಾಗಿಲ್ಲ.ನಮ್ಮಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮಾಹಿತಿದಾರರಿಗೆ ಶಿಕ್ಷಣದ ಅವಶ್ಯಕತೆ, ಮಹತ್ವದ ಬಗ್ಗೆ ಹಾಗೂ ಸಾಕ್ಷರತೆ ಕೆಳಮಟ್ಟದಲ್ಲಿರುವುದರ ಬಗೆಗಿನ ಕಾರಣಗಳ ಬಗ್ಗೆ ಪೂರ್ಣ ಅರಿವಿರುವುದು ತಿಳಿದು ಬಂದಿದೆ. ರಾತ್ರಿ ಶಾಲೆ ಚಟುವಟಿಕೆಗಳ ಬಗ್ಗೆ ಭಿನ್ನಾಭಿಪ್ರಾಯವಿದೆ. ಮಾಹಿತಿದಾರರಲ್ಲಿ ಶೇ ೬೬ರಷ್ಟು ಮಹಿಳೆಯರು ರಾತ್ರಿ ಶಾಲೆಗಳಿಗೆ ಹಾಜರಾಗುತ್ತಿಲ್ಲ.

ಮಹಿಳಾ ಕೃಷಿ ಕಾರ್ಮಿಕರಿಗೆ ತಮ್ಮ ಮಕ್ಕಳನ್ನೂ ಶಾಲೆಗೆ ಕಳುಹಿಸಲು ತೀವ್ರ ಆಸಕ್ತಿಯಿದೆ. ಆದರೆ ಬಡತನದ ಒತ್ತಡದಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು ತಾಯಂದಿರಿಗೆ ಸಾಧ್ಯವಾಗುತ್ತಿಲ್ಲ ಎಂಬುದು ಮಾಹಿತಿದಾರರಿಂದ ತಿಳಿದುಬಂದಿದೆ.

೫.೧.೬. ಅಧ್ಯಯನ ಕ್ಷೇತ್ರದಲ್ಲಿರುವ ಮಹಿಳೆಯರು, ಅದರಲ್ಲೂ ಮಹಿಳಾ ಕೃಷಿ ಕಾರ್ಮಿಕರು ನಾನಾ ಕಾರಣಗಳಿಗಾಗಿ ಕನಿಷ್ಟ ಆರೋಗ್ಯ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಪ್ರಾಥಮಿಕ ಆರೋಗ್ಯಘಟಕಗಳು, ಆರೋಗ್ಯ ಉಪಕೇಂದ್ರಗಳು, ಅವುಗಳ ಸಂಖ್ಯೆ, ಜನಸಂಖ್ಯೆ ಮತ್ತು ಅವುಗಳ ನಡುವಿನ ಅನುಪಾತ, ಆರೋಗ್ಯ ಸೌಲಭ್ಯಗಳ ನೀಡಿಕೆ ಹಾಗೂ ಬೇಡಿಕೆಗಳನಡುವಿನ ಅಂತರ, ಮಾಹಿತದಾರ ಕುಟುಂಬಗಳಿಂದ ಆರೋಗ್ಯಸಂಸ್ಥೆಗಳು ಇರುವ ದೂರ ಮುಂತಾದ ಸೂಚ್ಯಂಕಗಳ ಆಧಾರದಿಂದ ಮಹಿಳೆಯ ಆರೋಗ್ಯದ ಸ್ಥಿತಿಯನ್ನು ಮತ್ತುಸಮಸ್ಯೆಗಳನ್ನೂ ಗುರುತಿಸಲು ಯತ್ನಿಸಲಾಗಿದೆ.

೫.೧.೭. ಈ ಅಧ್ಯಾಯದ (೫.೧.೬.)ಲ್ಲಿ ತಿಳಿಸಿರುವ ಸೂಚ್ಯಂಕಗಳನ್ನು ಆಧಾರವಾಗಿಟ್ಟುಕೊಂಡು ನೋಡಿದರೆ ರಾಜ್ಯಮಟ್ಟದಲ್ಲಿ, ಪ್ರಾದೇಶಿಕ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಆರೋಗ್ಯ ಸೌಲಭ್ಯಗಳ ಬೇಡಿಕೆಗಿಂತ ಅವುಗಳ ನೀಡಿಕೆ ಬಹಳಷ್ಟು ಕಡಿಮೆ ಇರುವುದು ತಿಳಿದುಬಂದಿದೆ. ಈ ಬೇಡಿಕೆ-ನೀಡಿಕೆಗಳ ನಡುವಿನ ಅಹಿತಕರ ಅಂತರ ನಮ್ಮ ಅಧ್ಯಯನ ಕ್ಷೇತ್ರದಲ್ಲಿ ದಟ್ಟವಾಗಿರುವುದೂ ಕಂಡು ಬಂದಿದೆ.

೫.೧.೮ ನಮ್ಮ ಪ್ರೌಢ ಅಧ್ಯಯನದ ನಾಲ್ಕನೇ ಅಧ್ಯಾಯದಲ್ಲಿ ಮಹಿಳಾ ಕೃಷಿ ಕಾರ್ಮಿಕರ ಆರ್ಥಿಕ ಸ್ಥಿತಿ-ಗತಿಗಳನ್ನುಗುರುತಿಸಲಾಗಿದೆ. ಆನುಷಂಗಿಕ ಮೂಲದಿಂದ ಕಲೆಹಾಕಿದ ಅಂಕಿ-ಅಂಶಗಳಿಂದ ಮತ್ತು ಸಮಗ್ರ ಮುಖಿ ವಿಶ್ಲೇಷಣೆಪ್ರಕಾರ ಹಾಗೂ ಪ್ರಾಥಮಿಕ ಮಾಹಿತಿಯ ಆಧಾರದಿಂದ ನಡೆಸಿದ ವಿಶ್ಲೇಷಣೆ ಪ್ರಕಾರ ಒಂದು ಪ್ರಮುಖ ಅಂಶ ಹೊರಬಿದ್ದಿದೆ. ಅಂತರಾಷ್ಟ್ರೀಯ ಮಟ್ಟದಿಂದ ಹರಪನಹಳ್ಳಿ ತಾಲ್ಲೂಕಿನ ಮಟ್ಟದವರೆಗೆ ಲಿಂಗ ಸಂಬಂಧಗಳ ಹಿನ್ನೆಲೆಯಲ್ಲಿ ಮಹಿಳೆಯರ ಆರ್ಥಿಕ ಪರಿಸ್ಥಿತಿಯನ್ನೂ ಪರಿಶೀಲಿಸಿದರೆ, ಎಲ್ಲಾ ಮಟ್ಟಗಳಲ್ಲಿಯೂ ಸ್ತ್ರೀಯರುಪುರುಷರಿಗಿಂತ ಹೆಚ್ಚು ಗಂಟೆಗಳ ಕಾಲ ದುಡಿಮೆ ಮಾಡಿ ಸಾಪೇಕ್ಷವಾಗಿ ಕಡಿಮೆ ಕೂಲಿ ಪಡೆಯುತ್ತಿರುವ ಅಂಶಗೋಚರಿಸುತ್ತದೆ.

೫.೧.೯ ನಮ್ಮ ಅಧ್ಯಯನದ ಮಾಹಿತಿದಾರ ಕುಟುಂಬಗಳಲ್ಲಿ ಮಹಿಳೆಯರು ದಿನವೊಂದಕ್ಕೆ ಕನಿಷ್ಟ ೮ ತಾಸುಗಳಿಂದ ೧೨ ತಾಸುಗಳವರೆಗೆ ದುಡಿಮೆಯಲ್ಲಿ ನಿರತರಾಗಿರುವುದು ಕಂಡುಬಂದಿದೆ. ಆದರೆ ಅವರಿಗೆ ಸಿಗುವಸಂಭಾವನೆ ಮಾತ್ರ ತುಂಬಾ ಕಡಿಮೆ. ಮಹಿಳೆಯರ ಕೂಲಿ ಹಾಗೂ ಅವರ ದುಡಿಮೆಗಳ ನಡುವೆ ಯಾವುದೇ ತುಲನೆಇಲ್ಲದಿರುವುದು ತಿಳಿದು ಬರುತ್ತದೆ. ಮಹಿಳಾ ಕೃಷಿ ಕಾರ್ಮಿಕರಿಗೆ ಸಿಗುವ ಕೂಲಿಯು ಅವರ ಕುಟುಂಬದ ಕನಿಷ್ಟಅವಶ್ಯಕತೆಗಳನ್ನು ಪೂರೈಸಲೂ ಸಾಕಾಗುವುದಿಲ್ಲ.

೫.೧.೧೦. ಹರಪನಹಳ್ಳಿ ತಾಲ್ಲೂಕಿನಲ್ಲಿ ಮಹಿಳಾ ಕೃಷಿ ಕಾರ್ಮಿಕರಿಗೆ ವರ್ಷವಿಡೀ ಪೂರ್ತಿ ಕೂಲಿ ಕೆಲಸ ದೊರೆಯುವುದಿಲ್ಲ. ಇದರಿಂದಾಗಿ ನಮ್ಮ ಮಾಹಿತಿದಾರರ ಕುಟುಂಬಗಳಲ್ಲಿ ಬಹಳಷ್ಟು ಮಹಿಳೆಯರು ವರ್ಷದಲ್ಲಿ ೩ತಿಂಗಳಿಂದ ೮ ತಿಂಗಳವರೆಗೆ ವಲಸೆ ಹೋಗುವ ಅಪಾಯ ಎದುರಿಸುತ್ತಿದ್ದಾರೆ.

೫.೨ ಅಧ್ಯಯನದ ಪ್ರಮುಖ ಫಲಿತಗಳು:

ಕೊನೆಯ' ಮತ್ತು ಐದನೆಯ ಅಧ್ಯಾಯದ ಈ ಭಾಗದಲ್ಲಿ ನಮ್ಮ ಅಧ್ಯಯನದ ಮೂಲ ಉದ್ದೇಶಗಳನ್ನು ಮತ್ತು ಪರಿಕಲ್ಪನೆಗಳನ್ನು ಕೇಂದ್ರವಾಗಿಟ್ಟುಕೊಂಡು ವಿಶ್ಲೇಷಣೆ ನಡೆಸಲಾಗುವುದು. ಸಾಮಾಜಿಕ ದೃಷ್ಟಿಯಿಂದ ಮಹಿಳೆಯರಶಿಕ್ಷಣದ ಬಗ್ಗೆ ಇರುವ ಹಾಗೂ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಇರುವ ಅಭಿಪ್ರಾಯ ಮತ್ತು ಧೋರಣೆಗಳನ್ನು ನಮ್ಮಮಾಹಿತದಾರರಾದ ೧೦೦ ಮಹಿಳೆಯರಿಂದ ಪಡೆಯಲಾಗಿದೆ. ಅದೇ ರೀತಿ ಅವರ ಆರ್ಥಿಕ ಸಮಸ್ಯೆಗಳನ್ನು ಗುರುತಿಸುವುದಕ್ಕಾಗಿ ಮಾಹಿತಿದಾರ ಮಹಿಳೆಯರ ದೈಹಿಕ ದುಡಿಮೆಯ ಕಾಲಾವಧಿ, ಕೆಲಸದಭಾರ ಕೂಲಿಯ ಪ್ರಮಾಣ ಮತ್ತು ವಲಸೆ ಪ್ರವೃತ್ತಿಗಳನ್ನು ಸೂಚ್ಯಂಕಗಳನ್ನಾಗಿ ಬಳಸಲಾಗಿದೆ. ಮಹಿಳಾ ಕೃಷಿಕಾರ್ಮಿಕರ ಸಾಮಾಜಿಕ-ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಲು ಪರಿಹಾರ ಕ್ರಮಗಳನ್ನು ಸಂಯೋಜಿಸಿ ಇಲ್ಲಿ ಮಂಡಿಸಲಾಗಿದೆ. ಪ್ರಾಸ್ತಾವಿಕವಾಗಿ ಮತ್ತು ಪ್ರಾಸಂಗಿಕವಾಗಿ ಲಭ್ಯವಿರುವ ಮಾಹಿತಿ ಹಾಗೂ ಅಂಕಿ-ಅಂಶಗಳ ಆಧಾರದ ಮೇಲೆ ರಾಷ್ಟ್ರಮಟ್ಟದ, ರಾಜ್ಯಮಟ್ಟದ, ಹೈದರಾಬಾದ್ -ಕರ್ನಾಟಕ ಪ್ರದೇಶ ಮಟ್ಟದ ಹಾಗೂ ಬಳ್ಳಾರಿ ಜಿಲ್ಲಾ ಮಟ್ಟದ ಮಹಿಳಾ ಕೃಷಿ-ಕಾರ್ಮಿಕರ ಪರಿಸ್ಥಿತಿಯನ್ನು ಹಿನ್ನಲೆಯನ್ನಾಗಿಟ್ಟು ಕೊಂಡು ನಮ್ಮ ಹರಪನಹಳ್ಳಿ ತಾಲ್ಲೂಕಿನ ಮಹಿಳಾ ಕೃಷಿ ಕಾರ್ಮಿಕರ ಪರಿಸ್ಥಿತಿಯನ್ನು ಪರಿಶೀಲಿಸಲು ಪ್ರಯತ್ನಿಸಲಾಗಿದ.

೫.೨.೧.ಸ್ವಾತಂತ್ರ್ಯೋತ್ತರ ಭಾರತದ ೧೯೫೧ ರಿಂದ ೧೯೯೧ರ ಕಾಲವಧಿಯಲ್ಲಿ ಸಾಕ್ಷರತಾ ಪ್ರಮಾಣವು ರಾಷ್ಟ್ರ, ರಾಜ್ಯ,ಹೈದ್ರಾಬಾದ್ ಕರ್ನಾಟಕ ಪ್ರದೇಶ, ಬಳ್ಳಾರಿ ಜಿಲ್ಲೆ ಹಾಗೂ ಹರಪನಹಳ್ಳಿ ತಾಲ್ಲೂಕು ಮಟ್ಟದಲ್ಲಿ ಏರಿಕೆಯಾಗಿರುವುದು ಶ್ಲಾಘನೀಯ ಸಾಧನೆಯಾಗಿದೆ. ಆದರೆ ನಮ್ಮ ದೇಶದ ಸಾಕ್ಸರತೆ ಪ್ರಮಾಣದ ಏರಿಕೆಯು ನಮ್ಮ ನೆರೆಯ ದೇಶಗಳಾದ ಶ್ರೀಲಂಕಾ ಮತ್ತು ಚೀನಾಗಳಿಗೆ ಹೋಲಿಸಿದರೆ ಹಾಗೂ ನೆರೆಯ ರಾಜ್ಯ ಕೇರಳದ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರೆ ನಿಕೃಷ್ಟವಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಇಷ್ಟಲ್ಲದೆ ಹರಪನಹಳ್ಳಿ ತಾಲ್ಲೂಕಿನ ಸಾಕ್ಸರತೆ ಪ್ರಮಾಣವು ಹೈದ್ರಬಾದ್-ಕರ್ನಾಟಕ ಪ್ರದೇಶದ ಹಾಗೂ ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣಕ್ಕಿಂತ ಮತ್ತು ಜಿಲ್ಲೆಯ ಸರಾಸರಿ ಸಾಕ್ಸರತೆ ಪ್ರಮಾಣಕ್ಕಿಂತ ಕೆಳಗಿರುವುದು ತಿಳಿದುಬಂದಿದೆ.

೫.೨.೨. ಅನಕ್ಷರಸ್ಥ ಗ್ರಾಮೀಣ ಮಹಿಳಾ ಕೃಷಿ ಕಾರ್ಮಿಕರಲ್ಲಿ ಶಿಕ್ಷಣದ ಉಪಯುಕ್ತತೆ ಹಾಗೂ ಅಗತ್ಯಗಳ ಬಗ್ಗೆಅರಿವಿರುವುದಿಲ್ಲ ಮತ್ತು ಶಿಕ್ಷಣದ ಬಗ್ಗೆ ತಿರಸ್ಕಾರ ಹಾಗೂ ಔದಾಸೀನ್ಯ ಮನೋಭಾವನೆ ಅವರಲ್ಲಿರುತ್ತದೆ, ಎಂದುಸಾಮಾನ್ಯವಾಗಿ ನಂಬಲಾಗಿದೆ. ಆದರೆ ಇಂತ ಅಭಿಪ್ರಾಯಕ್ಕೆ ನಮ್ಮ ಅಧ್ಯಯನದಲ್ಲಿ ಸಮರ್ಥನೆ ದೊರೆಯುವುದಿಲ್ಲ. ನಮ್ಮ ಮಾಹಿತಿದಾರರಾದ ೧೦೦ ಮಹಿಳೆಯರಲ್ಲಿ ಶೇ ೭೧ರಷ್ಟು ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆ ಬಗ್ಗೆ ತಿಳುವಳಿಕೆ ಇರುವುದು ತಿಳಿದುಬಂದಿದೆ. ಮಾಹಿತಿದಾರರಲ್ಲಿ ಕೆಲವರು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಶಿಕ್ಷಣ ಅಗತ್ಯವೆಂದು ಹೇಳಿದರೆ ಇನ್ನೂ ಕೆಲವು ಮಹಿಳೆಯರು ಕೃಷಿವಲಯದ ಹೊರಗೆ ಕೆಲಸ ಸಂಪಾದಿಸಿಕೊಳ್ಳಲು ಶಿಕ್ಷಣ ಅಗತ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೫.೨.೩. ನಮ್ಮ ಮಾಹಿತದಾರ ಮಹಿಳೆಯರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಮಹಿಳೆಯರು ರಾತ್ರಿ ಶಾಲೆಗಳು ನಡೆಯುತ್ತಿರುವುದುರ ಬಗ್ಗೆ ಹಾಗೂ ಅವು ಎದುರಿಸುತ್ತಿರುವ ಸಮಸ್ಯೆಗಳ ಬಗೆಗೂ ಮಾಹಿತಿ ನೀಡಿದ್ದಾರೆ. ತಮ್ಮ ಮಕ್ಕಳು ನಿಯಮಿತವಾಗಿ ಶಾಲೆಗೆ ಹೋಗಬೇಕು ಎಂಬುದು ಇವರ ಅಭಿಲಾಷೆ. ಆದರೆ ಬಡತನದ ಒತ್ತಡದಿಂದಾಗಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ.ಮಕ್ಕಳಿಗೆ ಶಾಲೆಗೆ ಹೋಗಲು ಮತ್ತು ಕಲಿಯಲು ಆಸಕ್ತಿಯಿಲ್ಲ.

೫.೨.೪. ಮಾನವ ಮುಖಿ ಅಭಿವೃದ್ಧಿಯಮೇಲೆ, ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸರ್ವತೋಮುಖ ಅಭಿವೃದ್ದಿಯ ಮೇಲೆ ನಿರ್ಣಯಾತ್ಮಕ ಪ್ರಭಾವ ಬೀರುವ ಇನ್ನೊಂದು ಬಹುಮುಖ್ಯ ಅಂಶವೆಂದರೆ ಆರೋಗ್ಯ ಸೌಲಭ್ಯಗಳು. ಈ ದಿಶೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹೈದ್ರಾಬಾದ್ - ಕರ್ನಾಟಕ ಪ್ರದೇಶ ಹಾಗೂ ಬಳ್ಳಾರಿ ಜಿಲ್ಲೆಗಳು ಬಹಳ ಹಿಂದುಳಿದಿವೆ. ಹರಪನಹಳ್ಳಿ ತಾಲ್ಲೂಕಿನ ಆರೋಗ್ಯ ಸೌಲಭ್ಯಗಳ ಪರಿಸ್ಥಿತಿಯು ಹೈದ್ರಾಬಾದ್-ಕರ್ನಾಟಕ ಪ್ರದೇಶ ಹಾಗೂ ಬಳ್ಳಾರಿ ಜಿಲ್ಲೆ ಮಟ್ಟದ ಸರಾಸರಿಗಿಂತ ಕೆಳಮಟ್ಟದಲ್ಲಿದೆ.

ಬಳ್ಳಾರಿ ಜಿಲ್ಲೆಯಲ್ಲಲಿ ಪ್ರತಿ ೨೩,೩೧೨ ಜನರಿಗೊಂದು ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಪ್ರತಿ ೪೫೬೫ ಜನರಿಗೊಂದು ಉಪಕೇಂದ್ರಗಳಿದ್ದರೆ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಸದರಿ ಅನುಪಾತ ಕ್ರಮವಾಗಿ ೨೩,೦೩೨ಮತ್ತು ೪೧೧೯. ಆದರೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಪ್ರತಿ ೨೪,೯೦೦ ಮಂದಿಗೆ ಒಂದು ಪ್ರಾಥಮಿಕ ಆರೋಗ್ಯಘಟಕ ಹಾಗೂ ಪ್ರತಿ ೩೪೪೨ ಮಂದಿಗೊಂದು ಉಪಕೇಂದ್ರವಿರುವುದು ಕಂಡುಬರುತ್ತದೆ. ಇದರಿಂದ ತಿಳಿದು ಬರುವಸಂಗತಿಯೆಂದರೆ ಹರಪನಹಳ್ಳಿ

ತಾಲ್ಲೂಕಿನ ಜನರು, ಅದರಲ್ಲೂ ಮುಖ್ಯವಾಗಿ ಮಹಿಳೆಯರು ಆರೋಗ್ಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

೫.೨.೫. ನಮ್ಮ ಮಾಹಿತಿದಾರ ಮಹಿಳೆಯರಲ್ಲಿ ... ಬಡತನದ ಕಾರಣದಿಂದ ಶಾ ಗು- ಸರ್ಕಾರಿ ದವಾಖಾನೆಗಳ ಕೊರತೆಯಿರುವುದರಿಂದ ಆರೋಗ್ಯ ಸೌಲಭ್ಯಗಳು ಅವರಿಗೆ ದೊರೆಯುತ್ತಿಲ್ಲ. ನಮ್ಮ ಮಾಹಿತಿದಾರರಲ್ಲಿ ಶೇ ೪೩ರಷ್ಟು ಮಹಿಳೆಯರು ಸರ್ಕಾರಿ ದವಾಖಾನೆಗಳಿಗೆ ವೈದ್ಯಕೀಯ ಸೇವೆಗಾಗಿ ಅವಲಂಬಿಸಿದ್ದಾರೆ. ಉಳಿದವರಲ್ಲಿ ಶೇ ೨೪ರಷ್ಟು ಖಾಸಗಿ ದವಾಖಾನೆಗಳಿಗೆ ಹೋಗುತ್ತಾರೆ. ಮತ್ತೆ ಕೆಲವರು ದೇವರನ್ನುಮೊರೆ ಹೋಗುವುದರ ಮೂಲಕ ರೋಗ ನಿವಾರಣೆ ಮಾಡಿಕೊಳ್ಳುತ್ತಾರೆ.

ಆತಂಕಾಕಾರಿ ಸಂಗತಿಯೆಂದರೆ ನಮ್ಮ ಮಾಹಿತಿದಾರರು ನೆಲೆಸಿರುವ ಸ್ಥಳದಿಂದ ಬಹಳ ದೂರ ಸರ್ಕಾರಿ ದವಾಖಾನೆಗಳುನೆಲೆಗೊಂಡಿವೆ. ಇದರಿಂದಾಗಿ ಅವುಗಳ ಉಪಯೋಗ ಪಡೆದುಕೊಳ್ಳುವುದು ಕಷ್ಟವಾಗಿದೆ. ವೈದ್ಯಕೀಯ ಸೇವೆಗಾಗಿಮಹಿಳೆಯರು ಒಂದು ಕಿಲೋಮೀಟರಿಗಿಂತ ಅಧಿಕ ದೂರ ಕ್ರಮಿಸಬೇಕಾಗುತ್ತದೆ. ಕೆಲವರು ೯ರಿಂದ ೧೦ಕಿ.ಮೀದೂರ ಕ್ರಮಿಸಬೇಕಾದ ಪರಿಸ್ಥಿತಿ ಇದೆ.

೫.೨.೬. ಮಾಹಿತಿದಾರ ಮಹಿಳೆಯರಲ್ಲಿ ಶೇ ೫೩ರಷ್ಟು ಮಹಿಳೆಯರು ಮಕ್ಕಳನ್ನು ಸರ್ಕಾರಿ ದವಾಖಾನೆಯಲ್ಲಿಹೆತ್ತಿರುವುದು ತಿಳಿದು ಬಂದಿದೆ. ಅಂದರೆ ಆರೋಗ್ಯ ಸೌಲಭ್ಯಗಳಿಗೆ ಹರಪನಹಳ್ಳಿ ತಾಲ್ಲೂಕಿನಲ್ಲಿ ತೀವ್ರ ಬೇಡಿಕೆ ಇದೆ.ಆದರೆ ಬೇಡಿಕೆಗೆ ಅನುಗುಣವಾಗಿ ಸೌಲಭ್ಯಗಳಿಲ್ಲ. ಇದೊಂದು ವಿಷಾದನೀಯ ಸಂಗತಿಯಾಗಿದೆ.

೫.೨.೭. ಮಹಿಳೆಯರ ದುಡಿಮೆಯ ಹೊರೆ ಹಾಗೂ ಅದಕ್ಕೆ ಅವರು ಪಡೆಯುತ್ತಿರುವ ಸಂಭಾವನೆ/ ಕೂಲಿಗಳ ನಡುವೆ ಯಾವುದೇ ತಾಳಮೇಳವಿಲ್ಲ. ಈ ದಿಶೆಯಲ್ಲಿ ಮಹಿಳೆಯರ ಶೋಷಣೆಯು ಜಾಗತಿಕ, ರಾಷ್ಟ್ರೀಯ, ರಾಜ್ಯ,ಪ್ರಾದೇಶಿಕ, ಜಿಲ್ಲಾ ಮತ್ತು ಹರಪನಹಳ್ಳಿತಾಲ್ಲೂಕಿನ ಮಟ್ಟದಲ್ಲಿ ಏಕರೂಪದಲ್ಲಿರುವುದು ಅಚ್ಚರಿ ಹುಟ್ಟಿಸಬೇಕಾಗಿಲ್ಲ.

ಮಹಿಳೆಯರ ಬಹಳಷ್ಟು ದುಡಿಮೆ ಕ್ರಯ ರಹಿತವಾಗಿದೆ. ಅವರ ದುಡಿಮೆಗೆ ಮಾರುಕಟ್ಟೆಯಿಲ್ಲ. ಅವರ ದುಡಿಮೆಯನ್ನು ಕೇವಲ ಪೂರಕ ದುಡಿಮೆಯೆಂದು ಪರಿಗಣಿಸಲಾಗಿದೆ. ಇದರಿಂದಾಗಿ ಅವರು ಆರ್ಥಿಕ ಮತ್ತು ಸಾಮಾಜಿಕವಾಗಿ ಅಧೀನ ಸ್ಥಿತಿಯಲ್ಲಿದ್ದಾರೆ. ಕೂಲಿಯಲ್ಲಿ ಸ್ತ್ರೀಯರು ಮತ್ತು

ಪುರುಷರ ಮಧ್ಯ ತೀವ್ರ ತಾರತಮ್ಯವಿರುವುದು ನಮ್ಮ ಅಧ್ಯಯನದಲ್ಲಿ ಕಂಡುಬಂದಿದೆ. ನಮ್ಮ ಮಾಹಿತಿದಾರರಲ್ಲಿ ಶೇ ೪೨ರಷ್ಟು ಮಹಿಳೆಯರು ತಮಗೆ ಬರುವ ಕೂಲಿಯಿಂದ ತಮ್ಮ ಕುಟುಂಬದ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವುದು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದ್ದಾರೆ. ಇಂತಹ ಶೋಷಣೆ-ತಾರತಮ್ಯದ ವಿರುದ್ಧ ಧ್ವನಿಯೆತ್ತಲು ಕೃಷಿ ಕಾರ್ಮಿಕರ ಸಂಘಟನೆಗಳು ಇಲ್ಲಿ ಅಸ್ತಿತ್ವದಲ್ಲಿಲ್ಲ.

೫.೨.೮. ಮಹಿಳಾ ಕೃಷಿ ಕಾರ್ಮಿಕರ ದುಡಿಮೆಯ ಕಾಲಾವಧಿಯ ಬಗ್ಗೆ ಪ್ರತ್ಯೇಕವಾಗಿ ಪ್ರಸ್ತಾಪಿಸುವ ಅವಶ್ಯಕತೆಇದೆ. ಕೈಗಾರಿಕಾ ವಲಯದಲ್ಲಿ ಒಂದು 'ಮಾನವ ದಿನ' ವೆಂದರೆ ಕಾನೂನು ಪ್ರಕಾರ ೮ ಗಂಟೆಗಳ ದುಡಿಮೆ. ನಮ್ಮಅದ್ಯಯನದ ಕ್ಷೇತ್ರದಲ್ಲಿ ಮಹಿಳೆಯರ ದಿನವೊಂದರಲ್ಲಿ ದುಡಿಮೆಯ ಕಾಲಾವದಿ ೮ ಗಂಟೆಯಿಂದ ೧೨ಗಂಟೆಯವರಗೂಸಾಗುವ ಪರಿಸ್ಥಿತಿ ಇದೆ. ನಮ್ಮ ಮಾಹಿತಿದಾರರ ಪೈಕಿ ಶೇ ೫೬ರಷ್ಟು ಮಹಿಳೆಯರು ದಿನಕ್ಕೆ ಹತ್ತು ಗಂಟೆಗಳ ಕಾಲಕೆಲಸ ಮಾಡುತ್ತೇವೆಂದು, ಶೇ ೨೪ರಷ್ಟು ಮಹಿಳೆಯರು ೧೨ ಗಂಟೆಗಳ ಕಾಲ ಕೆಲಸ ಮಾಡುತ್ತೀವೆಂದು ಮತ್ತು ಇನ್ನುಳಿದ ಶೇ ೨೦ ರಷ್ಟು ಮಹಿಳೆಯರು ೮ ಗಂಟೆಗಳ ಕಾಲ ದುಡಿಯುತ್ತೇವೆಂದು ಹೇಳಿದ್ದಾರೆ. ತಮ್ಮ ಕೆಲಸಕ್ಕೆಸರಿ ಸಮವಾಗಿ ಕೂಲಿ ದೊರೆಯುವುದಿಲ್ಲವೆಂದು ತಮ್ಮ ಅಳಲನ್ನು ಹೇಳಿಕೊಂಡಿದ್ದಾರೆ. ಇಲ್ಲಿ ಲಿಂಗ ತಾರತಮ್ಯತೀಪ್ರವಾಗಿದೆ.

೫.೨.೯. ನಮ್ಮ ಅಧ್ಯಯನದಿಂದ ಹೊರಬಂದ ಒಂದು ಬಹುಮುಖ್ಯ ತಥ್ಯವೆಂದರೆ ಕುಟುಂಬದ ವರಮಾನಕ್ಕೆಮಹಿಳೆಯರ ಕಾಣಿಕೆ ಅಪಾರವಾಗಿದ್ದರೂ ಅದನ್ನು ಖರ್ಚು ಮಾಡುವ ಅಧೀಕಾರ ಅವರಿಗಿಲ್ಲ ಎಂಬುದಾಗಿದೆ. ನಮ್ಮಮಾಹಿತಿದಾರರಲ್ಲಿ ಕೇವಲ ಶೇ ೩ ರಷ್ಟು ಮಹಿಳೆಯರು ಮಾತ್ರ ತಮ್ಮ ಕೂಲಿಯಿಂದ ಬಂದ ವರಮಾನವನ್ನುತಾವೇ ವ್ಯಯಿಸುತ್ತರುವುದಾಗಿ ತಿಳಿಸಿದ್ದಾರೆ. ಉಳಿದ ಎಲ್ಲಾ ಮಾಹಿತಿದಾರ ಮಾಹಿಳೆಯರು ತಾವು ದುಡಿದು ತಂದ ಹಣವನ್ನು ಗಂಡನಿಗೂ, ಮಾವನಿಗೂ, ಅತ್ತೆಗೂ ಸಂದಾಯ ಮಾಡುವುದಾಗಿ ತಿಳಿಸಿದ್ಧಾರೆ.

೫.೨.೧೦. ನಮ್ಮ ಅಧ್ಯಯನ ಕ್ಷೇತ್ರವಾದ ಹರಪನಹಳ್ಳಿ ತಾಲ್ಲೂಕಿನಲ್ಲಿನ ಮಹಿಳೆಯರು ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿದ್ದಾರೆ, ತಾಲ್ಲೂಕಿನಲ್ಲಿ ದುಡಿಮೆಗೆ ಅವಕಾಶಗಳಿಲ್ಲದಿರುವುದರಿಂದ ನಾವು ವಲಸೆ ಹೋಗುತ್ತಿರುವುದಾಗಿಶೇ ೬೬ ರಷ್ಟು ಮಹಿಳೆಯರು ತಿಳಿಸಿದ್ದಾರೆ. ಇನ್ನೂ ಕೆಲವರು ತಾತ್ಕಾಲಿಕವಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದಾಗಿ ತಿಳಿಸಿದ್ದಾರೆ. ವಲಸೆಯು ಅವಧಿ ವರ್ಷದಲ್ಲಿ ೩ ತಿಂಗಳಿಂದ ೬ ತಿಂಗಳವರೆಗೆ ಇರುತ್ತದೆ. ಮಾಹಿತಿದಾರರಲ್ಲಿ ಶೇ ೩೭ರಷ್ಟು ಜನರು

೩ ರಿಂದ ೫ ತಿಂಗಳು ಮತ್ತು ಶೇ ೨೯ ರಷ್ಟು ಮಹಿಳೆಯರು ೬ ರಿಂದಲ ತಿಂಗಳು ವಲಸೆ ಹೋಗುವುದಾಗಿ ತಿಳಿಸಿದ್ದಾರೆ.

೫.೩. ಸಲಹೆ ಸೂಚನೆಗಳು:

ಈ ಭಾಗದಲ್ಲಿ ಅಧ್ಯಯನದ ಸಮಸ್ಯೆ ಮತ್ತು ಉದ್ದೇಶಗಳ ಹಿನ್ನೆಲೆಯಲ್ಲಿ, ಮಹಿಳಾ ಕೃಷಿ ಕಾರ್ಮಿಕರ 'ಸಾಮಾಜಿಕ-ಆರ್ಥಿಕ ಗುಣಮಟ್ಟವನ್ನು ಸುಧಾರಿಸಲು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು, ಅದರಲ್ಲೂ ಪ್ರತ್ಯೇಕವಾಗಿ ಪಂಚಾಯತ್ ರಾಜ್ಯ ಸಂಸ್ಥೆಗಳು ರೂಪಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಹಾಗೂ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ತರಬಹುದಾದ ಬದಲಾವಣೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇಲ್ಲಿ ಅಧ್ಯಯನ ಕ್ಷೇತ್ರದ ಆಂತ್ಡು ಮಾಹಿತಿದಾರರ ಸಮಸ್ಯೆಗಳನ್ನು ಕೇಂದ್ರವಾಗಿಟ್ಟು ಕೊಂಡು ಸಲಹೆ-ಸೂಚನೆಗಳನ್ನು ನೀಡಲಾಗಿದೆ. ನೀಡಿರುವ ಎಲ್ಲಾ ಸಲಹೆಗಳು ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಗೆ ಸಂಬಂಧ ಪಟ್ಟಿರುತ್ತವೆ.

೫.೩.೧. ಗ್ರಾಮೀಣ ಪ್ರದೇಶದ ಮಹಿಳಾ ಅಭಿವೃದ್ಧಿ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರುವಲ್ಲಿಮಹಿಳಾ ಸಾಕ್ಷರತೆಗೆ ಆದ್ಯತೆಯನ್ನು ನೀಡುವ ಅವಶ್ಯಕತೆ ಇದೆ. ಈ ಆದ್ಯತೆ ಮಹಿಳಾ ಸಾಕ್ಷರತೆಗೂ ಮತ್ತು ಅವರ ಪ್ರಜನೊತ್ಪತ್ತಿ ನಿರ್ಣಯಗಳಿಗೂ, ಅವರು ಅನುಭವಿಸುವ ಸ್ವಾಯತ್ತತೆಗಳಿಗೂ, ಧಾರಣ ಶಕ್ತಿಗೂ, ಸಶಕ್ತೀಕರಣಕ್ಕೂ, ನಿಕಟ ಸಂಬಂಧ ವಿರುವುದರಿಂದ ನೀಡಬೇಕಾಗಿರುತ್ತದೆ. ಈ ದಿಶೆಯಲ್ಲಿ ಅಮರ್ತ್ಯಸೇನ್ ರ ಅಧ್ಯಯನಗಳು ಮತ್ತು ಜೀನ್ ಡ್ರಿಜ್ ರ ಅಧ್ಯಯನಗಳು (ಸೇನ್,೧೯೯೪), (ಸೇನ್, ೧೯೯೫) (ಡ್ರಿಜ್ ಮತ್ತು ಸೇನ್ ೧೯೯೫) ಸ್ಪಷ್ಟವಾದ ಪುರಾವೆಗಳನ್ನು ನೀಡುತ್ತವೆ. ಪಂಚಾಯಿತ್ ರಾಜ್ ಸಂಸ್ಥೆಗಳ ಆಯ್ಯ-ವ್ಯಯ ಪಟ್ಟಿಯಲ್ಲಿ ಈ ಆದ್ಯತೆಗಳು ಪ್ರತಿಬಿಂಬಿಸಬೇಕು.

೫.೩.೨. ಇದೇ ವಿಷಯಕ್ಕೆ ಸಂಬಂಧ ಪಟ್ಟಂತೆ ರಾತ್ರಿ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲೂ ಹರಪನಹಳ್ಳಿ ಯಂತಹ ಮಹಿಳಾ ಸಾಕ್ಷರತೆಯಲ್ಲಿ ಬಹಳ ಹಿಂದುಳಿದಿರುವ ತಾಲ್ಲೂಕುಗಳಲ್ಲಿ ಸಕ್ರೀಯವಾಗಿ ಕಾರ್ಯ ನಿರ್ವಹಿಸುವಂತೆತುರ್ತು ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಅದೇ ರೀತಿ ಮಕ್ಕಳ ಶಿಕ್ಷಣದ ಬಗ್ಗೆ ಅಧ್ಯತೆಯನ್ನು ನೀಡುವ ಅವಶ್ಯಕತೆಯು ಇರುತ್ತದೆ. ಅಧ್ಯಯನದ ಫಲಿತಗಳನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಮಹಿಳಾ ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಒಂದು ಕ್ರಮವಾದರೆ, ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಮತ್ತು

ಅನಿವಾರ್ಯತೆಗಳ ಬಗ್ಗೆ ನಂಬಿಕೆ ಮೂಡಿಸುವ ಸೂಕ್ತ ಕ್ರಮಗಳನ್ನು ಆದ್ಯತೆಯ ಮೇರೆಗೆ ತೆಗೆದುಕೊಳ್ಳಬೇಕು.

೫.೩.೩. ಸಾಕ್ಷರತೆ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟ ನೀತಿ ರೂಪಿಸುವವರಿಗೆ ಅಮರ್ತ್ಯಸೇನರು ಪದೇ ಪದೇ ಹೇಳುವಮಾನವ ಅಭಿವೃದ್ಧಿ ಪರಿಧಿಯಲ್ಲಿ (ಅಮರ್ತ್ಯಸೇನ್, ೧೯೯೨) ಸಾಕ್ಷರತೆ - ಶಿಕ್ಷಣಗಳ ನಿರ್ಣಯಾತ್ಮಕ ದ್ವಿಪಾತ್ರಗಳಾದ ಉಪಕರಣವಾದಿ (instrumental) ಪಾತ್ರ ಮತ್ತು ಅಂತಸ್ತವಾದ (intrinsic) ಪಾತ್ರಗಳನ್ನು ತಪ್ಪದೇ ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ. ಇತ್ತೀಚಿನವರಿಗೂ ಶಿಕ್ಷಣಕ್ಕೆ ಕೇವಲ ಉಪಕರಣವಾದಿ ಪಾತ್ರವಿರುವುದನ್ನು ಗುರುತಿಸುತ್ತಿದ್ದರು. ಈ ವಿಶಾಲವಾದ ಶಿಕ್ಷಣದದ್ವಿಮುಖ ಪಾತ್ರಗಳಿಗೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಕುರುಡಾಗಿರಬಾರದು.

೫.೩.೪. ಮಾನವಾಭಿವೃದ್ಧಿ ಮತ್ತು ಪ್ರತ್ಯೇಕವಾಗಿ ಮಹಿಳಾ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಸಾಕ್ಷರತೆ-ಶಿಕ್ಷಣಗಳಷ್ಟೇ ಪ್ರಮುಖವಾದ ಇನ್ನೊಂದು ಅಂಶ ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯವಿರುವ ಆರೋಗ್ಯ ಸೌಲಭ್ಯಗಳು. ಅಧ್ಯಯನ ಕ್ಷೇತ್ರದಲ್ಲಿ ಸರ್ಕಾರ ಒದಗಿಸುವ ಆರೋಗ್ಯ ಸೌಲಬ್ಯಗಳು ಸ್ಥಳೀಯ ಬೇಡಿಕೆಗಿಂತ ಬಹಳ ಕಡಿಮೆ ಇರುವುದು ಕಂಡುಬರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಮಹಿಳಾ ಕೃಷಿ ಕಾರ್ಮಿಕ ಕುಟುಂಬಗಳು ಹಣಕೊಟ್ಟು ಚಿಕಿತ್ಸೆ ಪಡೆಯುವ ಶಕ್ತಿಯನ್ನು ಹೊಂದಿರುವುದಿಲ್ಲ. ಮಹಿಳೆಯರ ಅನಾರೋಗ್ಯ ಅದರಲ್ಲೂ ಅನಿಮಿಯಾದಂತಹ ಕಾಯಿಲೆ ತಾಯಂದಿರ ಮರಣ ಪ್ರಮಾಣದ ಮೇಲೂ, ಶಿಶು ಮರಣದ ಪ್ರಮಾಣದ ಮೇಲೂ ಮತ್ತು ಮಕ್ಕಳ ಮರಣದ ಪ್ರಮಾಣದ ಮೇಲೂ, ಹಾಗೆಯೇ ಇವುಗಳ ಮೂಲಕ ಜನರ ದುಡಿಯುವ ಸಾಮರ್ಥ್ಯಯದ ಮೇಲೆ ದುಷ್ಪರಿಣಾಮ ಬೀರುವ ವಿಷಯವನ್ನು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಗಣನೆಗೆ ತೆಗೆದುಕೊಳ್ಳಬೇಕು. ಈ ದಿಸೆಯಲ್ಲಿ ಆರೋಗ್ಯ ಸೌಲಭ್ಯಗಳನ್ನು ಸ್ಥಳೀಯ ಬೇಡಿಕೆಗಳಿಗನುಗುಣವಾಗಿ ಹೆಚ್ಚಿಸಲು ಬೇಕಾಗುವ ವೆಚ್ಚವನ್ನು ಆಯ್ಯ-ವ್ಯಯ ಪಟ್ಟಿಯಲ್ಲಿ ಒದಗಿಸಬೇಕು.

೫.೩.೫. ಪ್ರಸ್ತುತ ಅಧ್ಯಯನ ಗ್ರಾಮೀಣ ಮಹಿಳೆಯರ ನಿಕೃಷ್ಟೀಕರಣವನ್ನು ಹಾಗೂ ಶೋಷಣೆಯನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ. ಮಹಿಳಾ ಕೃಷಿ ಕಾರ್ಮಿಕರು ದುಡಿಯುವ ಕಾಲಾವಧಿ ಹೆಚ್ಚು, ಪಡೆಯುವ ಕೂಲಿ ಕಡಿಮೆ. ಈ ಆರ್ಥಿಕ ಅನ್ಯಾಯ ಕೇವಲ ಮಹಿಳೆಯರ ಶೋಷಣೆಗೆ ಮಾತ್ರ ಸೀಮಿತವಾಗದೆ ಅಹಿತಕರವಾದ ಲಿಂಗ ಸಂಬಂಧಿ ಅಸಮಾನತೆಗೆ ಪೂರಕವಾಗುತ್ತದೆ. ಈ ದಿಸೆಯಲ್ಲಿ ಮಹಿಳೆಯರನ್ನು ಶೋಷಣೆಯಿಂದ ಮುಕ್ತರನ್ನಾಗಿಸಲು ದಿನವೊಂದಕ್ಕೆ ಗರಿಷ್ಟ ಕಾಲಾವಧಿಯ ಕೆಲಸವನ್ನು ಹಾಗು ದಿನಕ್ಕೊಂದು ಕನಿಷ್ಟ ಕೂಲಿಯನ್ನು ನಿಗಧಿ ಪಡಿಸುವ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಗೆ ತರುವ

ಪ್ರಯತ್ನ ಆದ್ಯತೆಯ ಮೇರೆಗೆ ನಡೆಯ ಬೇಕಾಗಿದೆ. ಈ ವಿಷಯದಲ್ಲಿ ಪಂಚಾಯತ್ ರಾಜ್ಯ ಸಂಸ್ಥೆಗಳ ಕಾರ್ಯಕರ್ತರು ಜವಾಬ್ದಾರಿ ವಹಿಸುಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ತಮ್ಮ ಆರ್ಥಿಕ ಹಕ್ಕುಗಳನ್ನು ಪಡೆಯುವುದುಕೋಸ್ಕರ ಮಹಿಳೆಯರು ಸಂಘಟನೆಗಳನ್ನು ಕಟ್ಟಿಕೊಳ್ಳಬೇಕಾಗುತ್ತದೆ.

೫.೩.೬. ಸರ್ಕಾರೇತರ ಸ್ವಯಂ ಸೇವ ಸಂಸ್ಥೆಗಳು ನಿರ್ಣಾಯಕ ಪಾತ್ರವಹಿಸುವ ಕ್ಷೇತ್ರವೆಂದರೆ ಗ್ರಾಮೀಣ ಮಹಿಳೆಯರಲ್ಲಿಸ್ವಾಯತ್ತತೆಯ ಪ್ರಜ್ಞೆಯನ್ನು ಮೂಡಿಸುವುದು ಮತ್ತು ಅವರು ಅಪ್ರಜ್ಞಾಪೂರಕವಾಗಿ ಅಂತರ್ಗತ ಮಾಡಿಕೊಂಡಿರುವ ಕೀಳಿರಿಮೆಯ ಮೌಲ್ಯಗಳನ್ನು ಬಹಿರಂಗ ಪಡಿಸುವ ಪ್ರಕ್ರಿಯನ್ನು ಹುಟ್ಟು ಹಾಕುವುದು. ಅಧ್ಯಯನ ಕ್ಷೇತ್ರದ ಬಹುತೇಕ ಮಾಹಿತಿದಾರರು ತಾವು ಕಷ್ಟ ಪಟ್ಟು ದುಡಿದು ತಂದ ಕೂಲಿಯನ್ನು ಖರ್ಚುಮಾಡುವಸ್ವಾತಂತ್ರ್ಯ ತಮಗೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಲಿಂಗ ಸಮಾನತೆಯನ್ನು ಅಸ್ತಿತ್ವಕ್ಕೆ ತರುವ ಪ್ರಕ್ರಿಯೆ ಪ್ರಾರಂಭಿಸುವ ಅವಶ್ಯಕತ್ಗೆ ಈ ಕಾರ್ಯದಲ್ಲಿ ಗ್ರಾಮ ಮಟ್ಟದಲ್ಲಿರುವ ಮಹಿಳಾ ಮಂಡಳಗಳು ಸಕ್ರೀಯವಾಗಿ ಭಾಗವಹಿಸಬೇಕಾಗುತ್ತದೆ.

೫.೩.೭. ಮಹಿಳಾ ಕೃಷಿಕಾರ್ಮಿಕರು ವಲಸೆ ಹೋಗುವ ಪ್ರವೃತ್ತಿ, ತಾವಿರುವ ಪ್ರದೇಶಗಳಲ್ಲಿ ದುಡಿಮೆಯ ಅವಕಾಶಗಳ ಅಭಾವದಿಂದ ಉಂಟಾಗುವುದೆಂದು ಅಧ್ಯಯನ ತಿಳಿಸುತ್ತದೆ. ಅಂದರೆ ಗ್ರಾಮೀಣ ಮಟ್ಟದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಉದ್ಯೋಗ ಸೃಷ್ಟಿಸುವ ರಾಜ್ಯ ಸರ್ಕಾರದ ಕಾರ್ಯಕ್ರಮಗಳಾಗಲಿ, ಕೇಂದ್ರ ಸರ್ಕಾರದ ಉದ್ಯೋಗ ಅವಕಾಶಗಳ ಅಭಾವವನ್ನು ನೀಗಿಸುವ ಸ್ಥಿತಿಯಲಿಲ್ಲವೆನ್ನವುದು ಸ್ಪಷ್ಟ. ಆದಕಾರಣ ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳು ಈ ಸಮಸ್ಯೆಯ ಬಗ್ಗೆ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅವಶ್ಯಕತೆ ಇರುತ್ತದೆ. ಗ್ರಾಮೀಣಮಹಿಳೆಯರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕಾದರೆ, ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳ ಬಗ್ಗೆ ಔದಾಸೀನ್ಯವನ್ನು ತಳೆಯಬಾರದು.

೫.೩.೮. ಒಟ್ಟಾರೆ ಹೇಳುವುದಾದರೆ ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ-ಆರ್ಥಿಕ ಗುಣಮಟ್ಟವನ್ನು ಹಾಗು ಅವರಲ್ಲಿ ಧಾರಣ ಶಕ್ತಿಯನ್ನು ಹೆಚ್ಚಿಸಬೇಕಾದರೆ ಮತ್ತು ಅವರನ್ನು ಸಶಕ್ತರನ್ನಾಗಿಸಬೇಕಾದರೆ ಇಲ್ಲಿಯವರೆಗೂ ಸೂಚಿಸಿರುವ ಕ್ರಮಗಳನ್ನು ಬಿಡಿಬಿಡಿಯಾಗಿ ತೆಗೆದುಕೊಳ್ಳದೆ ಸಮನ್ವಯಗೊಳಿಸಿ ಅನುಷ್ಠಾನ ಮಾಡಬೇಕಾಗುತ್ತದೆ. ಏಕಕಾಲದಲ್ಲಿ ಸಾಕ್ಷರತೆ-ಶಿಕ್ಷಣಗಳನ್ನು ಮತ್ತು ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸುವುದರಿಂದ ಈಗಾಗಲೇ ಹೇಳಿರುವಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುವುದು.

Notes

1. Sen, Amartya.(1994)***"Beyond Liberalization: Social Opportunity and Human Capablity"***, (D.T.Lakdawala Memorial Lecture), Institute of Social sciences, New Delhi.

2 ----------------(1995) ***"Population Policy Authoritarianism versus Co-operation"*** Mac Arthur Foundation, New Delhi.

3. a. ***Monitoring of Beneficiary Oriented Schemes for Women.***

   b. ***Mahila Samuriddi Yojana*** (MSY,1993).

   c. ***National Credit Fund for Women*** (1993).

   d. ***Reservation for Women in Grassroot level Democratic Institutions*** (1993).

4. a. *DWCRA* (1982-83).

   b. *IRDP* (1978-79).

   c. *NREP* (1952-53).

Bibliography

Abhijit, Sen. (1996)"Economic Reforms Employment and Poverty Trends and Option",'*Economic and Political Weekly* **(EPW),**Vol.31, No.3-37 pp.245-77

Ahmed, Sahid. (1996) "Economic Liberalisation and Agricultural Sector: -Problems and Prospects", ***Southern Economist***, Vol.35, No.1 pp.1-28.

Agarwal, Bina. (1995) "Natural Resources Femist Environmenatlim? or Ecofemisim", ***The Hindu Survey of the Environment 1995*** pp.1-14.

Altekar, A.S.(1962) ***The Position of Women in Hindu Civilization***, Motilal Banarasidias, Delhi

.Andiappan, P.(1980) ***Women and Work: A Comparitive Study of Sex Discrimination in Employment in India and U.S.A***. Bombay Somaiya Publications.

Anitha, N.H. (1960) ***"Health and Panchatyi Raj", Seminar,*** Vol.443, pp.1-16.

Aram, M.(1989) ***"Micro Planning at Village"***, National Institute of Educational Planning and Administration, Delhi.

Arunkumar, A.V.(1996) "Modern small Industry in Karnataka growth", ***EPW,*** Vol.31,No.21, pp.1-21.

Azim, Saukath. (1997) ***Muslim Women: Emerging Identity***, Rawat, Jaipur.

Baig, T.A. (1976) ***Indias Women Power,***S.Chand & Co., New Delhi.

Bahattacharjee, P.J.(1996) " Population and Social Economic Development", ***Southern Economist,*** Vol.34,No.17,pp.1-20.

Bhatia, S.C.(1986) ***"Population Education in Higher Education"*** University of Delhi,Delhi.

Balakrishna,R.(1968) ***"Economic Development In India***" Kanrnataka University, Dharwad

Banik, Arindam. (1994) "Farm Size factor Productivity and Returns to scale under Different types of Water Mangement", *EPW,*Vol.29, No.53,pp.17-89.

Bandyapdhyay, Retha.(1993) "Land System in India: A Historical Review", ***EPW***, Vol.28, No.52, pp.14-55.

Basavaraja, B. & Yeledh halli, R.A..(1990) "Agricultural Business and New Policy", ***Southern Economist,*** Vol.35, No.1,pp.2-27.

Breman, Jan. (1993) ***Beyond Partronage and Exploitation***, Oxford, Delhi.

Chandra Kumar, Nirmal. (1995) "Labour has Nothing to Gain", ***Seminar***, Vol.429 ,pp.1-24.

Chandrashekar,`K.(1996) ``Effect of Urban Rural Economic Growth and Poverty", ***Southern Economist,*** Vol.34, No.19, pp.-7.

Dasgupta, Ranjit. (1996) "Indian Working Class and Some Recent Historioghical Issues", ***EPW,*** Vol.34, No.8, pp.2-31.

District Census Hand Book 1991,Directorate of Census Operations Karnataka.

Fourth World Conference on Women, Beijing 1995, Committe Report, Department of Women and Child Development, GOI.

Hanumanth Rao, C.H.(1994) "Indian Agriculture Emerging Perspective and Policy Issues", ***EPW,*** Vol.29, NO.1-17,pp.100-10.

Human Development Report, 1995, U.N.D.P

Interstate Economic Indicators 1991 Plan, Finance and Resource Division. Planning Department, Bangalore.

Meti, T.K.(1971) ***Economic Developement and Social Change in Mysore State,*** Karnataka University, Dharwad

Murli Manahor, K.(ed) (1984) ***Women's Status and Development in India***, Society for Women's Studies and Development,Warangal.

Omvedt, Gail. (1994) ***Dalits and the Democratic Revolution,*** Sage, New Delhi.

Prasd, S.S.(1988) ***Tribal Women Labours: Aspects of Economic of Labour in India,*** Oxford, Bombay.

Rajasekhariah, A.M.(ed) (1988) ***Planned Economic Development and The Developmental Programmes for Weaker Sections in Karnataka,*** Prasaranga, Karnataka Unviersity, Dharwad

Ramanjaneyalu and Janardana. (1997) "Labour Participation in The Economic Development of Karnataka", ***Southern Economist,*** Vol.36, pp.2-24.

Robb, Peter .(1993) (et.al) ***Dalit Movements and the Meaning of Labour in India,*** Oxford, Bombay

Seshadri,B. (1991) ***Industrilisation and Regional Development,*** Concept, New Delhi.

ಅನುಪಮಾ, ನಿರಂಜನ. (೧೯೯೫) \`ದುಡಿಯುವ ಮಹಿಳೆ', **ಸಾಧನೆ,** ಸಂಪುಟ:೪ ಸಂಚಿಕೆ:೪ ಬೆಂಗಳೂರು ವಿಶ್ವವಿದ್ಯಾಲಯ.

ಆರಿಝೀಮ್, ಶೌಕತ್ .(೧೯೯೭) \`ಬಡತನ ಲಿಂಗೀಕರಣ ಮತ್ತು ಕೃಷಿ', ಸಂ:೧ ಸಂ:೧ ***ಬಿಸಿಲ ಬದುಕು,*** ಅಂಕುರ ಪ್ರಕಾಶನ, ಬೆಂಗಳೂರು.

ಅನಂತರಾಮಯ್ಯ, ಎನ್ .(೧೯೯೩) **\`ಭಾರತದ ಗ್ರಾಮೀಣಾಭಿವೃದ್ಧಿ ಒಂದು ವಿಮರ್ಶೆ',** ಅಂಬುಜ ಪ್ರಕಾಶನ, ಬೆಂಗಳೂರು.

ಅನ್ನಪೂರ್ಣ, ಫ.ಹೂಗಾರ್ .(೧೯೯೦) \`ಮಹಿಳೆ ಮತ್ತು ಸಮಾಜ', **ಕರ್ನಾಟಕ ಭಾರತಿ,** ಸಂ ೨೨, ಸಂ:೩

ಆನಂದ, ಹಣಮಂತಗಡ.ಮತ್ತು ರಾಜೇಂದ್ರ ಪಾಟೀಲ್ .(೧೯೯೨) \`ಗ್ರಾಮೀಣ ಜೀವನಾವಶ್ಯಕತೆಗಳ ಸಮೀಕ್ಷೆ ಹಾಗೂ ಯೋಜನೆ', **ಕನ್ನಡ ಅಧ್ಯಯನ,** ಸಂ:೩ ಸಂ:೧

ಇಂದಿರಾ, ಆರ್. (೧೯೯೫) **ಸ್ತ್ರೀವಾದಿ ದಿಕ್ಸೂಚಿ,** ಸಮತಾ ಅಧ್ಯಯನ ಕೇಂದ್ರ, ಮೈಸೂರು.

ಕಮಲಾದೇವಿ, ಚಟ್ಟೋಪಾಧ್ಯಾಯ.(೧೯೮೪) **\`ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ'**,ಅನು:ವೈದೇಹಿ, ಅಕ್ಷರ ಪ್ರಕಾಶನ, ಹೆಗ್ಗೋಡು

ಕಪಾಡಿಯಾ, ಕೆ.ಎಂ.(೧೯೭೮) **\`ಭಾರತದಲ್ಲಿ ವಿವಾಹ ಮತ್ತು ಕುಟುಂಬ'**, (ಅನು) ಮಹೇಶ್ವರಪ್ಪ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಗಾಯತ್ರಿ, ಎನ್ .(೧೯೯೧)**\`ಮಹಿಳೆ ಬಿಡುಗಡೆ ಹಾದಿಯಲ್ಲಿ'**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಗೀತಾ, ಕುಲಕರ್ಣಿ. (೧೯೮೨) **\`ಮಹರ್ಷಿ ಕರ್ವೆ'**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಚಂದ್ರಶೇಖರ್ ,ಟಿ.ಆರ್ .(೧೯೯೫) \`ಕರ್ನಾಟಕದ ಆರ್ಥಿಕ ಭವಿಷ್ಯ', **ಕನ್ನಡ ಅಧ್ಯಯನ,** ಸಂ:೩ ಸಂ:೧ ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಚಂದ್ರಶೇಖರ್, ಟಿ.ಆರ್. (೧೯೯೪) ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಸಿದ್ಧ ವೀರಶಿವಾಚಾರ್ಯ ಜ್ಞಾನ ಪ್ರಕಾಶನ, ಪುರ.

ಚಂದ್ರಶೇಖರ್, ಟಿ.ಆರ್. (೧೯೯೫) `ಅಭಿವೃದ್ಧಿ ಮೀಮಾಂಸೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ `ಅಚಲ'ದ ಕೆಲವು ಸಂಚಿಕೆಗಳು.

ಪೂರ್ಣಿಮಾ,ಆರ್ . (೧೯೭೫) `ಮಹಿಳೆಯನ್ನು ಕುರಿತು', ಸಾಧನೆ, ಸಂ.೪,ಸಂ.೪, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಮದುಕೇಶ್ವರ್ .(೧೯೯೭) `ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ', (ಅನು)ಹೇಮಲತಾ ಎಚ್. ಎಂ. ಸಮತಾ ಅಧ್ಯಾಯನ ಕೇಂದ್ರ, ಮೈಸೂರು.

`ಮಾನಸ' ತಿಂಗಳ ಪತ್ರಿಕೆಗಳ ಆಯ್ದ ಕೆಲವು ಲೇಖನಗಳು.

ಎಂ. ನಂಜಮ್ಮಣ್ಣಿ.(೧೯೮೨)`ಭಾರತೀಯ ಸಾಮಾಜಿಕ ಸಂಸ್ಥೆಗಳು', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶ್ರೀನಿವಾಸ, ಎಂ.ಎನ್ .(೧೯೭೫)`ಭಾರತದಲ್ಲಿ ಸಾಮಾಜಿಕ ಬದಲಾವಣೆ ಮತ್ತು ಮಹಿಳೆ', ಸಾಧನೆ, ಸಂ.೪,ಸಂ.೪, ಬೆಂಗಳೂರು ವಿಶ್ವವಿದ್ಯಾಲಯ.

ಶ್ರೀಧರ,ಬಿ.(೧೯೭೩)`ಕೃಷಿ ನಿರುದ್ಯೋಗ', ಸಾಧನೆ. ಸಂ.೨,ಸಂ.೩. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.

ಶೇಷಾದ್ರಿ,ಬಿ.,ಚಂದ್ರಶೇಖರ್ ,ಟಿ.ಆರ್ .(೧೯೯೭) `ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ', ಬಿಸಿಲ ಬದುಕು, ಸಂ.೧,ಸಂ.೧, ಅಂಕುರ ಪ್ರಕಾಶನ, ಬೆಂಗಳೂರು.

ಶಾಂತಿ .(೧೯೮೫) ಸಂಪನ್ಮೂಲಗಳು ಮತ್ತು ಕೈಗಾರಿಕಾರಣಗಳು ಬಳ್ಳಾರಿ ಜಿಲ್ಲೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ವೀಣ, ಶಾಂತೇಶ್ವರ.(೧೯೯೩) `ಮಹಿಳಾ ಅಧ್ಯಾಯನ', ಪ್ರೊ. ಎಚ್. ವಿ. ನಾಗೇಶ ಅಭಿನಂದನಾ ಗ್ರಂಥ, ಧಾರವಾಡ.

ವಿಜಯಾ,ದಬ್ಬೆ.(೧೯೮೯) `ಮಹಿಳಾ ಸಾಹಿತ್ಯ ಸಮಾಜ', ರಚನ ಪ್ರಕಾಶನ, ಮೈಸೂರು.

ವಿಜಯಾ.(೧೯೭೫)`ಮಹಿಳೆಯಲ್ಲಿ ವೈಚಾರಿಕತೆ', ಸಾಧನೆ, ಸಂ.೯, ಸಂ.೩, ಬೆಂಗಳೂರು ವಿಶ್ವವಿದ್ಯಾಲಯ.

ವಿನೀತಾ,ಬಿ.ಪೈ .(೧೯೮೭) `ಮಹಿಳಾ ಕಾರ್ಮಿಕ ಹಕ್ಕುಗಳು', ಕರ್ನಾಟಕ ಭಾರತಿ, ಸಂ.೧೯, ಸಂ.೩, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ,ಧಾರವಾಡ.

ವೈದೇಹಿ .(೧೯೮೫) ಬೆಳ್ಳಿಯ ಸಂಕೋಲೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.

ಸರ್ದೇಸಾಯಿ, ಎಸ್ .ಜಿ.(೧೯೮೬) ಮಾರ್ಕ್ಸ್‌ವಾದ ಮತ್ತು ದುಡಿಯುವ ವರ್ಗದ ಪಾತ್ರ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಸರಸ್ವತೀ, ರಿಸಬೂಡ್. (೧೯೯೨) ಸ್ತ್ರೀ-ಪುರುಷ', ಇಳಾ ಪ್ರಕಾಶನ, ಬೆಂಗಳೂರು.